8 and Independents 13; the total time taken for the General Discussion on Budget is 38 hours 5 minutes; the Congress Members have taken 24 hours 5 minutes; the P. S. P. Members have taken 8 hours 55 minutes; and the Independent Members have taken 8 hours 5 minutes; in respect of debate on the Motion of Thanks on the Governor's Address, the Congress Members have taken 4 hours 30 minutes, Opposition Members have taken 6 hours 15 minutes; then in respect of Demands for Grants upto 5th April 1960, the total time taken for debate is 12 minutes 48 hours; out of that, the Congress has taken 7 hours 34 minutes and the Opposition has taken 5 hours 14 minutes; the P.S.P. has taken 2 hours 23 minutes and the Independents have taken 2 hours 51 minutes. 11 Congress Members have taken part in the discussion and 13 opposition Members have spoken. Out of the opposition, 6 are P.S.P and 7 are independents. The total time on all these items upto 5th April is 61 hours 38 minutes; out of that 33 hours 9 minutes were taken by the Congress, 28 hours 29 minutes are taken by the Opposition. I leave the Members to come to any conclusion they like.

Now, the House rises and will meet after half an hour.

The House adjourned for recess at Two of the Clock and re-assembled at Thirty Minutes past Two of the Clock.

[MR. SPEAKER in the Chair.]

*ಶ್ರೀ ಮಾಲಿ ಮರಿಯಪ್ಪ (ಸಹಕಾರ ಶಾಖೆಯ ಮಂತ್ರಿಗಳು).—ಸ್ವಾಮಿ, ಸಹಕಾರ ಇಲಾಖೆಯ ಬೇಡಿಕೆಯ ಸಂಬಂಧದಲ್ಲಿ ನಡೆದಂಥ ಚರ್ಚೆಯ ಕಾಲದಲ್ಲಿ ಈ ಸಭೆಯ ಮಾನ್ಯ ಸದಸ್ಯರು ಕೆಲವು ಉಪಯುಕ್ತವಾದ ಸಲಹೆಗಳನ್ನೂ ಮತ್ತು ಇನ್ನು ಕೆಲವರು ಕೆಲವು ಆಕ್ಷೇಪಣೆಗಳನ್ನೂ ಸಹ ಎತ್ತಿದ್ದಾರೆ ಚರ್ಚೆಯ ಕಾಲದಲ್ಲಿ ಆದಂಥ ಆಕ್ಷೇಪಣೆಗಳು ಸಾಮಾನ್ಯವಾಗಿ ಈ ಅಧಿವೇಶನದ ಹಿಂದಿನ ಚರ್ಚೆಯ ಕಾಲದಲ್ಲಿ ಎತ್ತಲ್ಪಟ್ಟಂಥ ಅನೇಕ ಅಂಶಗಳಾಗಿವೆ. ಆದ್ದರಿಂದ ನಾನು ತುಂಬಾ ವಿವರವಾದ ಜವಾಬನ್ನು ಕೊಡತಕ್ಕ ಅಗತ್ಯವಿಲ್ಲ. ಆದಾಗ್ಯೂ ಹೊಸದಾಗಿ ಎತ್ತಿರತಕ್ಕ ಕೆಲವು ಆಕ್ಷೇಪಣೆಗಳ ಸಂಬಂಧದಲ್ಲಿ ಮಾತ್ರ ಹಲವಾರು ವಿವರಣೆಗಳನ್ನು ಕೊಡಬೇಕೆಂದಿದ್ದೇನೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಕ್ಕೆ ವಿಶೇಷ ಮಹತ್ವವನ್ನು ಕೊಟ್ಟಿದ್ದಾರೆ. ಅದರಲ್ಲೂ ಎರಡನೇ ಪಂಚವಾರ್ಷಿಕ ಯೋಜನೆಯ ಮೂರನೆಯ ವರ್ಷದಲ್ಲಿ ಇನ್ನೂ ಹೆಚ್ಚಿನ ಪಾತ್ರವನ್ನು ಸಹಕಾರ ಇಲಾಖೆಯು ವಹಿಸಬೇಕೆಂಬ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಅದಕ್ಕನುಗುಣವಾಗಿ ನಮ್ಮ ಸಂಸ್ಥಾನವೂ ಹೊಸ ಹೊಸ ಯೋಜನೆಗಳನ್ನು ಹಾಕಿ ಕೊಂಡು ಅವುಗಳನ್ನು ಕಾರ್ಯಗತ ಮಾಡುತ್ತಿದೆ. ಈಗಾಗಲೇ ನಮ್ಮ ಸಂಸ್ಥಾನದಲ್ಲಿ ಸುಮಾರು 13 ಸಾವಿರ ಬೇರೆ ಬೇರೆ ರೀತಿಯ ಮತ್ತು ಬೇರೆ ಬೇರೆ ಉದ್ದೇಶಗಳ ಸಾಧನೆ ಹೊಂದಿದ ಸಹಕಾರ ಸಂಘಗಳು ಇವೆ. ಅವುಗಳಲ್ಲಿ ಸುಮಾರು 7 ಸಾವಿರ ಚಿಲ್ಲರೆ ಸಂಘಗಳು ವ್ಯವಸಾಯಗಾರರಿಗೆ ಉಪಯುಕ್ತವಾದ ಸಾಲದ ಸೌಲಭ್ಯ ಹಾಗೂ ವ್ಯವಸಾಯದ ವೃತ್ತಿಗೆ ಬೇಕಾದಂಥ ಸಾಮಾನುಗಳನ್ನು ಒದಗಿಸತಕ್ಕಂಥ ಕಾರ್ಯಗಳಲ್ಲಿ ನಿರತವಾಗಿವೆ. ಹಿಂದೆ ಹೇಳಿದಂತೆ ಅಲ್ಪಾವಧಿ ಮಧ್ಯಮಾವಧಿ ಮತ್ತು ದೀರ್ಘಾವಧಿ, ಇತ್ಯಾದಿ ಸಾಲಗಳನ್ನು ಈಗ ಸುಮಾರು 3—4 ವರ್ಷಗಳಲ್ಲಿ ಬಹಳ ಅಧಿಕ ಪ್ರಮಾಣದಲ್ಲಿ ರೈತಾಪಿ ಜನಗಳಿಗೆ ಹಂಚತಕ್ಕದ್ದು ಮತ್ತು ಅದನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡತಕ್ಕದ್ದು ಇವು ಬಹಳ ಚೆನ್ನಾಗಿ ನಡೆದುಕೊಂಡು ಬಂದಿವೆ. ಹತ್ತಿರ ಹತ್ತಿರ ಸುಮಾರು 12 ಕೋಟಿ ರೂಪಾಯಿಗಳಷ್ಟು ರೈತನಿಗೆ ಅಗತ್ಯವಾದ ಸಾಲದ ಸೌಲಭ್ಯಗಳನ್ನು ಈ ಸಹಕಾರ ಸಂಘಗಳು ಒದಗಿಸಿವೆ. ಮತ್ತು ವಸೂಲಿ ಸಹ ಬಹಳ ಮಟ್ಟಿಗೆ ಎಂದರೆ 90ರಿಂದ 95ರ ವರೆಗೂ ಏರಿದೆ. ಈ ಅಂಶಗಳನ್ನು ಬಹಳ ಸ್ಪಷ್ಟವಾದ ಸೂಚನೆ ಮಾಡದೆ ಸಹಕಾರ ಸಂಘಗಳು, ಅವುಗಳ ಉದ್ದೇಶವನ್ನು ಚೆನ್ನಾಗಿ ನೆರವೇರಿಸುತ್ತಿವೆ ಎಂದು ಮಾತ್ರ ಹೇಳುತ್ತೇನೆ.

ಈ ಸಂಬಂಧವಲ್ಲಿ ತೆಗೆದು ಕೊಂಡಂತಹ ಸಾಲದ ಮೊತ್ತ ಯಾವ ಉದ್ದೇಶಕ್ಕಾಗಿ ತೆಗೆದುಕೊಳ್ಳಲಾಗಿತ್ತೋ ಆ ಉದ್ದೇಶಕ್ಕಾಗಿ ವಿನಿಯೋಗ ವಾಗುತ್ತಿಲ್ಲ ಎನ್ನತಕ್ಕ ಒಂದು ಆಕ್ಷೇಪಣೆಯನ್ನು ಕೆಲವರು ಎತ್ತಿದ್ದಾರೆ. ಬಹಳ ವಿಸ್ತಾರವಾಗಿ ನಡೆಯುತ್ತಇರತಕ್ಕ ವ್ಯವಹಾರದಲ್ಲಿ ಶೇಕಡವಾರು ಲೆಕ್ಕ ಹಾಕಿಕೊಂಡರೆ, ಆ ರೀತಿ ಬೇರೆ ಉದ್ದೇಶಕ್ಕಾಗಿ ಹಣವನ್ನು ಖರ್ಚು ಮಾಡಿರತಕ್ಕದ್ದು ತೀರಾ ಕಡಮೆ. ಆದುದರಿಂದ ಮಾನ್ಯ ಸದಸ್ಯರು ಆಕ್ಷೇಪಣೆ ಮಾಡತಕ್ಕ ಪ್ರಮಾಣದಲ್ಲಿಲ್ಲ ಎನ್ನುವ ಒಂದು ವಿಷಯವನ್ನು ನಾನು ಹೇಳುತ್ತೇನೆ. ಆದರೂ ಸಹ ಆಡಳಿತ ವರ್ಗದವರು ಜಿಲ್ಲಾ ಬ್ಯಾಂಕಿನವರು ಸಾಕಷ್ಟು ಉಸ್ತುವಾರಿ ಇಟ್ಟುಕೊಂಡು ದುಡ್ಡನ್ನು ಹಂಚಲು ಸಾಧ್ಯವಿದೆ. ಈ ಬಗ್ಗೆ ಸಾಕಷ್ಟು ಶ್ರಮ ವಹಿಸಿ ಜಿಲ್ಲಾ ಬ್ಯಾಂಕಿನವರು, ಪ್ರೈಮರಿ ಸೊಸೈಟಿಗಳವರು ಬಹಳ ಶ್ರದ್ಧೆ ವಹಿಸುತ್ತಿದ್ದಾರೆ, ಸಾಲದ ಸೌಲಭ್ಯಕ್ಕಾಗಿ ಕೊಡುವ ಮುಖ್ಯ ಉದ್ದೇಶ ಅಗತ್ಯವಾಗಿ ರೈತರಿಗೆ ಬೇಕಾಗುವ ಕಬ್ಬಿಣ, ಗೊಬ್ಬರ, ಬೀಜುವರಿ ಇತ್ಯಾದಿ ಸಾಮಾನುಗಳನ್ನು ಒದಗಿಸತಕ್ಕ ಕೆಲಸವನ್ನು ಅನೇಕ ಸೊಸೈಟಿಗಳವರು ಬಹಳ ಸಮರ್ಪಕವಾಗಿ ಮಾಡುತ್ತಿದ್ದಾರೆ. ಕಬ್ಬಿಣದ ಸಾಮಾನುಗಳು ಸಾಕಷ್ಟು ಸಿಗುತ್ತಿಲ್ಲ ಎನ್ನುವುದು ನಾವೆಲ್ಲರೂ ಒಪ್ಪಿಕೊಳ್ಳಬೇಕಾದ ಅಂಶ. ಸುಮಾರು ಇನ್ನೆರಡು ವರ್ಷಗಳೊಳಗಾಗಿ ಈ ಪರಿಸ್ಥಿತಿ ಬಹಳ ಸುಧಾರಿಸುತ್ತದೆ ಎಂದು ಭಾವಿಸುತ್ತೇನೆ. ಹಾಗೇ ಗೊಬ್ಬರದಪರಿಸ್ಥಿತಿ ಎಂದರೆ "ಅಮೋನಿಯಂ ಸಲ್'

(ಶ್ರೀ ಮಾಲಿ ಮರಿಯಪ್ಪ)

ಫೇಟು'' ಕೆಲವು ಕಾಲದವರೆಗೆ ಅಷ್ಟು ಸುಧಾರಿಸಿ ಮುಂದುವರಿಯಲಾರದು ಮತ್ತು ಇದರ ಹಂಚಿಕೆಯ ವಿಷಯದಲ್ಲಿ ಅಲ್ಲಲ್ಲಿ ಸ್ವಲ್ಪ ತೊಂದರೆಗಳಾಗಿವೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ವಿರೋಧಪಕ್ಷದ ನಾಯಕರಾದ ಶ್ರೀ ಶ್ರೀನಿವಾಸ ಶೆಟ್ಟಿಯವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರ ಸಂಘಗಳಿಂದ ಗೊಬ್ಬರದ ಹಂಚಿಕೆ ಸರಿಯಾಗಿ ನಡೆಯುತ್ತಿಲ್ಲ ಎನ್ನುವ ಅಂಶವನ್ನು ಹೇಳಿದ್ದಾರೆ. ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ಕಬ್ಬಿಣ ಮತ್ತು ಗೊಬ್ಬರದ ಹಂಚಿಕೆಯನ್ನು ಮಂಗಳೂರಿನ ಸೇಲ್ಸ್ ಸೊಸೈಟಿಯವರು ಹಂಚಿಕೆ ವ್ಯವಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹೋದ ವರ್ಷದಲ್ಲಿ 3000 ಚಿಲ್ಲರೆ ಟನ್ನುಗಳಷ್ಟು ಗೊಬ್ಬರವನ್ನು ಈ ಸೊಸೈಟಿಯ ಮೂಲಕ ಆ ಜಿಲ್ಲೆಗೆ ಹಂಚಿದ್ದಾರೆ. ಬಹುಶಃ ಬೇರೆ ಬೇರೆ ಜಿಲ್ಲೆಗಳ ಲೆಕ್ಕವನ್ನು ನೋಡಿದರೆ ಯುಕ್ತವಾಗಿ ಗೊಬ್ಬರವನ್ನು, ಕೊಟ್ಟಿರುವ ಪರಿಮಿತಿಯಲ್ಲೇ ಸಾರ್ವಜನಿಕರು ಉಪಯೋಗ ಮಾಡಿದ್ದಾರೆ. ಹಂಚಿಕೆಯಲ್ಲಿ ಲೋಪದೋಷಗಳಿವೆ ಎನ್ನುವ ಅಂಶವನ್ನು ಹೇಳಿದ್ದಾರೆ. ಬಹುಶಃ ಈ ಅಂಶಗಳನ್ನೆಲ್ಲಾ ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ಬಂದಾಗ ಸಂಬಂಧಪಟ್ಟ ಇಲಾಖೆಯವರಿಗಾಗಲೀ ಅಥವಾ ನನ್ನ ಗಮನಕ್ಕಾಗಲಿ ತಂದಿದ್ದರೆ ಅದನ್ನು ಸರಿಪಡಿಸಬಹುದಾಗಿತ್ತು. ಆದರೆ ಅಂತಹ ಆಕ್ಷೇಪಣೆಗಳು ಇಲಾಖೆಯಲ್ಲಾಗಲೀ ನನಗಾಗಲೀ ಬಂದಿಲ್ಲ. ಬಂದಿದ್ದರೆ ಅದನ್ನು ಸರಿಪಡಿಸಲು ಪ್ರಯತ್ನ ಮಾಡಬಹುದಾಗಿತ್ತು. ಹಾಗೇ ಶ್ರೀನಿವಾಸಪುರದ ತಾಲ್ಲೂಕಿನಲ್ಲಿ ಕಬ್ಬಿಣದ ಗುಳವಿಲ್ಲ ಎನ್ನುವ ಆಕ್ಷೇಪಣೆಯನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ನಾರಾಯಣಸ್ವಾಮಿಯವರು ಹೇಳಿದರು. ನನಗೆ ಶ್ರೀಮಾನ್ ನಾರಾಯಣಸ್ವಾಮಿಯವರು ಬಹಳ ಹಳೆಯ ಪರಿಚಯಸ್ಥರಾದವರು. ನಾನು ಶ್ರೀನಿವಾಸಪುರಕ್ಕೆ ಎರಡುಸಾರಿ ಹೋಗಿದ್ದೆ. ಎರಡುಬಾರಿ ಹೋದಾಗ್ಲೂ ಸಹ ಆ ತಾಲ್ಲೂಕಿನಲ್ಲಿರತಕ್ಕ ತಾಲ್ಲೂಕು ಮಲ್ಟಿ ಪರ್ಪಸ್ ಕೋಆಪರೇಟಿವ್ ಸೊಸೈಟಿ ಮತ್ತು ಮಾರ್ಕೆಟಿಂಗ್ ಕೋಆಪರೇಟಿವ್ ಸಂಸ್ಥೆ, ಇವೆರಡನ್ನು ನೋಡಿಕೊಂಡು ಬಂದಿದ್ದೇನೆ. ಆದರೆ ನಾನು ಹೋಗಿದ್ದಾಗ ಅಲ್ಲಿ ಸಾಕಷ್ಟು ಕಬ್ಬಿಣದ ಸ್ಟಾಕು ಇತ್ತು ಮತ್ತು ಗೊಬ್ಬರದ ಸ್ಟಾಕೂ ಇತ್ತು. ಆದರೆ ನಾನು ಹೋಗಿದ್ದಂತಹ ಕಾಲದಲ್ಲಿ ಆ ತಾಲ್ಲೂಕಿನ ಜನರು ಎಷ್ಟೋ ಜನರು ಬಂದಿದ್ದರು ಮತ್ತು ಅವರು ಕಬ್ಬಿಣದ ಗುಳವಿಲ್ಲ ಎನ್ನುವ ಆಕ್ಷೇಪಣೆಯನ್ನು ಎತ್ತಲಿಲ್ಲ. ಆದರೂ ಶ್ರೀಮಾನ್ ನಾರಾಯಣಸ್ವಾಮಿಯವರು ಪರಿಚಯಸ್ಥರಾಗಿದ್ದುದರಿಂದ ಈ ವಿಚಾರವನ್ನು ಅನೇಕರೂಪದಲ್ಲಿ ನನಗೆ ತಿಳಿಸಬಹುದಾಗಿತ್ತು. ಹಾಗೆ ತಿಳಿಸಲಿಲ್ಲ. ಎರಡುಸಾರಿ ಹೋಗಿದ್ದಾಗಲೂ ಅಲ್ಲಿನ ತಾಲ್ಲೂಕಿನ ಜನಗಳೂ ಹೇಳಲಿಲ್ಲ, ಏಕಾ ಏಕಿ ಇಲ್ಲಿ ಆಕ್ಷೇಪಣೆಗಳನ್ನು ಎತ್ತಿದ್ದಾರೆ ಎನ್ನುವ ಒಂದು ಮಾತನ್ನು ಮಾತ್ರ ಇಲ್ಲಿ ತಿಳಿಸಬೇಕಾಗಿದೆ. ಅಂತಹ ವಿಚಾರಗಳನ್ನು ಶ್ರೀಮಾನ್ ನಾರಾಯಣಸ್ವಾಮಿಯವರು ತಿಳಿಸಿದರೆ ಮುಂದೆ ಸರಿಪಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಮಂತ್ರಿಗಳು ಬಂದ ಕಾಲದಲ್ಲಿ ಸ್ಟಾಕಿತ್ತು ಎಂದರೆ ಸದಾ ಕಾಲದಲ್ಲಿಯೂ ಇದ್ದಂತಾಗುವುದಿಲ್ಲ. ನಾವು ಹೇಳುವುದನ್ನು ತಾವು ಸ್ವಲ್ಪ ನಂಬಿ ವಾಸ್ತವಾಂಶಗಳನ್ನು ಕಂಡುಕೊಳ್ಳಬೇಕು. ನಾನು ಬಹಳ ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ನಿಮ್ಮ ಮಾತಿಗೆ ಪಕ್ಷದ ವ್ಯಾಮೋಹದ ಅಡ್ಡಿಯುಂಟಾಗಿರುತ್ತದೆ. ಆ ಮಮತೆ ಯಾವ ಪರ್ಯಂತ ಹಾಗಿರುತ್ತದೋ ಅಲ್ಲಿಯವರೆಗೆ ಆಡಳಿತ ಹೀಗೆಯೇ ಇರುತ್ತದೆ.

ಶ್ರೀ ಮಾಲಿ ಮರಿಯಪ್ಪ.—ಈ ಬಗ್ಗೆ ನಾನು ಹೆಚ್ಚು ವಿವರವಾದ ಉತ್ತರ ಹೇಳತಕ್ಕ ಗೋಜಿಗೆ ಸಹ ಹೋಗುವುದಿಲ್ಲ. ನಾನು ಹೋದಾಗಲೂ ಮಾನ್ಯ ಸದಸ್ಯರು ಅಲ್ಲಿ ಬಂದು ನೋಡಲಿಲ್ಲ ಮತ್ತು ಅನೇಕ ನೆರೆದಿದ್ದ ಜನರೂ ಕೂಡ ಈ ವಿಚಾರವನ್ನು ಹೇಳಲಿಲ್ಲವಲ್ಲಾ ಎನ್ನುವ ಎರಡು ಅಂಶವನ್ನು ಮಾತ್ರ ಹೇಳಿದ್ದೇನೆ. ಇದರ ಬಗ್ಗೆ ಮಾನ್ಯ ಸದಸ್ಯರೆಲ್ಲ ಪರಿಶೀಲನೆ ಮಾಡಿಕೊಳ್ಳಬಹುದು. ಆದುದರಿಂದ ನಾನು ಹೇಳತಕ್ಕದ್ದು ಸಾಮಾನ್ಯವಾಗಿ ಸ್ಟಾಕುಗಳಿದ್ದರೂ ಅಲ್ಲಿ ಬೇರೆ ಯಾವ ಆಕ್ಷೇಪಣೆಗಳೂ ಬರಲಿಲ್ಲ ಎನ್ನುವ ಅಂಶವನ್ನು ಮಾತ್ರ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಸೊಸೈಟಿಯ ಆಡಳಿತವನ್ನು ನಡೆಸುವುದಕ್ಕೆ ಸಾಮಾನ್ಯವಾಗಿ ಜವಾಬ್ದಾರಿ ಇರತಕ್ಕ ಸಾರ್ವಜನಿಕರಿಗೆ ವಹಿಸಬಹುದು ಎಂದು ಅನೇಕ ಸಂದರ್ಭಗಳಲ್ಲಿ ಸ್ಪಷ್ಟಪಡಿಸಿದ್ದೇನೆ. ಪ್ರಜಾಪ್ರಭುತ್ವದ ಒಂದು ವ್ಯವಸ್ಥೆಯನ್ನು ಸಹಕಾರ ಸಂಘಗಳಿಗೂ ಅನ್ವಯಿಸಿಕೊಂಡು ನಡೆಸಿಕೊಂಡು ಹೋಗಬೇಕೆನ್ನುವ ತತ್ವವನ್ನು ನಾವು ಅನುಸರಿಸಿಕೊಂಡು ಅದರ ಪ್ರಕಾರ ನಡೆಸುವಾಗ ಎಷ್ಟು ಕಷ್ಟಗಳು ಬಂದರೂ ಅದನ್ನು ಪರಿಹರಿಸಿಕೊಂಡು ಆಡಳಿತವನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಸಾಮಾನ್ಯವಾಗಿ Large Sized Societies ಗಳಲ್ಲಿ ಮಾತ್ರ ಮೊದಲ ಎರಡು ವರ್ಷಗಳಲ್ಲಿ ನಾಮಿನೇಷನ್ನು, ಡಿಪಾರ್ಟುಮೆಂಟಿನವರು ಮಾಡುತ್ತಾರೆ. ಎರಡನೆಯ ವರ್ಷದಿಂದ ನಾಮಿನೇಷನ್ನನ್ನು ಮಾಡುವುದಕ್ಕೆ ಜನರಲ್ ಬಾಡಿಯಲ್ಲಿ ಮಾಡಿರುವ ಬೈಲಾ ಪ್ರಕಾರ ಒಪ್ಪಿಕೊಂಡಿದ್ದರೆ ರಿಜಿಸ್ಟ್ರಾರವರು ನಾಮಿನೇಷನ್ನನ್ನು ಮಾಡುತ್ತಾರೆ. ಎರಡು ವರ್ಷಗಳ ತರುವಾಯ ಯಾವುದೇ ಕಾಲಕ್ಕೂ ಪುನಃ ನಾಮಿನೇಷನ್ನನ್ನು ಮಾಡುವುದಕ್ಕಾಗುವುದಿಲ್ಲ. Large Sized Societies ಗಳಲ್ಲಿ ನಾಮನೇಷನ್ನಿರತಕ್ಕದ್ದು ಎರಡು ವರ್ಷಗಳಕಾಲ ಮಾತ್ರ. ಹಾಗೇಯೆ ತಾಲ್ಲೂಕು ಕೋಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿಯೂ ಎರಡು ವರ್ಷಗಳಕಾಲ ಮಾತ್ರ ನಾಮಿನೇಷನ್ನುಗಳನ್ನು ಸರಕಾರದವರು ಮಾಡುತ್ತಾರೆ. ಮೊದಲನೆ ಎರಡು ವರ್ಷಗಳಾದ ಮೇಲೆ ಚುನಾವಣೆಯಾಗುತ್ತದೆ ಎನ್ನುವುದು ತಮಗೆಲ್ಲ ಗೊತ್ತಿರುವ ವಿಷಯ. ಜಿಲ್ಲಾ ಬ್ಯಾಂಕುಗಳೊಳಗೆ ಎರಡು ವರ್ಷಗಳಕಾಲ ನಾಮಿನೇಷರ್ ಮಾಡುವುದು ಹಳೆಯ ಮೈಸೂರಿನ ಭಾಗಗಳಲ್ಲಿತ್ತು. ಬೇರೆ ಪ್ರದೇಶಗಳಲ್ಲಿ ಚುನಾವಣೆಗಳ ಮೂಲಕ ಜಿಲ್ಲಾ ಬ್ಯಾಂಕಿನ ಆಡಳಿತ ನಡೆದುಕೊಂಡು ಹೋಗುತ್ತಿತ್ತು. ಹಾಗೇ ಅಪೆಕ್ಸ್ ಬ್ಯಾಂಕು, ಲ್ಯಾಂಡು ಮಾರ್ಗೇಜು ಬ್ಯಾಂಕು, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿಯೂ ಈಗ ಚುನಾವಣೆಯಮೂಲಕ ನಡೆಯುತ್ತಿದೆ. ಇದಕ್ಕಿಂತ ಜಾಸ್ತಿಯಾಗಿ ಅಪೆಕ್ಸ್ ಬ್ಯಾಂಕಿಗೆ ನಾಮನೇಷನ್ನು ಇರುವುದಿಲ್ಲ. ಆ ರೀತಿ ಜಿಲ್ಲಾ ಮಟ್ಟದಲ್ಲಿನ ಬ್ಯಾಂಕುಗಳೊಳಗೂ ಎರಡು ನಾಮನೇಷನ್ನು ಮತ್ತು ಕೇಂದ್ರದ ಮಟ್ಟದಲ್ಲಿ ಇರತಕ್ಕ ಅಪೆಕ್ಸ್ ಸೊಸೈಟಿಗಳಲ್ಲಿ ಇದಕ್ಕಿಂತ ಹೆಚ್ಚಿನ ನಾಮನೇಷನ್ನು ಇಲ್ಲ. ಕೆಲವು ಕೋಅಪರೇಟಿವ್ ಸೊಸೈಟಿಗಳಲ್ಲಿ ಸುಮಾರು 20ರಷ್ಟು ಡೈರೆಕ್ಟರುಗಳನ್ನು ಹೊಂದಿರುವುದರಿಂದ ಅಲ್ಲಿ ನಾಮನೇಷನ್ನಿರಕೂಡದು ಎಂದು ಇದೆ. ಒದಗಿಸಿರತಕ್ಕ ಷೇರು ಬಂಡವಾಳ ಅದರ ಗ್ಯಾರಂಟಿಗೋಸ್ಕರ

ಸರಕಾರದಿಂದ ಹಣವನ್ನು ಕೊಡುವುದಕ್ಕೆ ಮಾತ್ರ ಕೆಲವರನ್ನು ಬಹಳ ಅಲ್ಪ ಸಂಖ್ಯೆಯಲ್ಲಿ ನಾಮನೇಷನ್ನನ್ನು ಮಾಡುವ ಪದ್ಧತಿ ಇದೆ.

ಇನ್ನು ನಾಮಿನೇಷನ್ ಮಾಡುವಾಗಲೂ ಸಹ ಸಹಕಾರದಲ್ಲಿ ಒಂದು ನಂಬಿಕೆ ಮತ್ತು ಒಂದು ಶ್ರದ್ಧೆ ಇರತಕ್ಕವರನ್ನು ನಾಮಿನೇಟ್ ಮಾಡಬೇಕಾಗುತ್ತದೆ. ಇದನ್ನೆಲ್ಲಾ ತಮ್ಮ ಪಾರ್ಟಿಯ ಪ್ರಾಶಸ್ತ್ಯವನ್ನು ಹೆಚ್ಚುಮಾಡಿಕೊಳ್ಳುವ ಉದ್ದೇಶದಿಂದ ಮಾಡುತ್ತಾರೆಂದು ಹೇಳಿದ್ದು ಅಷ್ಟು ಸರಿಯಾದುದಲ್ಲ ಮತ್ತು ನ್ಯಾಯವಾದುದಲ್ಲವೆಂಬ ಅಂಶವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈಗ ಒಂದು ಅಂಶವನ್ನು ಹೇಳುವುದಾದರೆ, ನಾಮಿನೇಷನ್ ಮಾಡಿದಂತಹವರು ಏನು ಗುರುತರವಾದ ತಪ್ಪುಗಳನ್ನು ಮಾಡಿದರು ಮಟ್ಟಿದರು, ಎಂಬ ಅಂಶಗಳ ಕಡೆಗೆ ಯಾರೂ ಗಮನ ಕೊಟ್ಟಿಲ್ಲವೆಂದು ಹೇಳಬೇಕಾಗಿದೆ. ಖಂಡಿತವಾಗಿ ಇದಕ್ಕೆ ನಾಮಿನೇಷನ್ ಮಾಡಿರುವುದು ಸರಿಯಲ್ಲ; ಒಂದು ಪಕ್ಷಕ್ಕೇನೇ ರಾಜಕೀಯ ಹಿನ್ನೆಲೆ ಇಟ್ಟುಕೊಂಡು ಇದನ್ನು ಮಾಡಿದ್ದಾರೆನ್ನುವ ಆಕ್ಷೇಪಣೆಯೊಂದನ್ನು ಬಿಟ್ಟರೆ ಮತ್ತೆ ಬೇರೆ ಯಾವುದೂ ಇಲ್ಲ. ನಾಮಿನೇಟೆಡ್ ಸೊಸೈಟಿಗಳಲ್ಲಿ ಏನೇನು ವ್ಯತ್ಯಾಸಗಳಾಗಿವೆ ಎಂಬುದನ್ನು ಹೇಳುವ ಸಂದರ್ಭವೂ ಇಲ್ಲ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಈ ಸಾರಿ ನಿಮ್ಮ ಪಕ್ಷ ಬಿಟ್ಟು ಬೇರೆ ಯಾರೊಬ್ಬರನ್ನಾದರೂ ನಾಮಿನೇಟ್ ಮಾಡಿದ್ದೀರಾ ?

ಶ್ರೀ ಮಾಲ ಮರಿಯಪ್ಪ.—ಮಾಡಿದ್ದೇವೆ. ಮಾನ್ಯ ಸದಸ್ಯರು ಆ ಪಟ್ಟಿಯನ್ನು ಪರಿಶೀಲನೆ ಮಾಡಿ ಮಾತನಾಡಲಿಲ್ಲವೆಂದು ನನಗೆ ತೋರುತ್ತದೆ. ವಿರೋಧ ಪಕ್ಷದ ನಾಯಕರು ಅಂಕಿ ಅಂಶಗಳನ್ನು ಎದುರಿಗೆ ಇಟ್ಟುಕೊಂಡು ಮಾತನಾಡಿದರೆ ಒಳ್ಳೆಯದು.

Sri V. SRINIVAS SHETTY.—Because an allegation is made in the House that you always nominate your own party men, I asked for information whether you have nominated any others. Not that I know.

ಶ್ರೀ ಮಾಲ ಮರಿಯಪ್ಪ.—ತಾವು ಕೇಳಿದ ಪ್ರಶ್ನೆಗೆ ಜವಾಬ್ದಾರಿಯಿಂದ ಉತ್ತರ ಹೇಳುತ್ತಿದ್ದೇನೆ. ಅಂಕಿ ಅಂಶಗಳನ್ನು ನೋಡಿದರೆ ನಮ್ಮ ಪಕ್ಷವನ್ನೇ ಅಲ್ಲದೆ ಬೇರೆ ಬೇರೆ ಪಕ್ಷದವರನ್ನೂ ಸಹ ನಾಮಿನೇಷನ್ ಲಿಸ್ಟಿನಲ್ಲಿ ಯಾವ ರೀತಿಯಲ್ಲಿ ಸೇರಿಸಿದ್ದೇವೆಂಬುದು ಗೊತ್ತಾಗುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಹಾಗಿದ್ದ ಪಕ್ಷದಲ್ಲಿ ಯಾವುದಾದರೂ ಕೋಟ್ ಮಾಡಿ.

ಶ್ರೀ ಮಾಲ ಮರಿಯಪ್ಪ.—ನಾಮಿನೇಷನ್ ವಿಚಾರದಲ್ಲಿ ನಾನಾದರೂ ಹೇಳುತ್ತೇನೆ, ಸಾಮಾನ್ಯವಾಗಿ ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ನಾಮಿನೇಷನ್ ಮಾಡುವುದಕ್ಕಾಗುವುದಿಲ್ಲ. ಕೆಲವು ತತ್ವಗಳ ಆಧಾರದ ಮೇಲೆ ನಾಮಿನೇಷನ್ ಮಾಡಬೇಕು. ಒಂದು ಸ್ಥಳಕ್ಕೆ 10ಜನ ಉಮೇದುವಾರರು ಇರುತ್ತಾರೆ. ಅದರಲ್ಲಿ 9ಜನ ಅಸಮಾಧಾನದಿಂದ ಇರುತ್ತಾರೆ. ಹೀಗೆ ಆಗುವುದರಿಂದ ನಾಮಿನೇಷನ್ ಮಾಡುವಾಗ ಸಹಕಾರದಲ್ಲಿ ನಂಬಿಕೆ, ಶ್ರದ್ಧೆ, ಅನುಭವ, ಮುಂತಾದ ಗುಣಗಳನ್ನು ಆಧಾರವಾಗಿಟ್ಟುಕೊಂಡೇ ನಾಮಿನೇಷನ್ ಮಾಡಬೇಕಾಗುತ್ತದೆ. ಸರ್ಕಾರದವರು ಈ ಪದ್ಧತಿಯನ್ನು ಅನುಸರಿಸಿ ನಾಮಕರಣ ಮಾಡಿದ್ದಾರೆ. ಆದುದರಿಂದ ಇದರಲ್ಲಿ ಒಂದೇ ಪಕ್ಷದವರು ಇದ್ದಾರೆಂದು ಹೇಳುವುದು ಖಂಡಿತವಾಗಿ ಸರಿಯಾದುದಲ್ಲವೆಂದು ಹೇಳಿದರೆ ಸಾಕು ಎಂದು ನನಗನ್ನಿಸುತ್ತದೆ. ಒಟ್ಟಿನಲ್ಲಿ ಈ ನಾಮಿನೇಷನ್ ಸಂಬಂಧದಲ್ಲಿ ಮಾನ್ಯ ಸದಸ್ಯರು ಎತ್ತಿರತಕ್ಕಂಥ ಆಕ್ಷೇಪಣೆಗಳಿಗೆ ಆಧಾರಗಳು ಇಲ್ಲವೆಂಬ ಅಂಶವನ್ನು ಮಾತ್ರ ನಾನು ಇಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ. ಹಾಗೆಯೇ ಈ ದೇಶದಲ್ಲಿ ಕಬ್ಬಿಣ ಮತ್ತು ಗೊಬ್ಬರ ಇತ್ಯಾದಿಗಳನ್ನು ಹಂಚಬೇಕಾದರೆ ಬೇರೆ ರೀತಿಯಲ್ಲಿ ಹಂಚಿ ಎಂದು ಕೆಲವು ಸಲಹೆಗಳನ್ನು ಮಾನ್ಯ ಸದಸ್ಯರು ಮಾಡಿದರು. ಆದರೆ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯವರು ಈ ದೇಶಕ್ಕೆ ಹಾಕಿ ಕೊಟ್ಟಿರುವ ಮಾರ್ಗವನ್ನು ಸಾಮಾನ್ಯವಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಪ್ಪಿಕೊಂಡಿದ್ದೇವೆ. ಮತ್ತು ಆ ಪ್ರಕಾರ ಮೂರನೆಯ ಪಂಚವಾರ್ಷಿಕ ಯೋಜನೆಯ ರೂಪ ರೇಖೆಗಳನ್ನು ಸಿದ್ಧಮಾಡುತ್ತಿದ್ದೇವೆ. ಇನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯವರು ಈ ನೀತಿಯನ್ನು ಒಪ್ಪಿಕೊಂಡಿರುವುದರಿಂದ ಎಲ್ಲೆಲ್ಲಿ ಕಬ್ಬಿಣ ಮತ್ತು ಗೊಬ್ಬರದ ಸರಬರಾಜು ಸರಿಯಾಗಿಲ್ಲವೋ, ಆ ಸರಬರಾಜು ಸಾಕಷ್ಟು ಇಲ್ಲದೇ ಇರುವ ಕಡೆಗಳಲ್ಲಿ ನಾವು ವಿಲೇಜ್ ಸರ್ವಿಸ್ ಕೋ ಅಪರೇಟಿವ್ ಸೊಸೈಟಿಗಳನ್ನು ಸ್ಥಾಪನೆ ಮಾಡಬೇಕಾಗಿದೆ. ಈಗಾಗಲೇ ಸರಿಯಾಗಿ ಸರಬರಾಜು ಆಗುತ್ತಿರುವ ಸ್ಥಳಗಳಲ್ಲಿ ಅವನ್ನು ಒಂದು ರೂಪಕ್ಕೆ ತಂದು ನಿಲ್ಲಿಸಬೇಕಾಗಿದೆ. ವಿಲೇಜ್ ಸರ್ವಿಸ್ ಕೊ-ಆಪರೇಟಿವ್ ಸೊಸೈಟಿಯ ಕಾರ್ಯಭಾರ ಏನೆಂಬುದನ್ನು ಆಲೋಚನೆ ಮಾಡಿದರೆ ಬಹುಶಃ ಅದಕ್ಕಿಂತಲೂ ಉತ್ತಮವಾದ ಮಾರ್ಗವನ್ನು ಬೇರೆ ಏಜೆನ್ಸಿಯಿಂದ ಮಾಡಿಕೊಂಡರೆ ಅದು ಸರಿಹೊಂದುತ್ತದೆಯೇ ಇಲ್ಲವೇ ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬಹುಶಃ ಒಂದು ಮಾತನ್ನು ವಿಮರ್ಶೆಮಾಡಿದರೆ ವಿರೋಧಪಕ್ಷದ ನಾಯಕರಿಗೆ ಅರ್ಥವಾಗುತ್ತದೆ. ತನ್ನ ಊರಿನಲ್ಲಿಯೇ ತನಗೆ ಬೇಕಾದ ಸಾಲದ ಸೌಕರ್ಯ, ಕಬ್ಬಿಣ, ಬೀಜ, ಗೊಬ್ಬರ ಸಿಕ್ಕುವ ಸಂದರ್ಭದಲ್ಲಿ ತಾಲ್ಲೂಕಿನಲ್ಲಿ ನೆಲಸಿರತಕ್ಕ ತಾಲ್ಲೂಕ್ ಎ್. ಇ. ಎಸ್. ಮುಖಾಂತರ ಅವು ಸರಬರಾಜು ಆಗಬೇಕೆನ್ನುವುದನ್ನು ರೈತರು ಒಪ್ಪುವುದಿಲ್ಲವೆಂಬುದನ್ನು ನಾನು ಹೇಳಬಯಸುತ್ತೇನೆ. ಒಂದು ವೇಳೆ ಬೇರೆ ಏಜೆನ್ಸಿಯಿಂದ ಕೊಟ್ಟರೆ ವಿಲೇಜ್ ಕೊ-ಆಪರೇಟಿವ್ ಸೊಸೈಟಿ ಮಾಡುವ ಮುಖ್ಯ ಕೆಲಸ ವೇನೆಂಬುದು ಎದ್ದು ಕಾಣುತ್ತದೆ. ಆಗ ಸಾಲದ ಸೌಲಭ್ಯ ಚೆನ್ನಾಗಿ ದೊರೆಯುತ್ತದೆ. ಕೊ-ಆಪರೇಟಿವ್ ಸೊಸೈಟಿಗಳ ಮೂಲಕ ಕೆಲಸ ಚೆನ್ನಾಗಿ ನಡೆಯುತ್ತದೆ. ಗೊಬ್ಬರ ಮತ್ತು ಕಬ್ಬಿಣ ಹಂಚತಕ್ಕ ಕಾರ್ಯಭಾರವನ್ನು ವಿಲೇಜ್ ಸರ್ವಿಸ್ ಕೊ-ಆಪರೇಟಿವ್ಸ್ ತೆಗೆದುಕೊಳ್ಳುತ್ತಾರೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ತಾವು ಹೇಳಿದ ಅಭಿಪ್ರಾಯ ಚೆನ್ನಾಗಿದೆ. ಆದರೆ ಈ ಕೊ-ಆಪರೇಟಿವ್ ಸೊಸೈಟಿಗಳಲ್ಲಿ ಆರ್ಥಿಕ ಮುಗ್ಗಟ್ಟು ಇರುವುದರಿಂದ ಕಬ್ಬಿಣದ ಸಾಮಾನುಗಳನ್ನು ಅವರು ಕೊಂಡು ಸರಬರಾಜು ಮಾಡುವುದಕ್ಕೆ ಸಾಧ್ಯವಿಲ್ಲ. ಸಾಲದ ರೂಪದಲ್ಲಿ ಸಂಬಂಧಪಟ್ಟ ಸೊಸೈಟಿಗಳಲ್ಲಿ ಕೊಟ್ಟು ಅವುಗಳ ಮೂಲಕ ರೈತರಿಗೆ ಸರಬರಾಜು ಮಾಡಿ ಅನಂತರ ಅದನ್ನು ಪುನಃ ರಿಕವರಿ ಮಾಡುವ ಸಂದರ್ಭ ಬಂದರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ it will only be a slogan; it will be of no use to the public.

ಶ್ರೀ ಮಾಲಮರಿಯಪ್ಪ.—ಮಾನ್ಯ ಶ್ರೀ ಮಾದಪ್ಪನವರು ಜಿಲ್ಲಾ ಬ್ಯಾಂಕಿನಿಂದ ಸರ್ವಿಸ್ ಕೊ-ಆಪರೇಟಿವ್ ಸೊಸೈಟಿಗೂ ಪ್ರೈಮರಿ ಕೊ-ಆಪರೇಟಿವ್ ಸೊಸೈಟಿಗೂ ಎಷ್ಟರ ಮಟ್ಟಿಗೆ ಹೊಂದಾಣಿಕೆ ಮತ್ತು ಸಂಬಂಧ ಇದೆಯೆಂಬುದನ್ನು ಚೆನ್ನಾಗಿ ತಿಳಿದುಕೊಂಡಿದ್ದರೆ ಈ ಪ್ರಶ್ನೆಯನ್ನೇ ಎತ್ತುತ್ತಿರಲಿಲ್ಲ.

Sri U. M. MADAPPA.—You are in a state of confusion. Your policy is a defective one.

ಶ್ರೀ ಎಂ. ರಾಮಪ್ಪ.—ಬೇಕಾದಾಗ ಮಾನ್ಯ ಮಂತ್ರಿಗಳು ಈಲ್ಡ್ ಆಗುತ್ತಾರೆ ; ಬೇಡವಾದ್ದಾಗ ಈಲ್ಡ್ ಆಗುವುದಿಲ್ಲ.

ಅಧ್ಯಕ್ಷರು.—ಮಂತ್ರಿಗಳು ಕೆಲವೊಂದಕ್ಕೆ ಈಲ್ಡ್ ಆಗುತ್ತಾರೆ; ಕೆಲವೊಂದಕ್ಕೆ ಈಲ್ಡ್ ಆಗುವುದಿಲ್ಲ. ಅದಕ್ಕೆ ನಾನೇನು ಮಾಡಲಿ?

ಶ್ರೀ ಮಾಲಮರಿಯಪ್ಪ.—ಡಿಸ್ಟ್ರಿಕ್ಟ್ ಬ್ಯಾಂಕಿನವರು ಈ ಪ್ರೈಮರಿ ಸೊಸೈಟಿಗೆ ತುಂಬಾ ಸಹಾಯವಾಗಿರಬೇಕು. ಕಬ್ಬಿಣ, ಗೊಬ್ಬರ, ಹಂಚುವ ಸಂದರ್ಭದಲ್ಲಿಯೂ ಈ ಸಾಲದ ಸೌಲಭ್ಯವನ್ನು ಉಪಯೋಗ ಮಾಡಿಕೊಂಡಿದ್ದಾರೆ.

ಸ್ವಂತ ಶಕ್ತಿ ಇಲ್ಲದಿದ್ದರೂ ಜಿಲ್ಲಾ ಬ್ಯಾಂಕಿನಿಂದ ಸಾಲ ಪಡೆದು ಈ ಸೊಸೈಟಿಗಳು ಸರ್ವಿಸ್ ಮಾಡಿವೆ. ಆದ್ದರಿಂದ ಈ ಸರ್ವಿಸ್ ಕೊ-ಆಪರೇಟಿವ್ಸ್ ಮಾಡತಕ್ಕ ಕೆಲಸವನ್ನು ಪುನಃ ಬೇರೆ ಏಜೆನ್ಸಿಗಳಿಗೆ ವಹಿಸಿ ಸರ್ವಿಸ್ ಕೊ-ಆಪರೇಟಿವ್‌ಗಳಿಗೆ ಸಾಕಷ್ಟು ಕೆಲಸ ಇರದಂತೆ ದೇಶದಲ್ಲಿ ವ್ಯವಸ್ಥೆಮಾಡುವುದು ಏನೋ ಒಂದು ದುರ್ದೈವದಿಂದ ಕೂಡಿದ ನೀತಿ ಎಂದು ನಾನು ಹೇಳಬೇಕಾಗಿದೆ.

ಇನ್ನೊಂದು ವಿಷಯ. ಶ್ರೀಮಾನ್ ಶ್ರೀನಿವಾಸ ಶೆಟ್ಟಿ ಅವರು ದೇಶಪುನರ್ವಿಂಗಣೆಯಾದ ಮೇಲೆ ಇನ್ನೂ ಮೈಸೂರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮತ್ತು ಮದ್ರಾಸ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಇವೆರಡರ ಅಸೆಟ್ಸ್ ಮತ್ತು ಲಯ ಬಿಲಿಟೀಸ್ ತೀರ್ಮಾನವಾಗಲಿಲ್ಲವೆಂದು ಹೇಳಿದರು. ಇದು ಸ್ವಲ್ಪ ತೊಡಕಿನ ಪ್ರಶ್ನೆ. ಈಗಾಗಲೇ ಈ ವಿಷಯದಲ್ಲಿ ಮದ್ರಾಸ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಕೊ-ಆಪರೇಟಿವ್ ಅಧಿಕಾರಿಗಳು ಮತ್ತು ಮೈಸೂರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಕೊ-ಆಪರೇಟಿವ್ ಅಧಿಕಾರಿಗಳು ಸೇರಿ ಸಮಾಲೋಚನೆ ಮಾಡಿ ಅನೇಕ ಪ್ರೊಪೋಜಲ್‌ಗಳನ್ನು ಇಟ್ಟುಕೊಂಡು ಚರ್ಚೆ ಮಾಡಿದ್ದಾರೆ. ಆದರೆ ಇನ್ನೂ ಪರಸ್ಪರ ಹೊಂದಾಣಿಕೆಯಾಗಲಿಲ್ಲ. ಆದರಲ್ಲೂ ಕಾನೂನಿನ ವಿಷಯದಲ್ಲಿ ಸ್ವಲ್ಪ ತೊಡಕುಗಳು ಬಂದವು. ಅವೇನೆಂಬುದನ್ನು ಒಂದು ಮಾತಿನಲ್ಲಿ ಹೇಳಬೇಕಾಗಿದೆ. ಡಿಬೆಂಚರ್ ಬಾಂಡುಗಳನ್ನು ಸಬ್‌ಸ್ಕ್ರೈಬ್ ಮಾಡಿ ತೆಗೆದುಕೊಂಡಿರುವುದನ್ನು ಇಲ್ಲಿಗೆ ವರ್ಗಮಾಡಬೇಕಾಗಿದೆ. ಆ ರೀತಿ ಮಾಡಬೇಕಾದರೆ ಇವರ ಒಪ್ಪಿಗೆ ಬೇಕಾಯಿತು. ಅವರಿಗೂ ಇವರಿಗೂ ಆದಂಥ ಒಪ್ಪಂದವನ್ನು ಇಲ್ಲೂ ಜಾರಿಗೆ ತಂದರೆ ಬಹುಶಃ ಆ ತೊಡಕು ಬಗೆಹರಿಯುತ್ತದೆಂದು ನಾನು ತಿಳಿದಿದ್ದೇನೆ. ಪ್ರತಿ 6 ತಿಂಗಳಿಗೊಂದಾವೃತ್ತಿ ಡಿಬೆಂಚರ್ ಫಂಡಿಗೆ ಬಡ್ಡಿ ಕೊಡುವುದು, ಸಿಂಕಿಂಗ್ ಫಂಡ್ ತಯಾರು ಮಾಡುವುದು—ಡಿಬೆಂಚರ್ ಬಾಂಡುಗಳನ್ನು ತೀರ್ಪು ಮಾಡುವುದು—ಇವನ್ನು ಬೊಂಬಾಯಿನವರು ಒಪ್ಪಿಕೊಂಡಿದ್ದಾರೆ. 16ನೆಯ ಜನವರಿಯಲ್ಲಿ ಮದ್ರಾಸಿನವರಿಗೆ ಇದನ್ನು ತಿಳಿಸಿದ್ದೇವೆ. ಅವರೂ ಒಪ್ಪಿಕೊಂಡಿದ್ದಾರೆ. ಅದಷ್ಟು ಜಾಗ್ರತೆ ಇಲ್ಲಿಯೂ ಈ ಪ್ರಶ್ನೆ ತೀರ್ಮಾನವಾಗುವುದರಲ್ಲಿದೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಎಷ್ಟು ಸಮಯ ಬೇಕಾಗಿದೆ ?

ಶ್ರೀ ಮಾಲಮರಿಯಪ್ಪ.—ಕೆಲವು ತಿಂಗಳುಗಳಲ್ಲಿಯೇ ತೀರ್ಮಾನವಾಗಬಹುದು. ಅವರ ಒಪ್ಪಿಗೆ ಬಂದ ಕೂಡಲೇ ಬಹುಶಃ ಫೈನಲೈಜ್ ಆಗುತ್ತದೆ.

ಮಂಡ್ಯ ಜಿಲ್ಲೆಯ ಒಂದು ಸೊಸೈಟಿಗೆ ಕೆಲವು ಸೌಲಭ್ಯಗಳನ್ನು ಕೇಳಿದ್ದರೂ ಅವುಗಳನ್ನು ಕೊಡಲಿಲ್ಲವೆಂಬುದಾಗಿ ಶ್ರೀ ಬೊಮ್ಮೇಗೌಡರು ಒಂದು ಆಕ್ಷೇಪಣೆಯನ್ನು ಎತ್ತಿದ್ದಾರೆ. ಆದರೆ ಈ ಸಂದರ್ಭದಲ್ಲಿ ಇಲ್ಲಿಯವರೆಗೂ ಸರ್ಕಾರದವರು ಮತ್ತು ಸಹಕಾರಿ ಇಲಾಖೆಯವರೂ ಮಂಡ್ಯ ಜಿಲ್ಲೆಯಲ್ಲಿರತಕ್ಕ ರೈತಾಪಿ ಸಹಕಾರ ಸಂಘಗಳಿಗೆ ಏನೇನು ಸೌಲಭ್ಯಗಳನ್ನೊದಗಿಸಿದ್ದಾರೆಂಬ ಚಿತ್ರವನ್ನು ಸಭೆಯ ಮುಂದಿಟ್ಟರೆ ಆಗ ಈ ವಿಚಾರ ಎಲ್ಲರಿಗೂ ಚೆನ್ನಾಗಿ ವೇದ್ಯವಾದೀತೆಂಬ ಭಾವನೆಯಿಂದ ನಾನೀಗ ಕೆಲವು ಅಂಕಿ ಅಂಶಗಳನ್ನು ತಿಳಿಸಬೇಕೆಂದಿದ್ದೇನೆ. 1959-60 ನೆಯ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ಮಾರ್ಕೆಟಿಂಗ್ ಸೊಸೈಟಿಯ ಷೇರ್ ಬಂಡವಾಳಕ್ಕೆ ಷೇರುಗಳ ಮುಖೇನ 20 ಸಾವಿರ ರೂಪಾಯಿಗಳನ್ನೊದಗಿಸಲಾಗಿದೆ. ಇಷ್ಟೇ ಅಲ್ಲದೆ ಎಣ್ಣೆ ಮತ್ತು ಅಕ್ಕಿ ಇವುಗಳ ಪ್ರೋಸೆಸಿಂಗಿನ ಯೂನಿಟ್‌ಗಳ ಬಗ್ಗೆ ಒಂದು ಲಕ್ಷ ರೂಪಾಯಿಗಳನ್ನೊದಗಿಸಲಾಗಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನಮ್ಮದು 10 ವರ್ಷಗಳಮೇಲೆ ಆಗಿರುವ ಸೊಸೈಟಿ. ಇತ್ತೀಚೆಗೆ ಪ್ರಾರಂಭಮಾಡಿರತಕ್ಕ ಸೊಸೈಟಿಗಳಿಗೆಲ್ಲ 20 ಸಾವಿರದ ಮೇಲೆ ಹೇಗೆ ಕೊಟ್ಟಿದ್ದಾರೆ ?

3-00 P.M.

ಶ್ರೀ ಮಾಲಮರಿಯಪ್ಪ.—ನಾನು ಹೇಳತಕ್ಕ ಉತ್ತರವನ್ನು ಪೂರ್ತಿಯಾಗಿ ಕೇಳಿದ ಮೇಲೆ ಅವರು ಈ ಪ್ರಶ್ನೆ ಹಾಕಿದ್ದರೆ ಚೆನ್ನಾಗಿತ್ತು. ಅಲ್ಲಿ ಗೋಡೌನುಗಳನ್ನು ಕಟ್ಟತಕ್ಕ ಬಗ್ಗೆ 20 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. ಇದರ ಜೊತೆಗೆ ಬೇರೆ ಬೇರೆ ವಿಧವಾದ ಸಾಲಗಳ ಬಗ್ಗೆ 50 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಎಂಥ ಸ್ಥಳದಲ್ಲಿದೆ ಆ ಒಂದು ಟ್ರಾವಲರ್ಸ್ ಬಂಗ್ಲೆ. ಅದನ್ನು ಈ ಸೊಸೈಟಿಗೋಸ್ಕರವಾಗಿ ಕೇವಲ 50 ಸಾವಿರ ರೂಪಾಯಿಗಳಿಗೆ ಕೊಡಲಾಯಿತು. ಈ ದಿವಸ ಕೂಡ ಆಕಟ್ಟಡ ಈಗೇನು ಬೆಲೆಗೆ ಕೊಡಲಾಗಿದೆಯೋ ಅದರ 4 ರಷ್ಟು ಬೆಲೆಗೆ ಹೋಗುತ್ತೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಇಷ್ಟೆಲ್ಲ ಸೌಲಭ್ಯ ಸೌಲತ್ತುಗಳನ್ನು ಒದಗಿಸಿದ್ದಾಗ್ಗೂ ಸಾಕಷ್ಟು ಸಾಲ ಕೊಡಲಿಲ್ಲವೆಂಬ ಆಕ್ಷೇಪಣೆಯೊಂದನ್ನು ಮಾತ್ರ ಮಾಡಿದರೇ ವಿನಾ ದೊರೆತ ಸೌಲಭ್ಯಗಳ ಬಗ್ಗೆ ಒಂದು ಮಾತನ್ನೂ ಸಹ ಅವರು ಆಡಲಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಅದನ್ನು ಶ್ರೀ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗಮಾಡಿದ್ದು !

ಶ್ರೀ ಮಾಲ ಮರಿಯಪ್ಪ.—ಯಾರಾದರೂ ಆಗಿರಲಿ. ಸರ್ಕಾರವೆಂದರೆ ಎಲ್ಲ ಒಂದೇ. ಇಷ್ಟೇ ಅಲ್ಲದೆ ಸೊಸೈಟಿಯವರು ರಚಿಸಿರುವಂಥ ನೀತಿ ನೇಮಗಳನ್ನು ಇವರು ಒಪ್ಪಿಕೊಳ್ಳದೆ ಮುಂದಕ್ಕೆ ತಳ್ಳುತ್ತಲೇ ಬಂದರು. ಇದೇ ಸಂದರ್ಭದಲ್ಲಿ ನಾನು ಈ

ಸಭೆಯು ಗಮನ ಸೇಳೆಯಬೇಕಾಗಿರುವ ಮುಖ್ಯಾಂಶ ವೊಂದು ಏನೆಂದರೆ ದೇಶದಾದ್ಯಂತವೂ ಇರತಕ್ಕ ತಾಲ್ಲೂಕ್ ಮಟ್ಟದ ಹಾಗೂ ಎಲ್ಲಾ ಮಲ್ಟಿಪರ್ಪಸಸ್ ಸೊಸೈಟಿಗಳಿಗೂ ಒಂದು ಮಾಡಲ್-ಬೈಲಾವನ್ನು ತಯಾರಿಸಿ ಅದಕ್ಕೆ ನೀವೂ ಸಹ ಒಪ್ಪಿ ಕೊಳ್ಳಿ ಎಂದು ಕಳುಹಿಸಿದ್ದರೆ ಈ ಮಂಡ್ಯದವರು ಅದನ್ನು ಒಪ್ಪಿ ಕೊಳ್ಳದೆ ವೃಥಾ ಅನೇಕ ವರ್ಷಗಳನ್ನು ಕಳೆದು ಬಿಟ್ಟು ಮೊನ್ನೆತಾನೆ ಆರು ತಿಂಗಳ ಕೆಳಗೆ ಒಪ್ಪಿ ಕೊಂಡಿದ್ದಾರೆ. ಅವರಿಗೆ ನಮ್ಮ ಮಾಡಲ್ ಬೈಲಾ ಒಪ್ಪಿಕೊಳ್ಳಲು ಇಷ್ಟವಿಲ್ಲದೆ ಇರುವಾಗ ಅವರ ಸೊಸೈಟಿಯನ್ನು ನಾವು ಹೇಗೆ ಮಾರ್ಕೆಟಿಂಗ್ ಸೊಸೈಟಿಗೆ ಪರಿವರ್ತನೆ ಮಾಡಲು ಸಾಧ್ಯವಿತ್ತು ? ಅವರು ಇಲ್ಲಿಯವರೆಗೂ ಆ ಬೈಲಾವನ್ನು ಒಪ್ಪಿ ಕೊಳ್ಳದೆ ಏಕೆ ನಿಧಾನ ಮಾಡಿದರೆಂಬುದನ್ನು ಅವರು ತಿಳಿಸಲಿಲ್ಲ. ಆದಾಗ್ಯೂ ಅವರಿಗೆ ದೂರು ಹೇಳುವುದೊಂದೇ ಗಮನ ದಲ್ಲಿದ್ದಂತೆ ಕಾಣುತ್ತದೆ. ಈ ವಿಷಯಗಳನ್ನೆಲ್ಲ ಶ್ರೀ ಬೊಮ್ಮೇಗೌಡರು ತಮ್ಮ ಗಮನದಲ್ಲಿಟ್ಟುಕೊಳ್ಳು ವುದು ಒಳ್ಳೆಯದು.

ಇನ್ನು ಮಂಡ್ಯಜಿಲ್ಲೆಗೆ ಬೇಕಾಗಿದ್ದ ಕಬ್ಬಿಣದ ಸಾಮಾನು ಸೀಮೆಗೊಬ್ಬರ ಇವುಗಳನ್ನೆಲ್ಲ ಅವರ ಸೊಸೈಟಿಗಳ ಮೂಲಕವೇ ಹಂಚಿಕೆಮಾಡಲಾಗಿದೆ. ಅದರಲ್ಲಿ ಯಾವ ವಿಧವಾದ ವ್ಯತ್ಯಾಸವನ್ನೂ ಸಹ ನಾವು ಮಾಡಿಲ್ಲ. ಹೀಗೆಲ್ಲ ಇರುವುದರಿಂದ ಅವರು ಮಾಡಿರತಕ್ಕ ಆಕ್ಷೇಪಣೆಗಳೇನಿವೆ, ಅವು ಕೇವಲ ಒಂದು ರಾಜಕೀಯ ದೃಷ್ಟಿಯಿಂದ ಮಾಡಿರುತ್ತಾರೇ ಶಿವಾಯಿ ಅವುಗಳಿಗೆ ಯಾವ ರೀತಿಯ ಬುಡವೂ ಸಹ ಇಲ್ಲವೆಂದು ನಾನೀಗ ಹೇಳ ಬೇಕಾಗಿದೆ. ಇನ್ನು ದೇಶದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಗೋಡೌನುಗಳನ್ನು ಕಟ್ಟತಕ್ಕ ವಿಚಾರದಲ್ಲಿ ಒಂದು ಬೋರ್ಡನ್ನು ರಚಿಸ ಬೇಕೆಂದಿದ್ದೇವೆ. ಇದೇ ರೀತಿ ಮಾರ್ಕೆಟಿಂಗ್ ಸೊಸೈಟಿಗಳಿಗೂ ಸಹ ಗೋಡೌನುಗಳನ್ನು ಕಟ್ಟಿಸಿದರೆ ಅವೂ ಕೂಡ ಚೆನ್ನಾಗಿ ನಡೆದುಕೊಂಡು ಬರುತ್ತವೆ. ಗಾಗಲೇ ಗ್ರಾಮಾಂತರ ಪ್ರದೇಶಗಳ ಬಗ್ಗೆ 100 ಗೋಡೌನುಗಳು ಮಾರ್ಕೆಟಿಂಗ್ ಸೊಸೈಟಿಗಳ ಬಗ್ಗೆ 200 ಗೋಡೌನುಗಳು ಸಿದ್ಧವಾಗಿವೆ. ಇನ್ನೂ ಅನೇಕ ಕಡೆ ಈ ಗೋಡೌನುಗಳನ್ನು ಕಟ್ಟಿಸತಕ್ಕ ಬಗ್ಗೆ ಪೂರ್ವ ಭಾವಿಯಾಗಿ ನಡೆಸಬೇಕಾದ ಸೈಟಿನ ಸೆಲೆಕ್ಷನ್, ಕಂಟ್ರಾಕ್ಟರುಗಳ ವಿಚಾರ ಇವುಗಳನ್ನೆಲ್ಲ ಪರಿಶೀಲನೆ ಮಾಡಲಾಗುತ್ತಿದೆ. ಇಷ್ಟೆಲ್ಲ ಕೆಲಸಗಳನ್ನು ಮಾಡುತ್ತಿದ್ದಾಗ್ಯೂ ಸರ್ಕಾರದವರ ಮೇಲೆ ಪ್ರತಿಯೊಂದು ಭಾರವನ್ನೂ ಹಾಕತಕ್ಕದ್ದು ಅಷ್ಟು ಸೂಕ್ತವಾದದ್ದಲ್ಲವೆಂದು ಹೇಳಿದರೆ ಸಾಕು. ಈ ಸೊಸೈಟಿಗಳಿಗೆಲ್ಲ ಈಗ ಎಲೆಕ್ಷನ್ ಗಳಲ್ಲಿ ಚುನಾವಣೆಯಾದ ಜನರು ಅಧಿಕಾರಕ್ಕೆ ಬಂದಿರುತ್ತಾರೆ. ಅವರೀಗ ಇವುಗಳ ಆಡಳಿತವನ್ನು ನಡೆಸಲು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳ ಬೇಕಾಗಿದೆ. ಅವರು ಅದರಂತೆ ಮಾಡಿಯೋ ಮಾಡಿಕೊಂಡು ಹೋಗುತ್ತಾರೆ. ಇಲಾಖೆಯವರೇನಿದ್ದರೂ ಇವುಗಳ ಮೇಲ್ವಿಚಾರಣೆ ನೋಡಿಕೊಳ್ಳುವುದು, ಆಡಿಟ್ ವಿಚಾರ ಇಷ್ಟಿರುತ್ತದೆಯೇ ಹೊರತು ಇನ್ನು ಈ ಸಂಸ್ಥೆಗಳ ಒಳಾಡಳಿತದಲ್ಲಿ ಕೈಹಾಕಲು ಅಥವಾ ಮಧ್ಯೇ ಪ್ರವೇಶಿಸಲು ಅವಕಾಶವಿಲ್ಲ. ಇದು ಈಗಿನ ಸರ್ಕಾರದ ನೀತಿಯಾಗಿದೆ. ಇನ್ನು ಮೇಲೆ ಈ ಸಂಸ್ಥೆಗಳ ಬಗ್ಗೆ ಹೆಚ್ಚಿನ ಜವಾಬ್ದಾರಿ ಸಾರ್ವಜನಿಕರ ಮೇಲೆ ಬೀಳತಕ್ಕದ್ದಾಗಿರುತ್ತೆ. ಏನೋ ಅಂಥಾ ಅಗಾಧವಾದ ತಪ್ಪುಗಳಾದಲ್ಲಿ ಆಗ ಆ ಸಂಸ್ಥೆಯ ಆಡಳಿತವನ್ನು ವಶಪಡಿಸಿಕೊಳ್ಳತಕ್ಕ ಅಧಿಕಾರವೊಂದು ಮಾತ್ರ ಈಗ ಇಲಾಖೆಯವರಿಗೆ ಉಳಿದಿದೆ. ಈ ಸೂಪರ್‌ಸೀಡ್ ಮಾಡುವ ಅಧಿಕಾರ ಬಿಟ್ಟರೆ ಬೇರೆ ಇನ್ನಾವ ಅಧಿಕಾರವೂ ಇಲಾಖೆಗೆ ಇವುಗಳ ಬಗ್ಗೆ ಇರುವುದಿಲ್ಲ. ಈ ರೀತಿಯಾಗಿ ಒಂದು ಹೊಸ ಆಕ್ಟ್ ಇತ್ತೀಚೆಗೆ ಜಾರಿಗೆ ಬಂದಿದೆ. ಹೀಗಿರುವಾಗ ಎಲ್ಲಿಯಾದರೂ ಅಂಥಾ ಅಲ್ಪಸ್ವಲ್ಪ ದೋಷಗಳಿದ್ದರೆ ಅವು ಅಲ್ಲಿಯ ಜನರ ಅಶ್ರದ್ಧೆಯಿಂದ ಹೊರತು ಅದಕ್ಕೆ ಸರ್ಕಾರ ಹೊಣೆಯಲ್ಲ ವೆಂಬುದನ್ನು ತಾವು ಗಮನಿಸಬೇಕು. ಹೀಗಿರುವಾಗ ಈ ಸಂಸ್ಥೆಗಳ ಬಗ್ಗೆ ನಡೆದಿರುವ ಲೋಪ ದೋಷಗಳ ನಿವಾರಣೆ ಬಗ್ಗೆ ಸರ್ಕಾರದ ಜವಾಬ್ದಾರಿ ಇತ್ತೆಂದು ಹೇಳುವುದು ಅಷ್ಟೇನೂ ಆಧಾರ ಸಹಿತವಾದ ಅಕ್ಷೇಪಣೆಯಾಗಿರುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ವಿ. ಎಸ್. ಪಾಟೀಲ್‌ರವರು ಮಾತನಾಡುತ್ತ ಬೆಳಗಾಂ ಜಿಲ್ಲೆಯ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆಯೆಂದು ಹೇಳಿದರು. ಆ ಜಿಲ್ಲೆಯಲ್ಲಿ 1 ಸಾವಿರ ಸೊಸೈಟಿಗಳಿರುವಾಗ ಅಲ್ಲಿ 1-2 ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದ್ದರೂ ಆಗಿರ ಬಹುದು. ಆ ಬಗ್ಗೆ ಈ ಗಾಗಲೇ ಇಲಾಖೆಯವರು ಬಹಳ ಹಣವನ್ನು ವಶಪಡಿಸಿಕೊಂಡಿದ್ದಾರೆ ಮತ್ತು ಆರ್ಬಿಟ್ರೇಷನ್ ಕೋರ್ಟುಗಳಲ್ಲೂ ಕ್ರಿಮಿನಲ್ ಕೋರ್ಟುಗಳಲ್ಲೂ ಕೇಸು ಹಾಕಿದ್ದಾರೆ. ಆದರೆ ಯಾವ ಯಾವ ಖಟ್ಲೆ ವಿಷಯ ಯಾವ ಯಾವ ಘಟ್ಟದಲ್ಲಿದೆಯೆಂಬುದನ್ನು ಹೇಳುವುದಕ್ಕಾಗುವುದಿಲ್ಲ.

[Mr. DEPUTY SPEAKER in the Chair.]

ಮಾನ್ಯ ಸದಸ್ಯರು ಈ ಮಾಹಿತಿ ಬೇಕೆಂದು ಹೇಳುವುದಾದರೆ, ಅದನ್ನು ತರಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಮಾತ್ರ ಹೇಳುತ್ತೇನೆ.

ಆದ್ದರಿಂದ ಈ ಸಾವಿರ ಸೊಸೈಟಿಗಳು ಇರತಕ್ಕಂಥ ಈ ಜಿಲ್ಲೆಯಲ್ಲಿ ಮೂರು ಸೊಸೈಟಿಗಳಲ್ಲಿ ವ್ಯತ್ಯಾಸವಾಗಿದೆ ಎಂದು ಹೇಳತಕ್ಕದ್ದು, ಮಾತನ್ನು ಬಣ್ಣ ಬಣ್ಣವಾಗಿ ಹೇಳತಕ್ಕಂಥಾದ್ದು, ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದಂಥವರು ಅನುಭವದಿಂದ ಹೇಳತಕ್ಕಂಥ ಮಾತಲ್ಲ. ಅದಕ್ಕೆ ಒಂದು ಸರಿಯಾದ ಆಧಾರವಿಲ್ಲವೆಂದು ಹೇಳಬೇಕಾಗಿದೆ.

Sri G. N. PUTTANNA.—You say that the Government is not responsible for these things.

Sri MALI MARIYAPPA.—Please take all these things in their entirety.

Sri G. N. PUTTANNA.—We are not charging or accusing the Government but our only grievance is that the Government is not right. Last time, to my interpellation you answered that 66 societies were liquidated in Tumkur District.

Sri MALI MARIYAPPA.—Your figure is not correct. Please verify it.

Sri G. N. PUTTANNA.—I have verified it.

Sri MALI MARIYAPPA.—Please produce it tomorrow and I am going to discuss it with you.

Sri G. N. PUTTANNA.—I shall produce it by 5 o' clock today. Till today you have not taken action. The share holders have not been paid their amounts. Who is responsible for this the Department or the Government? We cannot take action against the officers. You have to take drastic action.

Sri MALI MARIYAPPA.—When I say that the figure is not correct, the Hon'ble Member must have patience and wait for a little time so that I can check up my statement in which I have said that 66 societies have gone into liquidation. I challenge the accuracy of that figure.

Sri G. N. PUTTANNA.—I challenge that statement has been made by the Government and it has been signed by the Secretary. I shall produce it.

ಶ್ರೀ ಮಾಲಿ ಮರಿಯಪ್ಪ.—ಶ್ರೀ ಮಾ ೯ ನಾರಾಯಣ ಸ್ವಾಮಿಯವರು ಅನೇಕ ಸೊಸೈಟಿಗಳಲ್ಲಿ ಹಣವ್ಯತ್ಯಾಸವಾಗಿದೆ ಎನ್ನತಕ್ಕಂಥ ಅಂಶವನ್ನು ಹೇಳುತ್ತಾ ಇದ್ದರು.

ಶ್ರೀ ಬಿ. ಎಲ್ ನಾರಾಯಣ ಸ್ವಾಮಿ.—ನಾನು ಆಸ್ಟೇಟ್‌ಮೆಂಟ್ ಮಾಡಲಲ್ಲ. ನನ್ನ ಅಲಿಗೇಷನ್ಸ್ ಬೇರೆ.

ಶ್ರೀ ಮಾಲಿ ಮರಿಯಪ್ಪ.—ಹೋಗಲಿ ಬಿಡಿ. ಶ್ರೀ ಮಾ ೯ ನಾರಾಯಣ ಸ್ವಾಮಿಯವರು ಇನ್ನೊಂದು ಆಂಶವನ್ನು ಹೇಳಿದರು. ಅದೇನೆಂದರೆ, ಈಗ ಸಾಲವನ್ನು ಕೊಡುತ್ತಾ ಇದ್ದಾರೆ. ಅನೇಕ ಸಂಧರ್ಭದಲ್ಲಿ ಸಾಲವನ್ನು ಯಾವ ಉದ್ದೇಶಕ್ಕೋಸ್ಕರ ತೆಗೆದುಕೊಂಡು ಹೋಗಿರುತ್ತಾರೇ, ಆ ಉದ್ದೇಶವನ್ನು ನೇರವೇರಿರುವುದಿಲ್ಲವೆಂದು ಹೇಳಿದರು. ಕೋಲಾರ ಜಿಲ್ಲೆಯಲ್ಲಿ ಸೂಮಾರು 60 ಲಕ್ಷ ರೂಪಾಯಿಗಳನ್ನು ಜಿಲ್ಲಾ ಬ್ಯಾಂಕಿನವರು ಹಂಚಿದ್ದಾರೆ. ಅಲ್ಪಾವಧಿ ಮಧ್ಯಅವಧಿ, ಮತ್ತು ದೀರ್ಘಾವಧಿರೂಪದಲ್ಲಿ 60 ಲಕ್ಷ ರೂಪಾಯಿಗಳನ್ನು ಸಕಾಲದಲ್ಲಿ ವಸೂಲ, ಮಾಡಿ, ಬಹು ಬೇಗ ಅಪೆಕ್ಸ್ ಬ್ಯಾಂಕಿಗೆ ಕಟ್ಟಿದ್ದಾರೆ, ಅದು ಹೋದ ವರ್ಷದ ಅನುಭವವಲ್ಲ.

ಶ್ರೀ ಬಿ. ಎಲ್. ನಾರಾಯಣ ಸ್ವಾಮಿ.—ನಾನು ತೊರೆದೇವನಹಳ್ಳಿ ವಿಚಾರವನ್ನು ಮಿನಿಸ್ಟರ ಅವರ ನೋಟೀಸಿಗೆ ತಂದದ್ದು.

ಶ್ರೀ ಮಾಲಿ ಮರಿಯಪ್ಪ.—ಸಾಮಾನ್ಯವಾಗಿ ಒಂದು ಬಾವಿಯನ್ನು ತೆಗೆಸಬೇಕಾದರೆ, ಒಂದು ಪಂಪ್ ಹಾಕಿಸಬೇಕಾದರೆ ಕೊಂಚ ಕಾಲ ನಿಧಾನ ವಾಗುತ್ತದೆನ್ನುವುದನ್ನು ಬೇಸಾಯದಲ್ಲಿ ತೊಡಗಿರತಕ್ಕಂಥವರೆಲ್ಲರಿಗೂ ಅನುಭವವಾಗಿರುತ್ತದೆ. ಆದ್ದರಿಂದ ತೆಗೆದುಕೊಂಡ ಸಾಲದಿಂದ ಬಾವಿನಿರ್ಮಾಣವಾಗಿಲ್ಲವೆಂದು ಹೇಳತಕ್ಕಂಥ ಆಕ್ಷೇಪಣೆ, ಸನ್ನಿವೇಶಗಳು, ಸರಿಯಾದುದಲ್ಲ. ಸಾಮಾನ್ಯವಾಗಿ ಬಾವಿಯನ್ನು ಮಾಡಬೇಕಾದರೆ ಕನಿಷ್ಠಪಕ್ಷ ಒಂದು ವರ್ಷ, ಎರಡು ವರ್ಷವಾದರೂ ಬೇಕಾಗುತ್ತದೆ. ಆದ್ದರಿಂದ ಅವರು ತರತಕ್ಕಂಥ ಆಕ್ಷೇಪಣೆ ಸರಿಯಾದುದಲ್ಲ. ಬಾವಿಯನ್ನು ತೆಗೆದಿಲ್ಲ ಇತ್ಯಾದಿ, ಹೇಳತಕ್ಕಂಥಾದ್ದು, ಸರಿಯಾದ ವಿವರಣೆ ಇಲ್ಲದೆ ಹೇಳ ತಕ್ಕಂಥ ಮಾತು ಎಂದು ಹೇಳಬೇಕಾಗಿದೆ.

ಶ್ರೀ ಬಿ. ಎಲ್. ನಾರಾಯಣ ಸ್ವಾಮಿ.—ತಮಗೆ ಕಂಪ್ಲೇಂಟ್ ಬಂದಿದೆ. ಅದರಲ್ಲಿ ಏನೇನಿದೆ ಎನ್ನುವುದನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ.

ಶ್ರೀ ಮಾಲಿಮರಿಯಪ್ಪ.—ಆ ಕಂಪ್ಲೆಂಟ್ ಬಂದದ್ದು ನನಗೆ ಜ್ಞಾಪಕವಿಲ್ಲ. ಒಂದ ವೇಳೆ ತಮ್ಮ ಹತ್ತಿರ ವಿದ್ದರೆ, ತಿಳಿಸಬಹುದು, ನಾನು ವಿಚಾರ ಮಾಡುತ್ತೇನೆ ಈಗ ಸಹಕಾರ ಇಲಾಖೆ ಬಹಳ ದೊಡ್ಡದಾಗಿ ಬೆಳೆಯುತ್ತಾ ಇದೆ, ಮತ್ತು ಹೆಚ್ಚು ಹೆಚ್ಚು ಜವಾಬ್ದಾರಿಗಳನ್ನು ಸಹಕಾರ ಸಂಘಗಳಿಗೆ ವರ್ಗಾಯಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ನನಗಾದರೋ ಮನುಷ್ಯರು ನಡೆಸತಕ್ಕಂಥ ಈ ಸಂಘ ಸಂಸ್ಥೆಗಳಲ್ಲಿ ಎಲ್ಲಾ ಪರಿಪಕ್ವವಾಗಿದೆ, ಯಾವ ಆಕ್ಷಪಣೆಯೂ ಇಲ್ಲದೆ ನಡೆಯುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕಾಗುವುದಿಲ್ಲ. ಅಪ್ಪಿ ತಪ್ಪಿ ಕೊಂಚೆ ಆಕ್ಷೇಪಣೆಗಳಿರತಕ್ಕಂಥಾದ್ದನ್ನು ಬಹಳ ದೊಡ್ಡದಾಗಿ ಮಾಡಿ, ಅವಕ್ಕೆ ಬಣ್ಣವನ್ನು ಹಚ್ಚಿ ಅದ್ಭುತವಾಗಿ ಚಿತ್ರಿಸತಕ್ಕಂಥಾದ್ದು ಸಹಕಾರ ಮನೋಧರ್ಮವಲ್ಲ. ಸಣ್ಣ ಪುಟ್ಟ ಆಕ್ಷೇಪಣೆಗಳನ್ನು ದೊಡ್ಡದು ಮಾಡದೆ, ರಚನಾತ್ಮಕ ದೃಷ್ಟಿಯಿಂದ ಅವುಗಳನ್ನು ಸರಿಪಡಿಸಬೇಕು. ಹಾಗೆ ಮಾಡಿಕೊಂಡು ಹೋಗುವುದರಿಂದ, ನಿಜವಾಗಿಯೂ ಸಹಕಾರ ಮಾರ್ಗದಿಂದ, ಒಳ್ಳೆಯ ಪರಿಣಾಮಗಳು ಸಮಾಜದ ಮೇಲೆ ಅದರಲ್ಲಿಯೂ ಆರ್ಥಿಕ ವ್ಯವಸ್ಥೆಯ ಮೇಲೆ, ಆಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಇಷ್ಟು ಮಾತುಗಳನ್ನು ಮಾತ್ರ ನಾನು ತಮ್ಮಲ್ಲಿ ಪ್ರಸ್ತಾಪ ಮಾಡಿ ಸಹಕಾರ ಇಲಾಖೆಯ ಬೇಡಿಕೆಗೆ ಈ ಮಾನ್ಯ ಸಭೆಯು ಒಪ್ಪಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—The question is:

"That the respective sums not exceeding the amounts shown in demands Nos. 5, 23, 25 and 26 be granted to the Government to defray the charges which will come in course of payment during the year ending 31st day of March 1961."

The motion was adopted.

[As directed by the Chair, the Motions for Demands for Grants which were adopted by the House are reproduced below].

DEMAND No. 5.—*Forest.*

10. *Forest.*

"That a sum not exceeding Rs. 2,58,01,900 be granted to the Government to defray the charges

which will come in course of payment during the year ending 31st day of March 1961, in respect of 'Forest'."

DEMAND No. 23.—AGRICULTURE, HORTICULTURE AND FISHERIES.

40. *Agriculture.*

"That a sum not exceeding Rs. 2,38,53,000 be granted to the Government to defry the charges which will come in course of payment during the year ending 31st day of March 1961, in respect of 'Agriculture'."

DEMAND No. 25.—ANIMAL HUSBANDRY.

41. *Animal Husbandry.*

"That a sum not exceeding Rs. 1,02,34,000 be granted to the Government to defray the charges which will come in course of payment during year ending 31st day of March 1961, in respect of 'Animal Husbandry'."

DEMAND No. 26.—CO-OPERATION.

42. *Co-operation.*

"That a sum not exceeding Rs. 92,55,900 be granted to the Government to defray the charges which will come in course of payment during the year ending 31st day of Mach 1961, in respect of 'Co-operation'."

DEMAND No. 29.—CIVIL WORKS.

50. *Civil Works.*

Sri H. M. CHANNABASAPPA (Minister for Public Works).—Sir, I beg to move :—

"That a sum not exceeding Rs. 10,66,77,100 be granted to the Government to defray the charges which will come in course of payment during the year ending 31st day of March 1961, in respect of 'Civil Works'."

Mr. DEPUTY SPEAKER :—Motion moved :

"That a sum not exceeding Rs. 10,66,77,100 be granted to the Government to defray the charges which will come in course of payment during the year ending 31st day of March 1961, in respect of 'Civil Works'."

Mr. DEPUTY SPEAKER.—All other demadds, *viz*., 50, 51, 42, 46, 47, 10, 48 and 53 are also before the House for consideration.

Members' Representation

Sri C. J. MUCKANNAPPA.—Sir, there is some trouble about time. Yesterday it was agreed that the Ministers should take two hours for reply. Now, it is 3-20 P.M. They have exceeded their time by one hour and twenty minutes. I should like to know what is the time allotted to the ruling party and the Opposition ?

Sri B. D. JATTI (Chief Minister).—Out of the total time 50 per cent is to be given to the Congress Party and 50 per cent to the Opposition. Again, out of 50 per cent of the time allotted for the Opposition, 25 per cent is for P. S. P. and 25 per cent for the Independents. Whatever extra time has been taken by the Ministers in their reply can be made up. Today we can make up 20 minutes and tomorrow, one hour.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—12 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಕುಳಿತುಕೊಳ್ಳಲು ನಮ್ಮಿಂದ ಸಾಧ್ಯವಿಲ್ಲ.

Sri B. D. JATTI (Chief Minister).—May I clarify the position, Sir ? Some Hon'ble Members are very keen on taking part in the debate. Those Members who are not interested in taking part in the debate, nobody can compel them to stay. But it is better they stay here and hear others also.

Sri J. B. MALLARADHYA (Nanjangud).—I do not know why the Hon'ble Members should be so touchy about

(SRI J. B. MALLARADHYA)

staying till 7 P. M. In a socialistic pattern of society, we expect labourers to work for 8 hours.

ಶ್ರೀ ಜಿ. ಶಿವಪ್ಪ.—ಬೇರೆ ಎಲ್ಲ ಅಸೆಂಬ್ಲಿಗಳಲ್ಲಿಯೂ ಕಾಲನಿರ್ಧರವಾಗಿದೆ. ಹಿಂದೆ ಇಲ್ಲಿಯೂ ಸಂಜೆ ಐದು ಗಂಟೆಗೆ ಪೂರ್ತಿಯಾಗುತ್ತಿತ್ತು. ನಾವು ಅನೇಕ ವರ್ಷಗಳಿಂದ ಸದಸ್ಯರಾಗಿದ್ದೇವೆ, ನಮಗೆ ಗೊತ್ತಿದೆ.

Sri C. M. ARUMUGHAM (Kolar Gold Fields).—Up to what time we are going to sit today, Sir ?

Sri B. D. JATTI.—There is no difficulty. We can sit till 6-20 P.M. Twenty minutes we can make up today and one hour can be made up tomorrow.

BUDGET ESTIMATES FOR 1960-61 DEMANDS FOR GRANTS No. 29— Civil Works

(*Debate continued.*)

*ಶ್ರೀ ಯು. ಎಂ. ಮಾದಪ್ಪ.—ಸ್ವಾಮಿ, ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯ ಮೇಲೆ ಮಾತನಾಡುತ್ತಾ ಈ ಇಲಾಖೆಗೆ ಸಂಬಂಧಪಟ್ಟ ಖರ್ಚಿನ ವಿಷಯದಲ್ಲಿ ನಾವು ವಿರೋಧ ಮಾಡದಿದ್ದರೂ ಸಲಹೆಯನ್ನು ಕೊಡುವುದರಲ್ಲಿ ಏನು ತಪ್ಪಿಲ್ಲವೆಂದು ತಿಳಿದುಕೊಂಡಿದ್ದೇನೆ. ಹೀಗೆ ನಾವು ಸಲಹೆ ಕೊಟ್ಟರೆ, ಸರ್ಕಾರ ತಪ್ಪುಭಾವನೆಯಿಂದ ನಮ್ಮ ಸಲಹೆಗೆ ಅಪಾರ್ಥ ಕಲ್ಪಿಸಬಾರದೆಂದು ವಿನಂತಿ. ಈಗಾಗಲೇ ಅವರು ಕೊಟ್ಟಿರುವ ಉತ್ತರಗಳನ್ನು ಕೇಳಿದುದರಲ್ಲಿ ಅವರು ಹೀಗೆ ಮಾಡುತ್ತಾರೆಂದು ಅರ್ಥವಾಗಿದೆ.

ಈ ದಿವಸ ಸರ್ಕಾರ ಖರ್ಚುಮಾಡುವಹಣದ ಬಹುಭಾಗ ಈ ಇಲಾಖೆಯಲ್ಲಿ ಖರ್ಚಾಗುತ್ತಿದೆ. ಹಣವನ್ನು ಖರ್ಚುಮಾಡುವಾಗ ಬಹು ಎಚ್ಚರಿಕೆಯಿಂದ ಮಾಡಬೇಕು. ಖರ್ಚುಮಾಡುವ ಪ್ರತಿ ಕಾಸಿನಿಂದಲೂ ಪೂರ್ಣವಾದ ಉಪಯೋಗ ಅಥವಾ ಪ್ರತಿಫಲ ಬರಬೇಕೆಂದು ಒತ್ತಿ ಹೇಳುತ್ತೇನೆ. ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದಾಗ ನನಗೆ ಒಂದು ಅರ್ಥವಾಯಿತು. ಉತ್ತರ ಕೊಡುತ್ತಾ ಸಂಬಂಧಪಟ್ಟ ಮಂತ್ರಿಗಳು ಈ ಇಲಾಖೆಯಲ್ಲಿ measurement instrument and road rollers ಇಲ್ಲವೆಂದು ಒಪ್ಪಿಕೊಂಡಿದ್ದಾರೆ. ಈ ಉಪಕರಣವಿಲ್ಲದೇಇರುವಾಗ ನಾವು ಕೊಟ್ಟಹಣ ವರ್ಷದ ಕೊನೆಯಲ್ಲಿ ಎಷ್ಟು ಮಟ್ಟಿಗೆ ಖರ್ಚಾಗುತ್ತದೆಂದು ಯೋಚನೆ ಮಾಡಬೇಕು. ನನ್ನ ಕ್ಷೇತ್ರದಲ್ಲಿ ನನಗೆ ತಿಳಿದ ಹಾಗೆ ಈ ಒಂದು ಪರಿಸ್ಥಿತಿ ಇದೆ. ಇದನ್ನು ಯಾವ ರೀತಿ ಪರಿಹಾರ ಮಾಡಬಹುದು ಎನ್ನುವ ಬಗ್ಗೆ ಸರ್ಕಾರ ಸಾಕಷ್ಟು ಗಮನ ಕೊಟ್ಟಿಲ್ಲವೆಂದು ಒತ್ತಿ ಹೇಳಬೇಕಾಗಿದೆ. ಯಾವ ಸಬ್ ಡಿವಿಜನ್‌ಗೆ ಹೋಗಲಿ ಅಲ್ಲಿ ಹಣವಿರುತ್ತದೆ, ಆದರೆ ಖರ್ಚುಮಾಡುವುದಕ್ಕವಕಾಶವಿಲ್ಲ, ಖರ್ಚುಮಾಡುವ ವ್ಯಕ್ತಿಗಳು, ಎಂದರೆ, ಇಲಾಖೆಯ ಅಧಿಕಾರಿಗಳಿದ್ದಾರೆ ಅದರೆ ಅವರಿಗೆ ಬೇಕಾದ ಉಪಕರಣವಿಲ್ಲವೆಂದು ಹೇಳುವುದು ಶೋಚನೀಯ. ಹೀಗಾದರೆ ಅವರು ಹೇಗೆ ಖರ್ಚು ಮಾಡುತ್ತಾರೆ? ಅಂದಾಜು ತಯಾರು ಮಾಡುವುದಕ್ಕೆ ಯೂವ ಉಪಕರಣಗಳೂ ಬೇಕಾಗಿಲ್ಲ. ಅಂದಾಜುಗಳಿಗೆ ಮಂಜೂರಾತಿಯಿಲ್ಲ, ಖರ್ಚು ಮಾಡುವಹಾಗಿಲ್ಲ. ಹೀಗಿರುವಾಗ ಇಷ್ಟೊಂದು ಹಣವನ್ನೊದಗಿಸಿದ್ದೇವೆಂದರೆ ಪ್ರಯೋಜನವಿಲ್ಲ. ಎಷ್ಟು ಒದಗಿಸಿದ್ದೇವೋ ಅದರಲ್ಲಿ ಮುಕ್ಕಾಲು ಭಾಗವಾದರೂ ಖರ್ಚುಮಾಡದೇ ಹೋದರೆ ಏನು ಪ್ರಯೋಜನ ? ನನ್ನ ಅಭಿಪ್ರಾಯದಲ್ಲಿ ಮುಕ್ಕಾಲು ಪಾಲು ಕೂಡ ಖರ್ಚಾಗುವುದಿಲ್ಲ. ದಕ್ಷತೆ ಹೆಚ್ಚಾಗಲು ಅದಕ್ಕೆ ತಕ್ಕ ಉಪಕರಣಗಳು ಬೇಕು. ಅವನ್ನು ಆದಷ್ಟು ಜಾಗ್ರತೆ ಒದಗಿಸಬೇಕು. ನಮ್ಮ ಸರ್ಕಾರದಲ್ಲಿ ಸಾಕಷ್ಟು ಸಲಕರಣೆಗಳಿವೆ, ಕೆಲಸಗಳು ನಡೆಯುತ್ತಿವೆ ಎಂದು ಸರ್ಕಾರ ಉತ್ತರ ಕೊಡಬಹುದು. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. 1954, 1955, 1956 ನೆಯ ಇಸವಿಯಿಂದಲೂ ದೇಶದಾದ್ಯಂತ ಮುಖ್ಯ ರಸ್ತೆಗಳು ತಾರುರಸ್ತೆಗಳಾಗಬೇಕೆಂದು ಅಂದಾಜುಮಾಡಿ ಹಣವನ್ನೊದಗಿಸಲಾಯಿತು. ಆದರೆ ಈಗಲೂ ಆ ರಸ್ತೆಗಳು ತಾರಾಗಿಲ್ಲ, ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಸಂಬಂಧಪಟ್ಟ ರಸ್ತೆಗಳು ಮತ್ತು ತಾಲ್ಲೂಕು ತಾಲ್ಲೂಕಿಗೆ ಸಂಬಂಧ ಕಲ್ಪಿಸುವ ರಸ್ತೆಗಳು ಮುಂತಾದುವನ್ನು ತಾರು ಮಾಡಿದ್ದಿದ್ದರೆ ಸರ್ಕಾರಕ್ಕೆ ಸಾಲಾಬಾದು ಖರ್ಚುಕಡಮೆಯಾಗುತ್ತಿತ್ತು. ವರ್ಷ ವರ್ಷವೂ ರಸ್ತೆ ರಿಪೇರಿಗೆ ಇಷ್ಟು ಖರ್ಚಾಗುತ್ತಿರಲಿಲ್ಲ, ಅವರಿಗೆ ಗೊತ್ತಿರುವಂತೆ ರಸ್ತೆಯನ್ನು ತಾರುಮಾಡಿದರೆ ಐದು-ಹತ್ತು ವರ್ಷಗಳವರೆಗೆ ಅದರ ರಿಪೇರಿಗಾಗಿ ಅಷ್ಟು ಖರ್ಚುಮಾಡಬೇಕಾಗಿಲ್ಲ, ಸ್ವಲ್ಪ ಖರ್ಚಿನಲ್ಲೇ ರಿಪೇರಿ ಮಾಡಬಹುದು. ಆದಕಾರಣ ಮೊದಲೇ ಈ ರಸ್ತೆಗಳನ್ನು ತಾರುಮಾಡಿಸಿದ್ದಿದ್ದರೆ, ಇಷ್ಟು ಹಣ ಒದಗಿಸುವ ಅಗತ್ಯವಿರುತ್ತಿರಲಿಲ್ಲ, ಇಷ್ಟು ವರ್ಷಗಳಲ್ಲಿ ಎಷ್ಟೋ ಹಣವನ್ನುಳಿಸಬದುದಾಗಿತ್ತು, ವ್ಯಾಪಾರಾಭಿವೃದ್ಧಿಗೆ ಮುಖ್ಯವಾದ ರಸ್ತೆಗಳನ್ನಾದರೂ ತಾರುಮಾಡಿಸಿಲ್ಲ, ಈಗಲಾದರೂ ಅಂದಾಜು ತಯಾರಿಸಿಲ್ಲದಿದ್ದರೆ, ತಯಾರಿಸಿ ಹೆಚ್ಚು ರಸ್ತೆಗಳನ್ನು ತಾರುಮಾಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಕೆಲವು ಕಡೆ ರಸ್ತೆಗಳನ್ನು ತಾರು ಮಾಡಿಸುತ್ತೇವೆಂದು ತಾರನ್ನು ತರಿಸಿ ಅಲ್ಲಿ ದಾಸ್ತಾನು ಮಾಡಿ ಐದಾರು ವರ್ಷವಾಗಿ ತಾರು ಹಾಳಾಗುತ್ತಿದೆ. ಇಂಥಾದ್ದನ್ನು ಜಾಗ್ರತೆ ಮಾಡಬೇಕು. ಏಕೆ ಜಾಗ್ರತೆ ಮಾಡುತ್ತಿಲ್ಲವೆಂದು ಕೇಳಿದರೆ, ಸ್ಟೀಮ್‌ರೋಡು ರೋಲರ್ ಇಲ್ಲ, ಅಥವ ಬೇರೆ ಸಲಕರಣೆಗಳಿಲ್ಲವೆಂದು ಹೇಳುತ್ತಿದ್ದಾರೆ, ಇದನ್ನೆಲ್ಲ ವಿಚಾರಣೆ ಮಾಡಿ ಎಲ್ಲೆಲ್ಲಿ ಈ ಪರಿಸ್ಥಿತಿ ಇದೆ ಎಂಬುದನ್ನು ನೋಡಿ ಸರಿಪಡಿಸಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಪುನರ್ವ್ಯವಸ್ಥೆ ಮಾಡಬೇಕೆಂದು ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಕೆಲವು ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟಿದ್ದಾರೆ. ಇದೇನೋ ಸಾಧುವಾದ ವಿಷಯ. ಆದರೆ ಹೀಗೆ ಕೊಟ್ಟ ಅಧಿಕಾರವನ್ನು ಎಷ್ಟು ಮಟ್ಟಿಗೆ ಅಧಿಕಾರಿಗಳು ಉಪಯೋಗ ಮಾಡಿದ್ದಾರೆಂಬುದನ್ನು ಮಂತ್ರಿಗಳು ನೋಡಬೇಕು, Delegation of powers ಒಳ್ಳೆಯದು; ಆದರೆ ಇದನ್ನು ಸರಿಯಾಗಿ ಉಪಯೋಗ ಮಾಡದಿದ್ದರೆ ಯಾರ ಕೈಯ್ಯಲ್ಲಿ ಏನೋ ಕೊಟ್ಟಹಾಗುತ್ತದೆ. ಎಗ್ಸಿಕ್ಯುಟಿವ್ ಇಂಜಿನಿಯರ್ ಮತ್ತು

ಅಸಿಸ್ಟೆಂಟ್ ಇಂಜಿನಿಯರುಗಳಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದಾರೆ; ಆದರೆ ಅವರು ಆ ಅಧಿಕಾರಗಳನ್ನು ಉಪಯೋಗ ಮಾಡುತ್ತಿಲ್ಲ. ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ದೃಷ್ಟಿಯಿಂದ ಅಸಿಸ್ಟೆಂಟ್ ಇಂಜಿನಿಯರುಗಳು ಅಂದಾಜುಗಳನ್ನು ಮಾಡಿ ಎಗ್ಸಿಕ್ಯುಟಿವ್ ಇಂಜಿನಿಯರಿಗೆ ಕಳುಹಿಸುವುದು; ಅವರಿಗೆ ಬಂದಾಗ ಅವರು ಕೂಡ ಹಾಗೆಯೇ ಇಟ್ಟುಕೊಟ್ಟುಕೊಳ್ಳುವುದು ಹೀಗೆ ಮಾಡುತ್ತಾರೆ, ಇದನ್ನು ಪ್ರನಿಧಿಗಳಾಗಿರುವ ನಾವು ಹೇಳುವುದು ಧರ್ಮ, ಇಂಥ ಲೋಪಗಳು ಎಲ್ಲೆಲ್ಲಿರುತ್ತವೆಯೋ ನೋಡಿ ಸರಿಪಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಈ ಇಲಾಖೆಯಲ್ಲಿ ರೆವಿನ್ಯೂ ಅಕೌಂಟ್ಸ್‌ನಿಂದ ಹೆಚ್ಚು ಖರ್ಚಾಗುತ್ತಿಲ್ಲ, ಕ್ಯಾಪಿಟಲ್ ಅಕೌಂಟ್ಸ್‌ನಿಂದ ಖರ್ಚಾಗುತ್ತಿದೆ. ಸಾಲತೆಗೆದು ಕೊಂಡ ಹಣದಿಂದಲೇ ಹೆಚ್ಚು ಖರ್ಚಾಗುತ್ತಿದೆ.

ಟಾಕ್ಸೇಷನ್‌ನಿಂದ ಬರುವ ಹಣವನ್ನು ಈ ಬಾಬಿಗೆ ಬಹಳ ಕಡಮೆ ಖರ್ಚುಮಾಡುತ್ತಿದ್ದೇವೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ ಹಣವನ್ನು ಖರ್ಚುಮಾಡಬೇಕಾಗಿದೆ. ಇಲ್ಲದಿದ್ದರೆ ದೇಶದ್ರೋಹ ಮಾಡಿದಂತಾಗುತ್ತದೆ. ಸಾಲ ತೆಗೆದ ಮೇಲೆ ಬಡ್ಡಿ ತೆರಬೇಕಾಗಿ ಬರುತ್ತದೆ. ಹಣ ಖರ್ಚುಮಾಡದಿದ್ದರೆ ಸೇವಿಂಗ್ಸ್ ಆಯಿತೆಂದು ತಾವು ಹೇಳಬಹುದು. ಆದರೆ ಬಡ್ಡಿ ಕೊಡಲೇ ಬೇಕಾಗಿರುತ್ತದೆ. ನಮ್ಮ ಪ್ರಾಜೆಕ್ಟುಗಳು ಲಾಭ ಕೊಡಲು ಪ್ರಾರಂಭಿಸುವುದಕ್ಕೆ ಮುಂಚೆಯೇ ನಾವು ಬಡ್ಡಿ ತೆರಬೇಕಾಗಿಬರುತ್ತದೆ. ಆದ್ದರಿಂದ ನಾವು ಮಾಡುವ ಎಸ್ಟಿಮೇಟುಗಳಿಗೆಲ್ಲಾ ಪ್ರಾರಂಭದಲ್ಲೇ ಒಂದು ನಿರ್ದಿಷ್ಟ ಕಾಲದೊಳಗೆ ಮುಗಿಸಬೇಕೆಂದು ಒಂದು ಷರತ್ತು ಹಾಕಬೇಕು. ದೇಶದಲ್ಲಿ ನಾವು ಸಾಲವನ್ನು ತೆಗೆದು ಈ ಕೆಲಸಗಳನ್ನು ಕೈಕೊಳ್ಳುತ್ತಿರುವುದರಿಂದ ಹೀಗೆ ಮಾಡದಿದ್ದರೆ ಸರ್ಕಾರಕ್ಕೆ ಹೆಚ್ಚು ನಷ್ಟವಾಗುತ್ತದೆಂದು ನಾನು ಹೇಳಬಯಸುತ್ತೇನೆ; ಮುಖ್ಯವಾಗಿ ಸ್ಯಾಂಕ್ಷನ್ ಆದಂಥ ಎಸ್ಟಿಮೇಟುಗಳು ಆಯಾ ವರ್ಷದಲ್ಲೇ ಕಾರ್ಯಗತವಾಗುವ ಒಂದು ಕಾರ್ಯಕ್ರಮವನ್ನ ತಾವು ಕೈಕೊಳ್ಳಬೇಕು. ಈ ಬಗ್ಗೆ ಒಂದು ಕಂಟ್ರೋಲ್ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಪ್ರತಿ 15 ದಿನಗಳಿಗೊಮ್ಮೆ ಎಗ್ಸಿಕ್ಯೂಟಿವ್ ಎಂಜಿನಿಯರುಗಳಿಂದ ಪ್ರೋಗ್ರೆಸ್ ತರಿಸಿಕೊಳ್ಳಬೇಕೆಂದು ಹೇಳುತ್ತೇನೆ.

3-30 P.M.

Sri M. MALLIKARJUNASWAMY (Malavalli).—Is the delay due to not taking on quick decision? Mostly the delay is due to intervention on my part and your part.

ಶ್ರೀ ಯು. ಎಂ. ಮಾದಪ್ಪ.—ನಾನಂತೂ ಇಂಟರ್‌ಫಿಯರ್ ಮಾಡಿಲ್ಲ. ನಿಮ್ಮ ಕಡೆಯವರು ಮಾಡಿರಬಹುದು.

ಇನ್ನು ಕಟ್ಟಡಗಳ ವಿಷಯ. ಹೆಚ್ಚು ಹಣವನ್ನು ಹಾಕಿ ನಾವು ಅನೇಕ ಬಿಲ್ಡಿಂಗುಗಳನ್ನು ಕಟ್ಟುತ್ತಿದ್ದೇವೆ. ಇಲಾಖೆಯಿಂದ ಕಟ್ಟುತಿರುವ ಕಟ್ಟಡಗಳೇನೋ ಬೇಗ ಬರುತ್ತಿವೆ. ಆದರೆ, ಕೆಲವು ಇತರೇ ಇಲಾಖೆಯವರು ತಮಗೆ ಕಟ್ಟಡಗಳನ್ನು ಕಟ್ಟಲಿಕ್ಕೆ ಒಪ್ಪಿಸುತ್ತಾರೆ ಡಿಪಾರ್ಟುಮೆಂಟುಗಳಿಗೆ ತಾವಾಗಿ ಕಟ್ಟಡ ಕಟ್ಟಿಸುವುದಕ್ಕೆ ಸಾಕಷ್ಟು ಸಿಬ್ಬಂದಿಯಿಲ್ಲ, ಇಂಥಾ ಸಂದರ್ಭಗಳಲ್ಲಿ ಹಣ ಲ್ಯಾಪ್ಸ್ ಆಗುತ್ತಿರುವುದನ್ನು ಕಾಣಬಹುದು. ಇದಕ್ಕೆ ಕಾರಣ ನಿಮ್ಮ ಇಲಾಖೆಯವರು ಇತರೇ ಇಲಾಖೆಯವರ ಕೆಲಸಗಳಿಗೆ ಸಾಕಷ್ಟು ಮುತುವರ್ಜಿವಹಿಸುತ್ತಿಲ್ಲ, ವರ್ಷಗಟ್ಟಲೆ ಎಷ್ಟೋ ಹಣ ಖರ್ಚಾಗದೆ ಉಳಿದಿದೆ; ಇತರ ಡಿಪಾರ್ಟ್‌ಮೆಂಟಿನವರು ತಮಗೆ ಏಜೆನ್ಸಿ ವಹಿಸಿದಮೇಲೆ ಅದನ್ನೂ ಸಹ ತಮ್ಮ ಇಲಾಖೆಯ ಕೆಲಸಗಳಂತೆಯೇ ನಡಸಬೇಕು. ತಾವು ತಮ್ಮ ಇಲಾಖೆಯವರಿಗೆ ವರ್ಷಕ್ಕೆ ಒಂದು ಸಬ್-ಡಿವಿಜನ್‌ನಲ್ಲಿ ಎರಡು ಲಕ್ಷಕ್ಕೆ ಕಡಮೆಯಿಲ್ಲದಷ್ಟು ಕೆಲಸ ನಡಸಬೇಕೆಂದು ಹೇಳಿದ್ದೀರಿ. ಆಜ್ಞೆಗನುಗುಣವಾಗಿ ಅವರು ಎರಡು ಲಕ್ಷದಷ್ಟು ಕೆಲಸ ನಡಸಿ ಅಲ್ಲಿಗೆ ಕೈಬಿಡುತ್ತಾರೆ. ಆದುದರಿಂದ ತಾವು ಕನಿಷ್ಠವನ್ನು ಗೊತ್ತುಮಾಡಿರುವಂತೆ ಪರಮಾವಧಿ ಎಲ್ಲಿಯವರೆಗೆ ಖರ್ಚುಮಾಡಬೇಕು ಎಂಬುದನ್ನೂ ಪ್ರೋತ್ಸಾಹಿಸಬೇಕು ಎಂದು ನಾನು ಸಲಹೆಮಾಡುತ್ತೇನೆ:

ಇನ್ನು ಮೈನರ್ ಇರಿಗೇಷನ್ ವಿಷಯದಬಗ್ಗೆ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. 1957-58 ರಲ್ಲಿ ಕಾರ್ಯಗತ ಮಾಡಿದಷ್ಟು ಮೈನರ್ ಇರಿಗೇಷನ್ ಕೆಲಸಗಳು 1958 ರಲ್ಲಾಗಲೀ 1959-60 ರಲ್ಲಾಗಲೀ ನಡೆದಿಲ್ಲವೆಂದು ನಾನು ಘಂಟಾ ಘೋಷವಾಗಿ ಹೇಳಬಲ್ಲೆ. ಮೊನ್ನೆತಾನೆ ತಾವು ಕೊಟ್ಟ ಉತ್ತರದಿಂದಲೇ ಇದು ವ್ಯಕ್ತಪಡುತ್ತದೆ. ಒದಗಿಸಿದ ಹಣದಲ್ಲಿ ಮೂರನೆಯ ಒಂದು ಪಾಲು ಮಾತ್ರ ಖರ್ಚಾಗಿದೆ. 1957–58ರಲ್ಲಿ ಸ್ಯಾಂಕ್ಷನ್ ಆದ ಕೆಲಸಗಳೇ 1958-59 ರಲ್ಲೂ ನಡೆಯುತ್ತಿದ್ದು ಇವೊತ್ತಿನವರೆಗೆ ಹೊಸ ಕೆಲಸಗಳು ಏನೂ ಹೆಚ್ಚಿಗೆ ನಡೆದಿಲ್ಲ.

Sri H. M. CHANNABASAPPA.—Does the Hon'ble member mean that the expenditure during the current year is about 1/3 of what was expended in 1957-58 and 1958-59?

ಶ್ರೀ ಯು. ಎಂ. ಮಾದಪ್ಪ.—ಹಾಗಲ್ಲ: 1957ರಲ್ಲಿ ಎಷ್ಟು ಕೆಲಸಗಳಾದುವೊ, ಅದೇ ಮಟ್ಟದಲ್ಲಿ ಇತ್ತೀಚೆಗೆ ಕೆಲಸಗಳು ಪ್ರಾರಂಭವಾಗಿಲ್ಲ. 57–58ರಲ್ಲಿ ಎಂಟು ಕೆಲಸಗಳನ್ನು ತೆಗೆದುಕೊಂಡಿದ್ದರೆ 58–59ರಲ್ಲಿ ಒಂದು ಕೆಲಸವನ್ನು ಮಾತ್ರ ತೆಗೆದುಕೊಂಡಿದ್ದಾರೆ. ಅಂದರೆ ಹಣ ಮಂಜೂರಾಗಿದ್ದರೂ ಅಷ್ಟನ್ನಾದರೂ ಖರ್ಚುಮಾಡಿ ನಿಮ್ಮ ಫಿಜಿಕಲ್ ಟಾರ್ಗೆಟ್ಟನ್ನು ಮುಟ್ಟಿಲ್ಲ.

Sri H. M. CHANNABASAPPA.—Does the Hon'ble member mean that the number of works that were sanctioned and taken up is less to-day than what it was in 1957-58 and 1958-59?

ಶ್ರೀ ಯು. ಎಂ. ಮಾದಪ್ಪ.—ಹೌದು. ಆದುದರಿಂದ ತಾವು ಪ್ರತಿವರ್ಷ ಒಂದು ಪ್ರೋಗ್ರಾಂ ಇಟ್ಟುಕೊಳ್ಳಬೇಕು. ಈಗ ನೋಡಿದರೆ 57–58ರಲ್ಲಿ ಪ್ರಾರಂಭವಾದ ಕೆಲಸಗಳು ಮೊನ್ನೆ ಮೊನ್ನೆಯವರೆಗೂ ಪೂರ್ಣವಾಗದೆ ನಿಂತಿರುವ ಸಂದರ್ಭಗಳಿವೆ. 57-58ರಲ್ಲಿ ಕೆರೆಗಳು ಒಡೆದು ಹೋಗಿವೆಯೆಂದು ರಿಪೋರ್ಟಾಗಿದೆ. ರೈತರು ಕಂದಾಯ ಕೊಡುವುದು ಮಾತ್ರ ತಪ್ಪಲಿಲ್ಲ. ಇಂಥವನ್ನು ಮಾಡಿ ಮುಗಿಸದಿದ್ದರೆ ರೈತರಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ನೀವು ದೊಡ್ಡ ಪ್ರಾಜೆಕ್ಟುಗಳಿಗೆ ಎಷ್ಟು ಗಮನ ಕೊಡುತ್ತೀರೋ ಅಷ್ಟೇ ಮಟ್ಟಿಗೆ ಸಣ್ಣ ಪ್ರಾಜೆಕ್ಟುಗಳ

(ಶ್ರೀ ಯು. ಎಂ. ಮಾದಪ್ಪ)

ವಿಷಯದಲ್ಲೂ ಗಮನಕೊಡಬೇಕು. ದೊಡ್ಡ ಪ್ರಾಜೆಕ್ಟುಗಳು ಫಲಕೊಡುವುದಕ್ಕೆ ಬಹಳ ಕಾಲ ತೆಗೆದುಕೊಳ್ಳುತ್ತವೆ. ಅದೇ ಸಣ್ಣ ಪ್ರಾಜೆಕ್ಟುಗಳು ಸ್ವಲ್ಪ ಖರ್ಚಿನಲ್ಲಿಯೇ ಬೇಗ ಫಲ ಕೊಡಬಲ್ಲವು. ನಮ್ಮ ಪುರಾತನ ಕೆರೆಗಳ ಪೈಕಿ ಕೆಲವು ಬಹಳ ಒಳ್ಳೆಯ ಕೆರೆಗಳಿವೆ. ಅವುಗಳನ್ನು ಇಂದು ದುರಸ್ತುಮಾಡಿಸಿದರೆ ಬೇಗ ಫಲದಾಯಕವಾಗುತ್ತವೆ. ಈ ತತ್ವವನ್ನು ತಾವು ಗಮನಿಸಿ ಸಣ್ಣ ಪ್ರಾಜೆಕ್ಟುಗಳನ್ನೂ ಜಾಗ್ರತೆ ಕೈಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಮೂರನೆಯ ಪಂಚವಾರ್ಷಿಕ ಪ್ಲಾನಿನ ವಿಷಯ. ನಾವೀಗ ಎರಡು ಮತ್ತು ಮೂರನೆಯ ಪ್ಲಾನುಗಳ ಮಧ್ಯದಲ್ಲಿದ್ದೇವೆ. ಒಂದನೆಯ ಯೋಜನೆಯಲ್ಲಿ ಪ್ರಾರಂಭವಾಗದ ಕೆಲವು ಕೆಲಸಗಳನ್ನು ನಾವು ಎರಡನೆಯ ಪ್ಲಾನಿನಲ್ಲಿ ತೆಗೆದುಕೊಂಡಿರುತ್ತೇವೆ. ಅವು ಮುಗಿದಿವೆಯೋ ಇಲ್ಲವೋ ಇನ್ನೂ ನಮಗೆ ಗೊತ್ತಾಗಿಲ್ಲ. ಮುಗಿದಿದ್ದರೂ ನೀರು ಕೊಟ್ಟಿದ್ದಾರೋ ಇಲ್ಲವೋ ಗೊತ್ತಾಗಿಲ್ಲ. ಹೀಗೆಯೇ ಎರಡನೆಯ ಪ್ಲಾನಿನಲ್ಲಿ ಇದ್ದದನ್ನು ಮೂರನೆಯ ಪ್ಲಾನಿನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮುಖ್ಯವಾಗಿ ಒಂದೊಂದು ಪ್ಲಾನಿನ ಕೊನೆಯ ವೇಳೆಗೂ ಏನಾದರೊಂದು ಘಟ್ಟವನ್ನು ಮುಟ್ಟುವಂತೆ ಮಾಡಬೇಕು. ಮೊದಲನೆಯ ಸ್ಟೇಜಿಗೆ ನೀರು ಕೊಡುವ ಮಟ್ಟಿಗಾದರೂ ಬರುವಂತಾಗಬೇಕು. ಇಲ್ಲದಿದ್ದರೆ ನಮ್ಮ ಸಾಲದ ಜೊತೆಗೆ ಬಡ್ಡಿಯೂ ಬೆಳೆಯುತ್ತದೆ. ಆದಕಾರಣ ಇಂಥ ಒಂದು ಏರ್ಪಾಡಿಗೆ ತಾವು ಮನಸ್ಸು ಕೊಡಬೇಕೆಂದು ಹೇಳುತ್ತೇನೆ. ಡೆಟ್‌ಚಾರ್ಜ್‌ಗಳು ನಮಗೆ ಜಾಸ್ತಿಯಾದಂತೆಲ್ಲಾ ನಮಗೆ ಡೆವಲಪ್‌ಮೆಂಟಲ್ ಕಾರ್ಯಗಳಿಗೆ ಹಣವೇ ಉಳಿಯುವುದಿಲ್ಲವೆಂಬುದನ್ನು ತಾವು ಗಮನಿಸಬೇಕು. ನಿಮ್ಮ ಇಲಾಖೆ ಎಷ್ಟು ಹಣ ಉಳಿತಾಯ ಮಾಡುತ್ತದೋ ಅಷ್ಟು ಹಣ ರೆವಿನ್ಯೂ ಅಕೌಂಟಿನಲ್ಲೂ ಉಳಿಯುತ್ತದೆ. ಎರಡನೆಯ ಪ್ಲಾನಿನಲ್ಲಿ ಮುಗಿಸಲಾಗದ ಪ್ರಾಜೆಕ್ಟುಗಳನ್ನು ಮೂರನೆಯ ಪ್ಲಾನಿನಲ್ಲಿ ಹಾಕುತ್ತೇವೆಂದು ಹೇಳಬಹುದು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಮುಖ್ಯವಾದ ಅಂಶಗಳಿರುತ್ತವೆ. ಕೆಲವು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕು, ಅವು ರಡಿಯಾಗಿವೆ, ಪ್ರಯೊರಿಟಿ ಲಿಸ್ಟ್ ರಡಿಯಾಗಿದೆ. ಅವುಗಳನ್ನು ತೆಗೆದುಕೊಳ್ಳುತ್ತೇವೆ ಎಂದರೆ ದೇಶಕ್ಕೆ ತೊಂದರೆಯಾಗುತ್ತದೆ. ಎಲ್ಲೆಲ್ಲಿ ಡಿಸ್ಟ್ರೆಸ್ ಏರಿಯಾ ಇರುತ್ತದೆ, ಫ್ಯಾಮಿನ್ ಎಲ್ಲೆಲ್ಲಿ ಬರುತ್ತದೆ ಅಲ್ಲಿ ನೀರಿನವಸತಿ ಚೆನ್ನಾಗಿದ್ದು, ದೊಡ್ಡ ದೊಡ್ಡ ಹೊಳೆಗಳು ಅಥವಾ ನದಿಗಳು ಇದ್ದರೆ ಅಂಥಾ ಕಡೆ ಕೆಲವು ಪ್ರಾಜೆಕ್ಟುಗಳನ್ನು ಮೊದಲು ತೆಗೆದು ಕೊಳ್ಳುವುದು ಒಳ್ಳೆಯದು. ಮೂರನೆಯ ಪಂಚವಾರ್ಷಿಕ ಯೋಜನೆಯ ಡ್ರಾಫ್ಟನ್ನು ನೋಡಿದೆ. ಕೆಲವುಕಡೆ ಪ್ರಾಜೆಕ್ಟುಗಳನ್ನು ಕಟ್ಟಬೇಕೆಂದು ಸರ್ವೆ ಆಗಿದ್ದರೂ, ಮತ್ತು ಹಿಂದಿನಿಂದ ಅವುಗಳನ್ನು ಕಟ್ಟಬೇಕೆಂದು ಪ್ರಪೋಸಲ್ಸ್ ಇದ್ದರೂ ಕೂಡ ಅದನ್ನು ಸೇರಿಸಿಲ್ಲ. ಯಾವುದೇ ತಾಲ್ಲೂಕು ಆಗಲೀ, ಅಥವಾ ಜಿಲ್ಲೆಯಾಗಲೀ ಪ್ರಪೋಸಲ್ಸ್ ಬಹಳ ದಿವಸಗಳಿಂದಲೂ ಇದ್ದರೆ ಅವುಗಳನ್ನು ಹುಡುಕಬೇಕು. ಕೆಲವು ಪ್ರಪೋಸಲ್ಸ್ 30-40 ವರ್ಷಗಳಿಂದ ಇವೆ. ಆ ಕಾಲದಲ್ಲಿ ಸರ್ಕಾರದಲ್ಲಿ ಹಣ ಇರಲಿಲ್ಲ. ಹಣ ಇಲ್ಲ ಎಂದು ಪೋಸ್ಟ್‌ಪೋನ್ ಮಾಡಿಕೊಂಡು ಬಂದಿರುತ್ತಾರೆ. ಇವೊತ್ತಿನ ದಿವಸ 1946-1947ನೆಯ ಇಸವಿಯಲ್ಲಿದ್ದ ನೀತಿಯನ್ನು ಬಿಟ್ಟು ಬೇರೆ ನೀತಿಯನ್ನು ಅನುಸರಿಸಿದೆ. ರೆವಿನ್ಯೂ ಅಕೌಂಟ್‌ನಿಂದ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಣವನ್ನು ಸಾಲ ತೆಗೆದುಕೆಂಡು ಈ ಪ್ರಾಜೆಕ್ಟ್ ಮೇಲೆ ಇನ್‌ವೆಸ್ಟ್‌ಮಾಡಬಹುದು ಎಂದು ಒಪ್ಪಿಕೊಂಡಿದ್ದೇವೆ. ಆ ನೀತಿಯನ್ನು ಅನುಸರಿಸಿಕೊಂಡಲೂ ಬಂದಿದ್ದೇವೆ. ರೈತರು ತಮ್ಮ ಹಣವನ್ನು ಇನ್‌ಸ್ಟಾಲ್‌ಮೆಂಟ್‌ಪ್ರಕಾರ ವಾಪಸ್ಸು ಕೊಡುವುದಕ್ಕೆ ಒಪ್ಪಿಕೊಂಡಿರುವಾಗ ಹಿಂದೆಗೆಯಬಾರದು. ನಮ್ಮ ತಾಲ್ಲೂಕಿನಲ್ಲಿ ಹೊನ್ನುಹೊಳೆ ಎಂಬಲ್ಲಿ ಪ್ರಾಜೆಕ್ಟ್ ಕಟ್ಟುವುದಕ್ಕೆ ಯೋಗ್ಯ ಸ್ಥಳವಿದೆ. ಅದನ್ನು ಶ್ರೀ ವಿಶ್ವೇಶ್ವರಯ್ಯನವರಕಾಲದಲ್ಲಿ ಸರ್ವೆಮಾಡಿದ್ದರು. ಸರ್ ಮಿರ್ಜಾ ಸಾಹೇಬರವರ ಕಾಲದಲ್ಲಿ ಅದಕ್ಕೆ ಎಸ್ಟಿಮೇಟ್ ಮಾಡಿದ್ದರು. ಅದು ಎಸ್ಟಿಮೇಟ್ ಆಗಿ ಪ್ರಾಜೆಕ್ಟ್ ತೆಗೆದುಕೊಳ್ಳುವ ಸಂದರ್ಭವಿದ್ದರೂ, ಹಣವಿಲ್ಲಎಂದು ಹೇಳಿ ಅದನ್ನು ಹಾಗೆಯೇಕೈಬಿಟ್ಟರು. ಪ್ರಿಲಿಮಿನರಿ ಸರ್ವೆ ಆಗಿದೆ. ಪ್ರಿಲಿಮಿನರಿ ಸರ್ವೆಯಲ್ಲಿ ಅದಕ್ಕೆ 70 ಲಕ್ಷ ರೂಪಾಯಿಗಳು ಖರ್ಚಾಗಿರುತ್ತದೆ, 20 ಸಾವಿರ ಎಕರೆ ಭೂಮಿ ಇರ್ರಿಗೇಟ್ ಆಗುತ್ತದೆ. ಈರೀತಿ 70 ಲಕ್ಷ ರೂಪಾಯಿ ಖರ್ಚಾದ್ದರೂ, 20 ಸಾವಿರ ಎಕರೆ ಇರ್ರಿಗೇಟ್ ಆದರೆ ರೆಮ್ಯುನರೆಟೀವ್ ಆಗುತ್ತದೆ. ಇದನ್ನು ಮೂರನೇ ಪಂಚವಾರ್ಷಿಕ ಯೋಜನೆಯ ಡ್ರಾಫ್ಟ್‌ನಲ್ಲಿ ಸೇರಿಸಬೇಕು. ಇಲ್ಲದೆ ಇದ್ದರೆ ಕಷ್ಟವಾಗುತ್ತದೆ. ಈ ಪ್ರದೇಶ 1952ರಿಂದ 1956ರವರೆಗೆ ಎಷ್ಟಾವರ್ತಿ ದುಷ್ ಪರಿಸ್ಥಿತಿಗೆ ಒಳಗಾಗಿದೆ ಎಂಬುದನ್ನು ನೋಡಬೇಕು. ಅದು ಎರಡು ನದಿಯಿರುವ ಭೂಮಿ. ಆದು ನಿಜವಾಗಿಯೂ ಹೊನ್ನಿನ ಭೂಮಿ, ಫಲವತ್ತಾದ ಭೂಮಿ. ಇದರಿಂದ ಎರಡು ತಾಲ್ಲೂಕಿಗೂ ಅನುಕೂಲವಾಗುತ್ತದೆ. ಚಾಮರಾಜನಗರ ಮತ್ತು ಯಳಂದೂರು ಈ ಎರಡು ತಾಲ್ಲೂಕುಗಳಿಗೂ ಅನುಕೂಲವಾಗುತ್ತದೆ. ಬರಿನಮ್ಮ ತಾಲ್ಲೂಕಿನ ವಿಷಯವನ್ನೇ ಹೇಳುತ್ತಿಲ್ಲ. ಎಲ್ಲೆಲ್ಲಿ ಇಂಥಾ ಪ್ರಾಜೆಕ್ಟುಗಳು ಇವೆ, ಯಾವ ಯಾವ ತಾಲ್ಲೂಕುಗಳಲ್ಲಿ ಇಂಥಾ ಪ್ರಾಜೆಕ್ಟ್ ಬಹಳ ದಿವಸಗಳಿಂದಪ್ರಪೋಸಲ್ ಸ್ಟೇಜಿನಲ್ಲಿ ಇವೆಯೋ ಅಂಥವುಗಳನ್ನು ತೆಗೆದುಕೊಳ್ಳಬೇಕು. ಇನ್‌ಫ್ಲೂಯನ್ಸ್ ಮಾಡುತ್ತಾರೆಂದು ದಯವಿಟ್ಟು ತಿಳಿದುಕೊಳ್ಳಬೇಡಿ. ಹಿಂದಿನಿಂದ ಹೀಗೆ ಬಂದಂಥಾದ್ದು ಎಲ್ಲೆಲ್ಲಿ ಇದೆಯೋ ಅದನ್ನು ಹುಡುಕಿಸಿಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ. ಈ ಇಲಾಖೆಯ ವಿಷಯದಲ್ಲಿ ಹೇಳುವುದಕ್ಕೆ ಬೇಕಾದಷ್ಟು ಇದೆ. ಆದರೆ ವಿಷಯಗಳನ್ನು ಇವೊತ್ತು ಹೇಳುವುದಕ್ಕೆ ಅವಕಾಶವಿಲ್ಲ. ಹೆಚ್ಚಿಗೆಕಾಲವನ್ನು ತೆಗೆದುಕೊಂಡರೆ ನಮ್ಮ ಪಾರ್ಟಿಯಕಾಲ ಹೋಗುವುದರಿಂದ ನನ್ನ ಭಾಷಣವನ್ನು ಇಷ್ಟಕ್ಕೆಮುಗಿಸಿ ನಾನು ಹೇಳಿರತಕ್ಕ ಸಲಹೆಯನ್ನು ಜಾಗ್ರತೆ ಕಾರ್ಯಗತ ಮಾಡುತ್ತೀರೆಂದು ನಂಬ ನನ್ನ ಭಾಷಣವನ್ನು ಮುಗಿಸುತ್ತೇನೆ

*ಶ್ರೀ ಎಂ. ಕೆ. ಸುರ್‌ಪುರ್ (ಇಂಡಿ).—ಸ್ವಾಮಿ, ನಾನು P.W.D. ಡಿಮ್ಯಾಂಡನ್ನು ಒಪ್ಪಿಕೊಳ್ಳುತ್ತಾ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ಈಗ ಮುಖ್ಯವಾಗಿ ನಾನು ಮಾತನಾಡುವವಿಷಯ ಎಂದರೆ, ಅಪ್ಪರ್ ಕೃಷ್ಣ ಯೋಜನೆಯ ವಿಷಯವಾಗಿ ನಾನು ಕೆಲವು ಸೂಚನೆಗಳನ್ನು ಹೇಳ ಬಯಸುತ್ತೇನೆ. ಅಪ್ಪರ್ ಕೃಷ್ಣ ಯೋಜನೆಯಲ್ಲಿ ಸಂಬಂಧವಿರುವ 3 ಸ್ಥಳಗಳಿವೆ. ಆಲಮಟ್ಟಿ, ಕಮಲ ಡಿಣ್ಣಿ ಮತ್ತು ನಾರಾಯಣಪುರ. ಆಲಮಟ್ಟಿಯಲ್ಲಿ ಡ್ಯಾಂ ಮಾಡಿದರೆ ದೊಡ್ಡ ಊರುಗಳು ಕೆಲವು ಸಣ್ಣ ಊರುಗಳು ಮುಳುಗಿ ಹೋಗುತ್ತವೆ. ಕಮಲ ದಿಣ್ಣಿಯ ಬಳಿ ಡ್ಯಾಂ ಕಟ್ಟಿದರೆ ಕೂಡಲ

ಸಂಗಮೇಶ್ವರ ದೇವಸ್ಥಾನ ಹೋಗುತ್ತದೆ. ಏನುಮಾಡಬೇಕು ? ನಾರಾಯಣಪುರದಬಳಿ ಮಾಡಿದರೆ ಬಿಜಾಪುರ ಜಿಲ್ಲೆಯಲ್ಲಿರುವ ರೈತರು ಮತ್ತು ಜನರು ಮುಳುಗಿ ಹೋಗುತ್ತಾರೆ. ಈ ಮೂರು ಸಂಗತಿಗಳು ನಮ್ಮ ಮುಂದೆ ಇರುತ್ತವೆ. ಇದರಲ್ಲಿ ಯಾವುದನ್ನು ಮುಳುಗಿಸಬೇಕು, ಯಾವುದನ್ನು ಉಳಿಸಬೇಕು ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ನನ್ನಮಟ್ಟಿಗೆ ಹೇಳುವುದಾದರೆ ಆಲಮಟ್ಟಿ ಪ್ರಾಜೆಕ್ಟ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅದರಲ್ಲಿ ಕೆಲವು ಹಳ್ಳಿಗಳು ಮುಳುಗಿ ಹೋಗುತ್ತವೆ. ಅಲ್ಲಿಯವರಿಗೆ ಪರಿಹಾರ ಕೊಡಬೇಕಾಗುತ್ತದೆ. ಬಿಜಾಪುರ ಬರಗಾಲ ಪ್ರದೇಶ. ಅದರ ಸಲುವಾಗಿ ಆಲಮಟ್ಟಿಯಲ್ಲಿ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಹೇಳುತ್ತೇನೆ. ಸರ್ಕಾರದ ಮುಂದೆ ಈ ಮೂರು ವಿಚಾರಗಳು ಇವೆಎಂದು ನಾನು ಕೇಳಿದ್ದೇನೆ. ಕೊಯಿನಾ ನೀರನ್ನು ತೆಗೆದುಕೊಳ್ಳಬೇಕು, ಆಲಮಟ್ಟಿಯಲ್ಲಿ ಪಿಕ್‌ಅಪ್‌ಮಾಡಬೇಕು ಎಂದು ಒಂದು ವಿಚಾರ ಸರ್ಕಾರದಲ್ಲಿಯಿದೆ ಎಂದು ಕೇಳಿದ್ದೇನೆ. ಕೊಯಿನಾನೀರಿನಲ್ಲಿ ಬೊಂಬಾಯಿ ಗೌರ್ನಮೆಂಟಿನವರಿಗೆ ಷೇರು ಏತಕ್ಕೆ ಕೊಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ಘಟಪ್ರಭಾ ಯೋಜನೆಯನ್ನು ಮಾಡುವಾಗ ಮೊದಲು ಹಡಗಲಿಯಲ್ಲಿ ಮಾಡಬೇಕು ಎಂದು ಮುಂಬೈ ಸರ್ಕಾರದೊಳಗೆ ಇದ್ದಾಗ ಶ್ರೀ ಎಂ. ಪಿ. ಪಾಟೀಲರು, ಮತ್ತು ಜತ್ತಿ ಸಾಹೇಬರು ಹೇಳುತ್ತಿದ್ದರು. ಮುಂಬೈ ಗೌರ್ನಮೆಂಟಿನವರು ಕೊಯಿನಾನೀರನ್ನು ಪೂರ್ತಿ ಇಟ್ಟುಕೊಂಡರೆ ನಮ್ಮ ಜಿಲ್ಲೆಯ ರೈತರಿಗೆ ಲುಕ್ಸಾನು ಆಗುತ್ತದೆ. ಮೈನ್ ಡ್ಯಾಂ ಅನ್ನು ಆಲಮಟ್ಟಿಯಲ್ಲಿ ಕಟ್ಟುವುದರಿಂದ ಕೆಲವು ಊರುಗಳು ಹೋಗುತ್ತವೆ. ಆದರೂ ಆಲಮಟ್ಟಿಯಲ್ಲೇ ಮಾಡಬೇಕೆಂದು ಇಟ್ಟುಕೊಂಡಿದ್ದಾರೆಂದು ಭಾವನೆ ಮಾಡುತ್ತೇನೆ. ಆಲಮಟ್ಟಿಯಲ್ಲಿ ಕಟ್ಟುವುದರಿಂದ ನಮ್ಮ ಜಿಲ್ಲೆಗೆ ಹಿತವಿದೆ. ಆದ್ದರಿಂದ ಅದರಸಲುವಾಗಿ ಆಲಮಟ್ಟಿಯಲ್ಲೇ ಕಟ್ಟಬೇಕು ಎಂದು ನಾನು ತಮಗೆ ನಮ್ರವಾದ ಸೂಚನೆ ಮಾಡಿಕೊಳ್ಳುತ್ತೇನೆ. ಆದರಿಂದ ನಮ್ಮಜಿಲ್ಲೆಗೆ ಹೆಚ್ಚುನೀರಾವರಿ ಉಪಯೋಗಬರುತ್ತದೆ. ಇನ್ನು ನಾರಾಯಣಪುರದ ವಿಷಯವನ್ನು ಹೇಳುತ್ತೇನೆ. ಅಲ್ಲಿ ಮೈನ್ ಡ್ಯಾಂ ಆದರೆ ಬಿಜಾಪುರಕ್ಕೆ ಮಾತ್ರ ಅನುಕೂಲವಾಗುತ್ತದೆ. ಆಲಮಟ್ಟಿ ಪಿಕ್ ಅಪ್ ವೇರ್ ಮಾಡುವುದರಿಂದ ಅದು ಕೊಯಿನ ಮೇಲೆ ಡಿಪೆಂಡ್ ಆಗುತ್ತದೆ. ಅದು ಲೈಫ್ ಮತ್ತು ಡೆತ್ ಪ್ರಶ್ನೆಇದೆ. ಆದ್ದರಿಂದ ನಾನು ಹೇಳುವುದು ಇಷ್ಟೆ ದಯವಿಟ್ಟು ತಾವು ಕೊಯಿನಾ ಮೇಲೆ ಡಿಪೆಂಡ್ ಆಗಬಾರದು. ವಾಟರ್ ಷೇರ್ ಹೇಗೆ ಬೇಕಾದರೂ ಮಾಡಿಕೊಳ್ಳಿ. ತಾವು ಕೊಯಿನಾಮೇಲೆ ಡಿಪೆಂಡ್‌ಆಗಬೇಡಿ ಎಂದು ಹೇಳುತ್ತೇನೆ. ಕೊಯಿನಾದಲ್ಲಿ ಇರ್ರಿಗೇಷನ್ ಸಲುವಾಗಿ ಮಾಡುವುದಕ್ಕೆ ಇಚ್ಛೆಯಿಲ್ಲ ಮೊದಲನೆಯ ಸ್ಟೇಜ್ ಕಂಪ್ಲೀಟ್ ಆದಮೇಲೆ ಇರ್ರಿಗೇಷನ್ ಕೆಲಸ ಪ್ರಾರಂಭ ಮಾಡುತ್ತಾರೆ. ಮುಂದೆ ಇರಿಗೇಷನ್ ಸಲುವಾಗಿ ಮಾಡುತ್ತಾರೆ ನೀರು ಕೊಡುತ್ತಾರೆ ಎಂದರೆ, ಪಾಕಿಸ್ಥಾನಕ್ಕೂ ಹಿಂದೂಸ್ಥಾನಕ್ಕೂ ವಾಟರ್ ಡಿಸ್ಟ್ರಿಬ್ಯೂಟ್ ಆದತರಹ ಆಗುತ್ತದೆಯೆಂದು ಖಂಡಿತವಾಗಿ ಈ ಹೌಸ್‌ನಲ್ಲಿ ಹೇಳುತ್ತೇನೆ. ಈ ಪ್ರಾಜೆಕ್ಟ್ ಸಲುವಾಗಿ ಇಷ್ಟುಹೇಳುವುದು. ತಾವು ದಯವಿಟ್ಟು ಕೊಯಿನಾ ಮೇಲೆ ಡಿಪೆಂಡ್ ಮಾಡಬೇಡಿರಿ ಎಂದು ಹೇಳುತ್ತೇನೆ.

ಈಗತಾವು ಎಲ್ಲಾಜಿಲ್ಲೆಗಳಲ್ಲೂ ಸಬ್‌ಡಿವಿಜನ್ ಮಾಡಿ ಕೆಲಸಮಾಡಿಸುತ್ತಿದ್ದೀರಿ. ಮುದ್ದೆಬಿಹಾಳ್‌ನಲ್ಲಿ ಹೆಚ್ಚು ಕೆಲಸವಾಗಿ ಇಂಡಿ ಸಬ್‌ಡಿವಿಜನ್‌ನಲ್ಲಿಕೇವಲ ಸೇಕಡ 30ರಷ್ಟು ಮಾತ್ರ ಆಗಿದೆ. ಇಂಡಿಯಲ್ಲೂ ಹೆಚ್ಚು ಕೆಲಸಗಳಾಗಬೇಕಾಗಿರುವುದರಿಂದ ಅದಕ್ಕೆ ಪ್ರತ್ಯೇಕ ಸಬ್‌ಡಿವಿಜನ್ ಮಾಡಿ ಮುದ್ದೆಬಿಹಾಳ್ ಸಬ್‌ಡಿವಿಜನ್ ಪ್ರತ್ಯೇಕಿಸಿ ಆಗಬೇಕಾಗಿರುವ ಕೆಲಸಗಳನ್ನು ಬೇಗ ಮಾಡಬೇಕೆಂದು ಸೂಚಿಸುತ್ತೇನೆ. ಇನ್ನು ರಸ್ತೆಯ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಬಿಜಾಪುರವನ್ನು ಅನೇಕರು ನೋಡಿದ್ದಾರೆ. ಬಿಜಾಪುರದಿಂದ ಬೆಂಗಳೂರಿಗೆ ಹೇಗೆ ಬರಬೇಕು ? ರಸ್ತೆ ಸರಿಯಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಿಜಾಪುರ ಮಳೆಗಾಲದಲ್ಲಿ ಐಲೆಂಡಾಗುತ್ತದೆಂದು ಹೇಳುತ್ತಾರೆ. ಹಾಗಿರುವಾಗ ಮಳೆಯಾದ ಮೇಲೆ ಅಲ್ಲಿ ಬರಗಾಲ ಹೇಗೆ ಬರುತ್ತದೆ ?

ಶ್ರೀ ಎಂ. ಕೆ. ಸುರ್‌ಪೂರ್.—ಕೃಷ್ಣಾ ಪ್ರಾಜೆಕ್ಟ್ ಕಡೆ ಮಳೆಯಾಗಿ ಅಲ್ಲಿಂದ ಹೊಳೆ ಹರಿಯುತ್ತದೆ. ದಯೆಯಿಟ್ಟು ಫೇಸ್ಡ್ ಪ್ರೊಗ್ರಾಂ ಹಾಕಿ ಒಂದುಪಟ್ಟಿ ಮಾಡಿ ಯಾವ ಕೆಲಸ ಮೊದಲಾಗಬೇಕು, ಯಾವುದು ಅನಂತರ ಮಾಡಬಹುದು ಎಂದು ನೋಡಿ ಅದರಂತೆ ಕೆಲಸಮಾಡಬೇಕು. ಎಲ್ಲವನ್ನೂ ಒಂದೇಸಲ ಮಾಡಿ ಎಂದು ಹೇಳುತ್ತಿಲ್ಲ.

ರಸ್ತೆಗೆ ಟಾರು ಮಾಡುವವಿಚಾರವಿದೆ, ಟಾರು ಮಾಡುವುದಕ್ಕೆ ಮೊದಲು ಕರ್‌ವರ್ಟ್, ಸೇತುವೆ ಮುಂತಾದುವನ್ನು ಮಾಡಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಹಣದ ಅನುಕೂಲತೆಯನ್ನು ನೋಡಿ ಮಳೆಗಾಲದಲ್ಲಿ ತೊಂದರೆಯಾಗದಂತೆ ಮೊದಲು ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಮೈನರ್ ಇರಿಗೇಷನ್ ಸಲುವಾಗಿ ನಮ್ಮಲ್ಲಿ 40–50 ಸ್ಕೀಮುಗಳು ಆಗುತ್ತಿವೆ. ಅದರಸಲುವಾಗಿ ಒಂದೇ ಒಂದು ಸಬ್‌ಡಿವಿಜನ್ ಇರುವುದರಿಂದ ಹೆಚ್ಚು ಕೆಲಸವಾಗುತ್ತಿಲ್ಲ. ಆದುದರಿಂದ ಸಿಬ್ಬಂದಿಯನ್ನು ಹೆಚ್ಚಾಗಿ ಕೊಟ್ಟು ತೀವ್ರವಾಗಿ ಕೆಲಸಮಾಡಬೇಕು.

ಮಾನ್ಯಸಚಿವರು ಬಹಳ ಕೆಲಸ ಮಾಡಿದ್ದಾರೆ. ಬಹಳ ಚೆನ್ನಾಗಿ ಲೋಕೋಪಯೋಗಿ ಶಾಖೆ ಕೆಲಸಮಾಡುತ್ತಿದೆ. ಹಾಗಿರುವಾಗ ಕೆಲವರು ಟೀಕೆ ಮಾಡಿದರೆ ಕೋಪಬರುವುದು ಸ್ವಾಭಾವಿಕ. ನನ್ನ ಅನುಭವದಂತೆ ಆಗಿರುವ ಅನೇಕ ಉಪಯುಕ್ತ ಕೆಲಸಗಳ ಸಲುವಾಗಿ ಆಭಾರ ಮನ್ನಿಸಿ ಇಷ್ಟು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, 30ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಸರ್ಕಾರದ ಪರವಾಗಿ ಅಣ್ಣ ಚನ್ನಬಸವಣ್ಣನವರು ಖರ್ಚುಮಾಡುವಾಗ ಎಷ್ಟುವೇಗದಲ್ಲಿ, ಎಷ್ಟು ಕಾತರದಿಂದ ಎಷ್ಟು ಎಚ್ಚರದಿಂದ ಎಷ್ಟು ವಿಶ್ವಸನೀಯವಾಗಿ ಮುಂದುವರಿಯುತ್ತಿದ್ದಾರೆಂಬುದನ್ನು ಪರಿಶೀಲನೆ ಮಾಡಿದರೆ, ನಿಜವಾಗಿಯೂ ಅವರ ಕೈಲಿ ಇಷ್ಟುಭಾರ ಹೊರುವ ಶಕ್ತಿಯಿದೆಯೇ, ಅವರಲ್ಲಿ ವಿಶ್ವಾಸವಿಟ್ಟರೆ ಕೆಲಸವಾಗುತ್ತದೆಯೇ ಎಂದು ಯೋಚನೆ ಮಾಡಿನೋಡಿದರೆ ಕೆಲವೊಂದು ವೇಳೆ ಅವರು ಮುಗ್ಗರಿಸಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಅವರನ್ನು ಯಾವಾಗಲೂ ಹೊಗಳಲೇಬೇಕೆಂದು ಶ್ರೀ ವರ್ಮಾ ಶಿವಪ್ಪನವರು ಹೇಳುತ್ತಾರೆ. ಆದರೆ ತಪ್ಪಿದೆಯೆಂದು ಹೇಳುವವರು ಅವರು ಉನ್ನತಿಗಾಗಿಯೇ ಹೇಳುತ್ತಾರೆ, ಹೊಗಳುವವರು ತಮ್ಮ ಕೆಲಸವಾಗುವವರೆಗೆ ಮಾತ್ರ ಹೊಗಳುತ್ತಾರೆ, ಗಾಣವು ರಸ ತೆಗೆದುಕೊಂಡು ಸಿಪ್ಪೆಯನ್ನ ಬಿಸಾಡುವಂತೆ ಲಾಭ ಪಡೆಯುವವರು ತಮ್ಮ ಆಕಾಂಕ್ಷೆ ಈಡೇರುವವರೆಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹೊಗಳಿ ಆಮೇಲೆ ಕೈಬಿಡುತ್ತಾರೆ. ಮಿರ್ಜಾರವರಿದ್ದಾಗಲೂ ಹೊಗಳಭಟ್ಟರಿದ್ದರು, ಮಾಧವರಾಯರಿದ್ದಾಗಲೂ ಇದ್ದರು, ಕಾಂಗ್ರೆಸ್ ಸರ್ಕಾರ ಬಂದ ಮೇಲೂ ಇದ್ದಾರೆ. ಅವರ ಪೈಕಿ ಶಿವಪ್ಪನವರು ಒಬ್ಬರು.

Sri G. SIVAPPA.—Sir, I rise to a point of order.

He cannot make personal allegations. After all, whenever Sri Muckannappa says anything, we take it lightly. But, he should not make personal allegations and he should not speak in this tone.

Sri C. M. ARUMUGHAM.—What is your ruling, Sir ?

Mr. DEPUTY SPEAKER.—I did not catch the point.

Sri G. SIVAPPA.—He should not make personal allegations.

Mr. DEPUTY SPEAKER.—Yes. Personal allegations should not be made.

Sri C. J. MUCKANNAPPA.—If I have made personal allegations and if the Speaker tells me, I will ask Sri Sivappa to pardon me. But, I have not made any personal allegations at all. Why should he raise a point of order ?

Mr. DEPUTY SPEAKER.—That is all right.

*ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ಸುರಪೂರ್ ರವರು ಹೇಳಿದಂತೆ ಏನುಬೇಕಾದರೂಮಾಡಿ, ಆದರೆ ಹಳೆಯ ಮೈಸೂರನ್ನು ತ್ಯಾಗಮಾಡಬೇಡಿ. ಹಳೆಯ ಮೈಸೂರಿನಲ್ಲಿ ಯಾವ ಯಾವ ಯೋಜನೆ ಹಾಕಿ ಎಷ್ಟು ಪ್ರಮಾಣದಲ್ಲಿ ಜನರಿಗೆ ಲೋಕೋಪಯೋಗಿ ಶಾಖೆ ಕೆಲಸಮಾಡಿ ಅನುಕೂಲಮಾಡಿದೆ ಎಂದು ನೋಡಿದರೆ ಹಳೆಯ ಮೈಸೂರಿನಲ್ಲಿ ಯಾವ ದೊಡ್ಡ ಕೆಲಸವನ್ನೂ ಪ್ರಾರಂಭಿಸಿಲ್ಲ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯ ಮಾತಲ್ಲ ಎಂದು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಶರಾವತಿ ಯೋಜನೆಯಲ್ಲಿ ನೂರು ಕೋಟಿ ರೂಪಾಯಿ ಖರ್ಚಾಗುವಾಗ ನಮ್ಮ ಭಾಗದಲ್ಲಿಯೂ ಏಕೆ ಖರ್ಚಾಗಬಾರದೆಂದು ಕೆಲವರು ಹೇಳುತ್ತಾರೆ. ಮೈಸೂರಿನ ಹೊರ ಭಾಗಕ್ಕೆ ಎಷ್ಟು ಹಣ ಖರ್ಚಾಗುತ್ತಿತ್ತು, ವಿಶಾಲ ಮೈಸೂರಾದ ಮೇಲೆ ಎಷ್ಟು ಖರ್ಚಾಗುತ್ತಿದೆ, ಅಷ್ಟು ಹಣವನ್ನು ಮೈಸೂರು ಯಾವ ಮಾರ್ಗದಲ್ಲಿ ತನ್ನ ಅಭಿವೃದ್ಧಿಯನ್ನು ಹೊಂದುತ್ತಿತ್ತೊ ಅದನ್ನು ಕುಂಠಿಸದೆ ಇರುವ ರೀತಿಯಲ್ಲಿ, ಶ್ರೀಮಾನ್ ಚನ್ನಬಸಪ್ಪನವರು ಯಾರ ವಶೀಲಿಬಾಜಿಗೂ ಬೀಳದೆ ಮಾಡುತ್ತಾರೆ, ಆ ದಿಟ್ಟತನ ಅವರಲ್ಲಿದೆ, ಎಂದು ಮತ್ತೊಮ್ಮೆ ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ಅವರಿಗೆ ಶಹಭಾಸ್‌ಗಿರಿಯನ್ನು ಕೊಡುತ್ತಿದ್ದೇನೆ. ಸರಿಯಾದದ್ದನ್ನು ಸರಿಎಂದು ಹೇಳುವುದರಲ್ಲಿ ಯಾರಿಗೂ ತಪ್ಪು ಎನಿಸುವುದಿಲ್ಲ ಶ್ರೀಮಾನ್ ಚನ್ನಬಸಪ್ಪನವರಾಗಲಿ ಮತ್ತು ನಾನಾಗಲೀ ಅಥವಾ ಮುಖ್ಯ ಮಂತ್ರಿಗಳಾಗಿರುವ ಜತ್ತಿಯವರಾಗಲಿ ದಾಯಾದಿಗಳಲ್ಲ. ಒಳ್ಳೆಯ ಕೆಲಸಮಾಡಿದರೆ ಒಳ್ಳೆಯ ಮಾತು, ಹೋಗತಕ್ಕ ಮಾರ್ಗಸರಿಯಿಲ್ಲವೆಂದು ತೋರಿದಾಗ ಅದನ್ನು ಸರಿಯಿಲ್ಲವೆಂದು ಹೇಳುವುದರಲ್ಲಿ ತಪ್ಪಿಲ್ಲ.

ಶ್ರೀ ಎಂ. ರಾಮಪ್ಪ.—ಮಂತ್ರಿಗಳ ವಿಷಯವನ್ನು ಏಕೆ ಮಾತನಾಡುತ್ತಿದ್ದೀರಿ ?

4-00 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಮಾತನಾಡುವಾಗ ಸ್ವಲ್ಪ temper ಕಡಮೆ ಮಾಡಿದ್ದೇನೆಂದು ಮಾನ್ಯ ಸ್ನೇಹಿತರು ಹೇಳುತ್ತಾರೆ. ನೋಡುವವರಿಗೂ ಮತ್ತು ಕೇಳುವವರಿಗೂ ಸಹ ಸ್ವಲ್ಪ ಸಮಂಜಸವಾಗಿರಬೇಕು. ಯಾವಾಗಲೂ ಗಾಡಿ ಒಂದೇ ವೇಗದಲ್ಲಿ ಓಡುತ್ತಿದ್ದರೆ ಅದು ಎಲ್ಲಿಯಾದರೂ derail ಆಗುತ್ತದೆ ಎನ್ನುವ ಭಯ ನನಗಿದೆ. ಅದಕ್ಕೋಸ್ಕರವಾಗಿ ನಾನು ಸರ್ಕಾರವನ್ನು ಕೊಂಡಾಡುವ ದೃಷ್ಟಿಯಲ್ಲಿ ನಿಮಗಿಂತಲೂ ಸ್ವಲ್ಪ ಹಿಂದೆ ಬಿದ್ದಿದ್ದೇನೆಂದರೆ ಅತಿಶಯೋಕ್ತಿಯಾಗಲಾರದು.

Minor irrigation, production of electricity, roads and buildings ಇವುಗಳಲ್ಲಿ ಒಂದೊಂದು ವಿಷಯವನ್ನೂ ನಾವು ಪರೀಶಿಲನೆಗೆ ತೆಗೆದುಕೊಂಡರೆ ಇವೊತ್ತಿನದಿವಸ ಹಳೆಯ ಮೈಸೂರಿನಲ್ಲಿ ಎಷ್ಟು ಸಾವಿರ ಮೈಲಿ ರಸ್ತೆಯನ್ನು ಮಾಡಿದ್ದಾರೆ. ಅಸೆಂಬ್ಲಿಯಲ್ಲಿ ಈ ವಿಷಯ ಬರಬಹುದು, ಚರ್ಚೆಯಾಗುವಾಗ ಸ್ವಲ್ಪ ಅಡ್ಡಿ ಇರಲಿ ಎಂದು ನಾವು ಇಷ್ಟು ಸಾವಿರ ಮೈಲಿ ರಸ್ತೆ ಮಾಡುತ್ತೇವೆಂದು ಸರ್ಕಾರದವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇನ್ನೂ ಮಾಡುತ್ತಾರೆ ಎನ್ನುವುದರಲ್ಲಿಯೇ ಇದೆ. ಹೊರಗಡೆಯಿಂದ ಬಂದಿರುವ ಭಾಗಗಳಲ್ಲಿ ಎಷ್ಟು ಹಣವನ್ನು ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೋಸ್ಕರ ರಾಜ್ಯ ಸರ್ಕಾರದ ಹಣ ಮತ್ತು ಕೇಂದ್ರ ಸರ್ಕಾರದಿಂದ ಕೊಟ್ಟಿದ್ದ ಹಣವನ್ನು ವಿನಿಯೋಗ ಮಾಡಿದ್ದಾರೆ ? ಜನವರಿ ಮತ್ತು ಫೆಬ್ರವರಿ ತಿಂಗಳಿನ ಪತ್ರಿಕೆಗಳನ್ನು ಯಾರಾದರೂ ಓದಿದ್ದರೆ ಈ ವಿಷಯ ಅರ್ಥವಾಗುತ್ತದೆ. ಶ್ರೀಮಾನ್ ಚನ್ನಬಸಪ್ಪನವರು ಒಂದು ಅಡಿಗಲ್ಲನ್ನು ಹಾಕಿದರು, ಒಂದು ಸೇತುವೆಯನ್ನು open ಮಾಡಿದರು, ರಸ್ತೆಯ ಪ್ರಾರಂಭೋತ್ಸವವನ್ನು ನಡೆಸಿದರು ಎಂಬುದನ್ನು ನೋಡಿದರೆ ಇವರು ಹಳೆಯ ಮೈಸೂರನ್ನು ಮರೆತು ಹೊಸ ಮೈಸೂರಿನ ಕಡೆಗೆ ಅಲ್ಲಿಯ ಜನಾಭಿಪ್ರಾಯವನ್ನು ರೂಢಿಸಿಕೊಳ್ಳುವುದಕ್ಕೋಸ್ಕರವಾಗಿ ಏನಾದರೂ ಪ್ರಯತ್ನ ಮಾಡುವ ದೃಷ್ಟಿಯಿಂದ ಅತ್ತ ಕಡೆಗೆ ಸಾಗಿದ್ದಾರೇನೊ ಎಂದು ಅನ್ನಿಸುತ್ತದೆ.

(*Interruption by Sri G. Venkatai Gowda*)

ಮನೆಯಲ್ಲಿರುವವರನ್ನು ಬಿಟ್ಟು ಬೀದಿಯಲ್ಲಿರುವವರಿಗೆ ಊಟಹಾಕಿ, ಮನೆಯವರನ್ನು ಉಪವಾಸ ಇಡಬೇಕೆಂಬುದು ಯಾವ ತತ್ವವೂ ಅಲ್ಲ, ಯಾವನೀತಿಯೂ ಅಲ್ಲವೆಂಬುದನ್ನು ನಾನು ಸಭಾಸದಸ್ಯರಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಬೀದಿಯಲ್ಲಿರುವವರು ಯಾರು ಒಳಗಿನವರು ಯಾರು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಒಂದು ಉದಾಹರಣೆ ಹೇಳಿದೆನೇ ಹೊರತು ಅವರನ್ನು ಬೀದಿ

ಯವರು, ಹೊರಗಿನವರು ಎನ್ನುವ ದೃಷ್ಟಿಯಿಂದ ನೋಡಲಲ್ಲ.

Sri S. D. KOTHAVALE.—The idea seems to be that in old Mysore there is much progress from the point of communications and other things. Nobody desires that there should be stoppage of progress in old Mysore. But the idea is to give some weightage to some backward areas so that in five or six years these areas may be brought on a Par with old Mysore.

Sri C. J. MUCKANNAPPA.—That is what I am also appealing to Government. In their earnestness to develop the backward areas, let them not neglect old Mysore. ಹಿಂದುಳಿದಿರುವ ಪ್ರದೇಶವನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳುವಾಗ ನಮ್ಮನ್ನು ನೂರು ವರ್ಷ ಹಿಂದಕ್ಕೆ ತಳ್ಳುವುದನ್ನು ನಾನು ಒಪ್ಪುವುದಿಲ್ಲ. ಬಡ್ಜೆಟ್‌ನಲ್ಲಿರುವ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀಮಾನ್ ಚನ್ನಬಸಪ್ಪನವರು ಮೂರನೆಯ ಸಾರಿ ಮಂತ್ರಿ ಮಂಡಲದಲ್ಲಿ ಬರುತ್ತಿದ್ದಾರೆ. ಮೈಸೂರಿನ ಯಾವ ಯಾವ ಭಾಗದಲ್ಲಿ ಏನೇನು ಕೆಲಸ ಆಗಬೇಕು, ಏನೇನು ಕೆಲಸ ನಿಂತುಹೋಗಿದೆ, ಎಲ್ಲೆಲ್ಲಿ ರಸ್ತೆಗಳಾಗಬೇಕು, ಎಲ್ಲೆಲ್ಲಿ ಸೇತುವೆಗಳಾಗಬೇಕು, ಎಲ್ಲೆಲ್ಲಿ ಕೆರೆಗಳನ್ನು ಕಟ್ಟಬೇಕು ಎಂಬುದನ್ನೆಲ್ಲ ಕರತಲಾಮಲಕ ಮಾಡಿಕೊಂಡಿದ್ದಾರೆ. ದಿನದಲ್ಲಿ 24 ತಾಸು ಇದ್ದರೆ 18-19 ತಾಸು ಕೆಲಸ ಮಾಡುತ್ತಾರೆಂದರೆ ಅದೊಂದು ಹೆಚ್ಚಿನ ಪ್ರಶಂಸೆ ಮಾಡತಕ್ಕದ್ದಲ್ಲ. ಅವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಹಳೆಯ ಮೈಸೂರಿಗೆ ಅಪಚಾರಮಾಡಿದ್ದಾರೆ ಎಂದು ಅಂಕಿ ಅಂಶಗಳೇ ತೋರಿಸುತ್ತವೆ. ಉದ್ವೇಗದಿಂದ ಅಥವಾ ಯಾವುದನ್ನೋ ಮನಸ್ಸಿನಲ್ಲಿಟ್ಟುಕೊಂಡು ನಾನು ಮಾತನಾಡುತ್ತಿಲ್ಲ, ಯಾರ ಮನಸ್ಸನ್ನಾಗಾಲೀ ನೋಯಿಸಬೇಕೆಂಬ ಇಚ್ಛೆ ಇಲ್ಲ.

ಶ್ರೀ ಎಸ್. ಡಿ. ಕೊಥಾವಳೆ.—ಅಂಕಿ ಅಂಶಗಳನ್ನು ಹೇಳುತ್ತೀರಾ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ಕಾಲಾವಕಾಶ ಕೊಡುವುದಾದರೆ ಅಂಕಿ ಅಂಶಗಳನ್ನು ಸಭೆಯ ಮುಂದೆ ಇಡುತ್ತೇನೆ. ಹಳೆಯ ಮೈಸೂರಿನ ಭಾಗದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ವಿಶಾಲ ಮೈಸೂರಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಹೊರಟಿದ್ದಾರೆ ಎಂದು ಶ್ರೀಮಾನ್ ಕೊಥಾವಳೆಯವರು ಕೇಳತಕ್ಕ ಪ್ರಶ್ನೆಗೆ ಸಂಪೂರ್ಣವಾದ ವಿವರಗಳನ್ನು ಕೊಡಲು ತಯಾರಾಗಿದ್ದೇನೆ.

(*Interruption by Sri S. D. Kuthavale*)

ಮಹಾರಾಷ್ಟ್ರದವರ ಜೊತೆಯಲ್ಲಿ ವ್ಯಾಜ್ಯಮಾಡುವ ರೀತಿಯಲ್ಲಿ ನಮ್ಮ ಸಂಗಡ ಆಡಿದರೆ ಯಾವುದೇ ರೀತಿಯ ಸವಲತ್ತೂ ಸಿಕ್ಕುವುದಿಲ್ಲ.

ಶ್ರೀ ಎಸ್. ಪಿ. ತಳವಾಳ್ಕರ್.—ಸವಲತ್ತು ಸಿಕ್ಕುವುದಿಲ್ಲವೆಂದರೆ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಹಾರಾಷ್ಟ್ರ ಸದಸ್ಯರು ಈ ರಾಜ್ಯದಿಂದ ಹೊರಗೆ ಹೋಗಬೇಕೆಂದು ಹೇಳುತ್ತಿದ್ದಾರೆ. ಆದರೆ ಹೊರಗೆ ಹೋಗುವುದಕ್ಕೆ ಜಾಗ ಕೊಡುವುದಿಲ್ಲವೆಂದು ಅವರು ಹೇಳುತ್ತಾರೆ: ನಾವೆಲ್ಲರೂ ಸೇರಿ ನೇರವಾಗಿ ಒಂದು ಮಾರ್ಗದಲ್ಲಿ ನಡೆಯಬೇಕೆಂಬ ಇಚ್ಛೆ ಇದ್ದರೆ ಯಾವವಿಷಯದಲ್ಲಿಯೇ ಅಗಲಿ ಕೈ ಕೈ ಜೋಡಿಸಬಾರದೆಂದು ನಾನು ಅವರಲ್ಲಿ ಪ್ರಾರ್ಥಿಸುತ್ತೇನೆ.

Sri S. D. KOTHAVALE.—My friend misunderstands me. I never envy Maharashtrians; I have no prejudice against them in fact, I love them.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳು ಹಳೆಯ ಮೈಸೂರಿಗೆ ಮಾತ್ರ ಅನ್ವಯವಾಗುತ್ತವೆ. 1956ನೇ ಇಸವಿ ನವಂಬರ್ ಒಂದನೆಯ ತಾರೀಖಿನಿಂದ, ಮೈಸೂರು ವಿಶಾಲವಾದಮೇಲೆ ಬೊಂಬಾಯಿ ಕರ್ಣಾಟಕ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು, ಮತ್ತು ಹೈದರಾಬಾದ್ ಭಾಗಗಳು ಸೇರಿದಮೇಲೆ ಯಾವ ಯಾವ ಪ್ರಮಾಣದಲ್ಲಿ ಆಯಾ ಪ್ರದೇಶಗಳನ್ನು ಅಭಿವೃದ್ಧಿಗೆ ತರಲು ಎಷ್ಟು ಹಣವನ್ನು ಖರ್ಚುಮಾಡಬೇಕಾಗಿತ್ತೋ ಅಷ್ಟು ನಮಗೆ ಬಂದಿದೆ. ಅದರ ಪ್ರಕಾರ ನಾವು ಖರ್ಚು ಮಾಡಬೇಕಾಗಿದೆ. ಆದರೆ ಮೈಸೂರು ಸರ್ಕಾರ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಳೆಯ ಮೈಸೂರಿಗೆ ಎಷ್ಟು ಹಣವನ್ನು ನಿಗದಿ ಮಾಡಿದ್ದರೋ, ಅಷ್ಟರ ಕೆಸಲವನ್ನು ಈಡೇರಿಸಲು ಲೋಕೋಪಯೋಗಿ ಖಾತೆಯಲ್ಲಿ ಸಾಧ್ಯವಾಗಿಲ್ಲವೆಂದರೆ ಯಾರೂ ತಪ್ಪಾಗಿ ಭಾವಿಸಿಕೊಳ್ಳಬಾರದು. ಸರ್ಕಾರ ಈ ಕಡೆ ಸ್ವಲ್ಪ ನಿಗಾ ಕೊಡಬೇಕು. ಆರೀತಿಕೊಡದೆ ಹೋದರೆ ಹಳೆಯ ಮೈಸೂರಿಗೆ ಅನ್ಯಾಯವಾಗುತ್ತದೆ, ಇಲ್ಲಿಯ ಜನತೆಯಲ್ಲಿ ಅಸಮಾಧಾನ ಉತ್ಪನ್ನವಾಗುತ್ತದೆ, ಅದಕ್ಕೆ ಅವಕಾಶ ಕೊಡಬಾರದೆಂದು ನಾನ ಸರ್ಕಾರದಲ್ಲಿ ಅದರಲ್ಲೂ ಶ್ರೀಮಾನ್ ಚನ್ನಬಸಪ್ಪನವರಲ್ಲಿ ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪಿ. ಗದಗ್.—ಹೈದರಾಬಾದ್ ಕರ್ನಾಟಕ, ಬೊಂಬಾಯಿ ಕರ್ನಾಟಕದ ಭಾಗಗಳು ದವಾಖಾನೆ, ರಸ್ತೆ ಇವುಗಳ ವಿಷಯದಲ್ಲಿ ಹಿಂದುಳಿದಿತ್ತು ಅದಕ್ಕೇ ಕೇಂದ್ರ ಸರ್ಕಾರದವರು ಸಹಾಯ ಮಾಡಬೇಕೆಂದು ಹೇಳಿ ನಮ್ಮ ಸರ್ಕಾರದವರು ಮೆಮೋರ್‍ಯಾಂಡಂ ಕೊಟ್ಟಿದ್ದಕ್ಕಾಗಿ 6 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಹಿಂದುಳಿದ ಭಾಗಗಳಿಗೆ ಎಂದು ಹೇಳಿ 5 ವರ್ಷದ ತನಕ ಕೊಟ್ಟಿದ್ದಾರೆ ಆದುದರಿಂದ ಇವೊತ್ತು ಲೈಯಬಿಲಿಟಿ ಜೊತೆಗೆ ಅಸೆಟ್ಟು ಸಹ ಬಂದಿದೆ. ಅದನ್ನು ಗಮನಕ್ಕೆ ತೆಗೆದುಕೊಂಡು ಮಾತನಾಡುತ್ತಾ ಇದ್ದೀರಾ ?

Sri M. C. NARASIMHAN.—The per capita *ad hoc* grant given by the First Finance Commission for old Mysore was Rs. 3. 25, but actually in new Mysore even after the special grant it works out only to Rs. 3.00 per capita. How do you account for this ?

Sri K. P. GADAG (Gadag).—On our behalf it was represented to the Central Government that the integrated areas being backward required some help and for that purpose this special grant was given.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳುವುದಕ್ಕೆ ಮಾಡತಕ್ಕ ವಾದ ವಿವಾದಗಳಿಂದ ನಮ್ಮನ್ನು ನಿಜವಾಗಿಯೂ ಕೂಡು ಸಮಾಧಾನ ಮಾಡಲಾರರಿ ಎಂದು ಒಂದೇ ಒಂದ ಮಾತಿನಲ್ಲಿ ಹೇಳುತ್ತೇನೆ.

Sri H. M. CHANNABASAPPA.—Even accepting Sri Muckannappa' is hypothes is it amounts to this that erstwhile Mysore is being neglected. I made a clear cut statement some time ago that the pace of progress in erstwhile Mysore would not in any way suffer, but at the same time the backwardness of the other areas would be overcome by a phased programme in course of years.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂತ್ರಿಗಳು ಎಜುಕೇಷನ್ ಡಿಮ್ಯಾಂಡ್ ಮೇಲೆ ಮಾತನಾಡುವಾಗ; ಬಡ್ಜೆಟ್ ಮೇಲೆ ಸಾಮಾನ್ಯ ಚರ್ಚೆಯ ಮೇಲೆ ಮಾತನಾಡುವಾಗ ಹೇಳಿದ್ದನ್ನು ಕೇಳಿದ್ದೇನೆ. ಈಗಲೂ ಕೂಡ ಅದು ನನ್ನ ಕಿವಿಯಲ್ಲಿ ಕೇಳಿಸುತ್ತಿರುವಂತೆ ಇದೆ. ಹಳೇ ಮೈಸೂರಿನ ಪ್ರಗತಿಗೆ ಯಾವುದೇ ರೀತಿಯಲ್ಲೂ ಅಡ್ಡಿ ಬರುವ ದಾರಿಯಲ್ಲಿ ಹೋಗುವುದಿಲ್ಲ ಎಂದು ಹೇಳಿರುವ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಅದನ್ನು ಮರೆತು ಮಾತನಾಡುತ್ತಿಲ್ಲ. ಆದರೆ ಇವೊತ್ತಿನ ಅಂಕಿ ಅಂಶಗಳ ಮುಖಾಂತರ ಏನು ಅನಿಸುತ್ತದೆ ಎಂದರೆ ಸ್ವಲ್ಪ ಮಟ್ಟಿಗೆ ಪ್ರಗತಿಗೆ ಅಡ್ಡಿ ಆತಂಕ ಬರುತ್ತದೆಯೋ ಏನೋ ಎಂಬ ಶಂಕೆ ನನ್ನಲ್ಲಿ ಮೂಡಿರುವುದರಿಂದ. ಸರ್ಕಾರದವರು ಈ ಸಭೆಯಲ್ಲಿ ಅಂತಹ ಒಂದು ಆಶ್ವಾಸನ ಕೊಡಿರಿ ಎಂದು ಈ ವಿಷಯ ಮಾತನಾಡುತ್ತಾ ಇದ್ದೇನೆ. ಬೊಂಬಾಯಿ ಕರ್ನಾಟಕಕ್ಕಾಗಲೀ, ಹೈದರಾಬಾದ್ ಕರ್ನಾಟಕಕ್ಕಾಗಲೀ, ದಕ್ಷಿಣ ಕನ್ನಡಕ್ಕಾಗಲಿ. ಕೊಡಗಿಗಾಗಲೀ ಯಾವುದೇ ರೀತಿಯಲ್ಲಿ ಅವರ ಪ್ರೋಗ್ರೆಸ್ hinder ಮಾಡಬೇಕು, ಅಡ್ಡಿ ಆತಂಕ ತಂದೊಡ್ಡಬೇಕೆಂಬ ಆಶೆ ನನಗಿಲ್ಲ. ಅವರನ್ನು backward area ಎಂದು ಎಷ್ಟುಮಟ್ಟಿಗೆ ಉತ್ಸಾಹ, ಉತ್ಸುಕತೆ ತೋರಿಸುತ್ತೀರೋ, ಅದೇ ರೀತಿ ಮೈಸೂರಿನಲ್ಲಿರತಕ್ಕ backward areaಕ್ಕೂ ಅಷ್ಟೇ ಗಮನ ಸರ್ಕಾರದವರು ಕೊಡಬೇಕೆಂದು ಸರ್ಕಾರದವರ ಗಮನವನ್ನು ಆ ಕಡೆಗೆ ಸೆಳೆಯುತ್ತ ಇದ್ದೇನೆಯೇ ಹೊರತು ಇನ್ನಾವ ದೃಷ್ಟಿಯಿಂದಲೂ ಅಲ್ಲ ಎಂದು ಸದಸ್ಯರಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಮೈನರ್ ಇರಿಗೇಷನ್. ಶ್ರೀಮಾನ್ ಚನ್ನಬಸಪ್ಪನವರು ಸಣ್ಣ ನೀರಾವರೀ ಕಾಂಗಾರಿಗಳನ್ನು ಬಹಳ ಉತ್ಸಾಹದಿಂದ ಇದಕ್ಕಾಗಿಯೇ ಒಂದು ಇನ್ವೆಸ್ಟಿಗೇಷನ್ ಡಿವಿಜನ್ ಅಂತ ಮಾಡಿ ದೊಡ್ಡದು ಮತ್ತು ಚಿಕ್ಕದು ನೀರಾವರಿಗಳನ್ನು ಮೈಸೂರು ಸಂಸ್ಥಾನ ಹಾಗೂ ವಿಶಾಲ ಮೈಸೂರಿನಲ್ಲಿ ಮಾಡಬೇಕೆಂದು ಪ್ರಯತ್ನ ಪಟ್ಟು ಹೆಚ್ಚಿನ ಉತ್ಸುಕತೆ ವಹಿಸುತ್ತ ಇರುವುದಕ್ಕೆ ನಿಜವಾಗಿಯೂ ಕೂಡ ಯಾವ ಮನುಷ್ಯನೇ ಆಗಲೀ ಹೆಮ್ಮೆ ಪಡತಕ್ಕ ವಿಚಾರ. ಈಗತಾನೆ ಒಪ್ಪಿಗೆ ಕೊಟ್ಟಂಥ ವ್ಯವಸಾಯದ ಬಾಬು ಏನಿದೆ ಈ ವ್ಯವಸಾಯಕ್ಕೆ ಇದು ಮೂಲಾಧಾರ, ಯಾವುದೇ ಕೆರೆ, ಕಟ್ಟೆ ಕಾಲುವೆ ನದಿ ಇವೆಲ್ಲವೂ ಕೂಡ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಹಕಾರಿಯಾದುವು. ಇಂಥಾ ವ್ಯವಸಾಯವನ್ನು ಅಭಿವೃದ್ಧಿ ಮಾಡತಕ್ಕ ಸಣ್ಣ ನೀರಾವರಿ ಕಾಂಗಾರಿಗಳು ಮತ್ತು ದೊಡ್ಡ ನೀರಾವರಿ ಕಾಂಗಾರಿಗಳು ಮೈಸೂರು ಸಂಸ್ಥಾನದಲ್ಲಿ ಎಷ್ಟು; ವಿಶಾಲ ಮೈಸೂರಿನಲ್ಲಿ ಎಷ್ಟು ಪ್ರಾರಂಭಮಾಡಿದ್ದಾರೆ. ಹಳೇ ಮೈಸೂರಿಗೆ ಎಷ್ಟು ಹಣ ವೆಚ್ಚಮಾಡಿದ್ದಾರೆ. ಹಾಗೂ ಹೊರಗಡೆಗೆ ಎಷ್ಟು ಹಣ ವೆಚ್ಚಮಾಡಿದ್ದಾರೆ ಎಂಬ ಅಂಕಿ ಅಂಶಗಳನ್ನು ಸರ್ಕಾರದವರು ಕೊಟ್ಟು ನಮ್ಮನ್ನು ಸಮಾಧಾನ ಪಡಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ, ಸಣ್ಣ ನೀರಾವರಿ ಕಾಂಗಾರಿಗಳು ಎಷ್ಟು ವೇಗದಲ್ಲಿ, ಮಂತ್ರಿಗಳು ಹೇಳತಕ್ಕ ವೇಗದಲ್ಲಿ ನಡೆಯುತ್ತ ಇವೆಯೇ ಅಥವಾ ಮಂದಗತಿಯಲ್ಲಿ ನಡೆಯುತ್ತ ಇವೆಯೇ ಎಂಬುದನ್ನು ಯೋಚನೆ ಮಾಡಬೇಕು. ಈ ಸಭೆ ಪ್ರಾರಂಭವಾದಾಗಿನಿಂದ ಕಾಂಗಾರಿಗಳ ವಿಚಾರದಲ್ಲಿ ಕೊಟ್ಟಂಥ ಹೇಳಿಕೆ ನೀವು ಉತ್ತರ ಗುರುತುಹಾಕಿಕೊಂಡು ನೋಡಿದ್ದರಲ್ಲಿ ನೀವು ಹೇಳಿದಷ್ಟು ಭರದಲ್ಲಿ ಸಾಗುತ್ತಿಲ್ಲ ಎಂದು ಹೇಳದೇ ವಿಧಿಇಲ್ಲ. ಸರ್ಕಾರ ಈ ವಿಚಾರದಲ್ಲಿ ಸಂಪೂರ್ಣ ತೀವ್ರತೆಯನ್ನು ವಹಿಸಿ, ಸಣ್ಣ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡತಕ್ಕ ಕೆಲಸ ಹಿಂದೆ ಬೀಳಬಾರದು ಎಂದು ಹೇಳುತ್ತೇನೆ. 10 ಲಕ್ಷ ರೂಪಾಯಿಗಳೊಳಗೆ ಇರತಕ್ಕ ಎಲ್ಲಾ ಕೆಲಸವನ್ನೂ ಸಣ್ಣ ನೀರಾವರಿಯಲ್ಲಿ ತೆಗೆದುಕೊಂಡು ಸಂಪೂರ್ಣ ಮಾಡಬೇಕು. ಪೂರ್ಣ ಮಾಡಿದರೆ ನಿಜವಾಗಿಯೂ ಕೂಡ ದೇಶದಲ್ಲಿ ಈಗಿರುವ ಆಹಾರ ಅಭಾವವನ್ನು ನೀಗುವುದಕ್ಕೆ ಸಹಾಯವಾಗುತ್ತದೆ ಎಂದು ನಾವು ತಾವು, ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ. ನಾನು ತಿಳಿದುಕೊಂಡಿದ್ದೇನೆ ಸರ್ಕಾರದ ಉದ್ದೇಶವೂಕೂಡ ಅದೇ ಎಂದು. ಶ್ರೀಮಾನ್ ರಾಚಯ್ಯನವರು ಅಗ್ರಿಕಲ್ಚರ್ ಡಿಮ್ಯಾಂಡ್ ಮೇಲೆ ಮಾತನಾಡುತ್ತ ಇಷ್ಟು ಲಕ್ಷ ಟನ್ ಬೆಳೆದಿದ್ದೇವೆ ಎಂದು ಹೇಳಿದರು. ನನಗಾದರೂ ಆಶ್ಚರ್ಯವಾಯಿತು. ದೊಡ್ಡ ದೊಡ್ಡ, ಭಾರಿ ಭಾರಿ ಕಾಂಗಾರಿಗಳ ಮೇಲೆ ಹಾಕಿದಂಥ ಹಣ ಯಾವ ವರ್ಷದಲ್ಲಿ ಎಷ್ಟು ಮಟ್ಟಿಗೆ ಫಲ ಕೊಡುತ್ತದೆ ? ತಾವು ಸಣ್ಣ ನೀರಾವರೀ ಯೋಜನೆಗಳಮೇಲೆ ವೆಚ್ಚ ಮಾಡತಕ್ಕ ಹಣ ಎಷ್ಟು ಮಟ್ಟಿಗೆ ಲಾಭದಾಯಕವಾಗಿದೆ ಎಂಬುದನ್ನು ಸರ್ಕಾರವರು ಯೋಚನೆ ಮಾಡಿದರೆ ಇವತ್ತಿನ ದಿವಸ ದೇಶದಲ್ಲಿ ಉದ್ಭವಿಸಿರತಕ್ಕ ಆಹಾರದ ಅಭಾವ ಪರಿಸ್ಥಿತಿಗೆ ಮೂಲಕಾರಣ ವ್ಯವಸಾಯಕ್ಕೆ ತಾವು ಕೊಡುತ್ತಿರುವ ಸೌಲಭ್ಯ ಅದರಲ್ಲೂ ಸಣ್ಣ ನೀರಾವರಿ ಕಾಂಗಾರಿಗಳಿಂದ, ಈ ದೊಡ್ಡ ದೊಡ್ಡ ಯೋಜನೆಗಳಿಂದ ಬರತಕ್ಕ ಆದಾಯಕ್ಕಿಂತ ಅಲ್ಪಕಾಲದಲ್ಲಿ ಅಧಿಕ ಆದಾಯ ಕೊಡುವುದಕ್ಕೆ ಸಾಧ್ಯವಾಗುತ್ತದೆ. ದೇಶದಲ್ಲಿ ಆಹಾರದ ಅಭಾವ ನೀಗುವುದಕ್ಕೆ ಕಾರಣವಾಗುತ್ತದೆ, ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಹಾಕಿ ಕೋಟಿ ಕೋಟಿ ರೂಪಾಯಿಗಳ ಎಸ್ಟಿಮೇಟು ಮತ್ತು ಪ್ಲಾನುಗಳನ್ನು ಮಾಡಿ ತಮ್ಮ ಕಾಲಹರಣ ಮಾಡುವುದಕ್ಕೆ ಬದಲಾಗಿ ಸಣ್ಣ ನೀರಾವರೀ ಯೋಜನೆಗಳನ್ನು ದೇಶದಲ್ಲಿ ಅದಷ್ಟು ಶೀಘ್ರವಾಗಿ ತೆಗೆದುಕೊಂಡು, ಎಲ್ಲಿ ಕೆರೆ ಕಟ್ಟಬಹುದು, ಪಿಕ್ ಅಪ್ ಕಟ್ಟಬಹುದು ಅದನ್ನೆಲ್ಲಾ ಮಾಡಿದರೆ ನಿಜವಾಗಿಯೂಕೂಡ ದೇಶದ ಅಭ್ಯುದಯವಾಗುತ್ತದೆ, ಇಲ್ಲದೇ ಇದ್ದರೆ ಅಂಕಿ ಅಂಶಗಳ ಮುಖಾಂತರ ಸಮಾಧಾನ ಮಾಡುವುದಾದರೆ ನಾವು ಸಮಾಧಾನವಾಗುವುದಕ್ಕೆ ತಯಾರಾಗಿಲ್ಲ ಎಂದು ಹೇಳಿ ಸರ್ಕಾರ ಈ ವಿಚಾರದಲ್ಲಿ ತೀವ್ರ ಗಮನ ಕೊಡಬೇಕೆಂದು

ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಪ್ರಶ್ನೆಗಳಿಗೆ ಇಲ್ಲ ಬಂದಂಥ ಉತ್ತರ ನೋಡಿದರೆ ಒಂದು ಸಾರಿ ಅದಂಥ ಎಸ್ಟಿಮೇಟು ಅನೇಕ ಸಾರಿ ರಿವೈಸ್ ಆಗುತ್ತದೆ. 10-15 ವರ್ಷದ ಕೆಳಗೆ ಮಾಡಿದ ಎಸ್ಟಿಮೇಟು ಇವತ್ತು ಸರ್ಕಾರದ ಮುಂದೆ ಯಾವುದೋ ಒಂದು ತಕರಾರಾಗಿ ಬರುತ್ತದೆ. ಅಧಿಕಾರಿಗಳು 3-4-5 ವರ್ಷಗಳಿಂದ ನೀರಾವರಿ ಯೋಜನೆ ಬಗ್ಗೆ ಮಾಡಿದಂಥ ಎಸ್ಟಿಮೇಟುಗಳು ಕೊಳೆಯುತ್ತ ಇವೆ. ಅದಕ್ಕೆ ನಿಮ್ಮ whipping ಇನ್ನೂ ಸಾಲದು ಎಂದು ಹೇಳಿದರೆ ಶ್ರೀಮಾನ್ ಚನ್ನಬಸಪ್ಪನವರು ಅದನ್ನು ತೀವ್ರವಾಗಿ ಗಮನಲ್ಲಿಟ್ಟುಕೊಂಡು ಜನತೆಗೆ ಏನು ಕಲ್ಯಾಣವಾಗುತ್ತದೆಯೋ ಅಂಥ ಕೆಲಸ ಮಾಡಬೇಕೆಂದು ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ರಸ್ತೆ ಮತ್ತು ಕಟ್ಟಡಗಳಬಗ್ಗೆ, ಪಂಡಿತ ಜವಹರ ಲಾಲ್ ನೆಹರೂ ಅವರು ಮೊನ್ನೆತಾನೆ ಯಾವುದೋ ಒಂದು ವಿಷಯದಲ್ಲಿ ಮಾತನಾಡುತ್ತ ಈ ದೇಶದಲ್ಲಿ ಭಾರಿ ಹಣ ವೆಚ್ಚಮಾಡಿ ಕಟ್ಟಡಗಳನ್ನು ಕಟ್ಟ ಬಾರದು ಎಂದು ಹೇಳಿದರು. ಇವತ್ತಿನ ದಿವಸ ಎಲ್ಲಾದರೂ ಹಳ್ಳಿಗಳಲ್ಲ ಒಂದು ಶಾಲೆ, ಆಸ್ಪತ್ರೆ, ಮತ್ತೊಂದು, ಮಗದೊಂದು ಕಟ್ಟಡ ಆಗ ಬೇಕೆಂದರೆ ನಿಮ್ಮ ಇಂಜನಿಯರುಗಳು ಮಾಡಿದ......

Sri C. M. ARUMUGHAM.—He referred to the statement of the Prime Minister that we should not construct costly buildings. I want to know whether he has seen New Delhi where very costly buildings are coming up even today.

Sri C. J. MUCKANNAPPA.—It is after his bitter experience of those investments in costly buildings that he has said this. ನಾನು ಸರಕಾರದಲ್ಲ ಇನ್ನೊಂದು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟತಕ್ಕ ಬಿಲ್ಡಿಂಗುಗಳು ಮತ್ತು ಇವಕ್ಕೆ ಆಗತಕ್ಕವೆಚ್ಚವನ್ನೂ ಆದಷ್ಟೂ ಕಡಿಮೆ ಮಾಡಬೇಕು. ಇದರಿಂದ ಉಳಿಯುವ ಹಣವನ್ನು ಕೆರೆ, ಕಾಲುವೆ ಮತ್ತು ದೇಶದ ಅಭಿವೃದ್ಧಿ ಕೆಲಸಗಳಿಗೋಸ್ಕರ ಉಪಯೋಗಿಸಬಹುದು ಎಂದು ಸರಕಾರದಲ್ಲ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸ್ವಾಮೀ, ಎಲ್ಲಾಊರುಗಳಿಗೂ ಸಿಮೆಂಟು ರೋಡುಗಳಾಗಬೇಕು, ಎಲ್ಲ ರೋಡುಗಳಿಗೂ ಟಾರಾಗಬೇಕು ಮತ್ತು ಎಲ್ಲ ರೋಡುಗಳೂ Asphalt ಆಗಬೇಕೆಂದು ಹೇಳುತ್ತಿದ್ದಾರೆ ಮತ್ತು ಎಲ್ಲ ಕಡೆಯ ಜನಗಳೂ ಕೇಳುತ್ತಿದ್ದಾರೆ. ಎಲ್ಲ ಪಟ್ಟಣಗಳ ಕಡೆಯೂ ತ್ವರಿತವಾದ ಹೆಜ್ಜೆಯಲ್ಲ ಇದಕ್ಕೋಸ್ಕರ ತಮ್ಮ ಗಮನ ಹರಿಯುತ್ತಿದೆ, ಈ ಗಮನ ಹಳ್ಳಿಗಳ ಕಡೆ ಹರಿಯುತ್ತಿಲ್ಲ. ಹಳ್ಳಿಗಳಲ್ಲ ಎತ್ತುಗಳು ಕೂಡ ಓಡಾಡುವಷ್ಟು ಉತ್ತಮ ರಸ್ತೆಗಳಿಲ್ಲ. ಈಗಲಾದರೂ ಹಳ್ಳಿಗಳ ಕಡೆ ಎತ್ತಿನಗಾಡಿಗಳು ಹೋಗುವಂತಹ ಉತ್ತಮ ರಸ್ತೆಗಳನ್ನು ಮಾಡುವ ಕಡೆ ತಮ್ಮ ದೃಷ್ಟಿ ಹರಿಯಲಿ ಎಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧಿಕಾರಿಗಳಲ್ಲ ಇರತಕ್ಕ ಜಡಮನೋಭಾವವನ್ನು ಹೋಗಲಾಡಿಸಬೇಕು. ಅಧಿಕಾರಿಗಳು ನಾವು ಸರ್ವಿಸ್ ಮಾಡಬೇಕು, ಜನಗಳಿಗೆ ಸೇವೆಸಲ್ಲಸಬೇಕು. ಎಂದು ಸರಕಾರಿ ಕೆಲಸಕ್ಕೆ ಬರುವಾಗ ಪಬ್ಲಿಕ್ ಸರ್ವಿಸ್ಸು ಕಮಿಷನ್ನಿನ ಮುಂದೆ ನಾವು ಇಷ್ಟು ಅಕೆಡಮಿಕ್ ಕ್ವಾಲಿಫಿಕೇಷನ್ನನ್ನು ಹೊಂದಿ ಸರಕಾರದಲ್ಲ ಸೇವೆ ಮಾಡುತ್ತೇವೆಂದು ಅಲ್ಲ ದಸ್ಕತ್ತು ಹಾಕುತ್ತಾರೆ. ಅದರಂತೆ ಸರಕಾರಿ ನೌಕರಿ ಮಾಡಿ ದೇಶದ ಕೆಲಸ ಮಾಡಿ ಕೀರ್ತಿತರುವಂತೆ ಮಾಡಬೇಕು. ಆದರೆ ಅದರಂತೆ ಈಗ ಅಧಿಕಾರಿಗಳು ಕೆಲಸಮಾಡುವುದರಲ್ಲ ನಿಜವಾಗಿಯೂ ದುರ್ಬಲರಾಗುತ್ತಿದ್ದಾರೆ, ನಿಜವಾಗಿಯೂ ಹಿಂಜರಿಯುತ್ತಿದ್ದಾರೆ. ಅದಕ್ಕೋಸ್ಕರ ಏನು ಅತೃಪ್ತಿಗಳಿವೆ ಮತ್ತು ಏನು ಅಸಮಾಧಾನಗಳಿವೆ ಎನ್ನುವುದನ್ನೂ ಅದರ ಕಾರಣವನ್ನೂ ಸರಕಾರ ಕಂಡುಹಿಡಿಯಕೇಬೆಂದು ನಾನು ಸರಕಾರದಲ್ಲ ಹೇಳುತ್ತೇನೆ. ನನಗೆ ಗೊತ್ತಿರುವ ಮಟ್ಟಿಗೆ ತಾವು ಕೊಡತಕ್ಕ ಪ್ರಮೋಷನ್ನುಗಳು ತಾವು ಕೊಡತಕ್ಕ ಇನ್‌ಕ್ರಿಮೆಂಟುಗಳು ತಾವು ಅಪಾಯಿಂಟ್ ಮಾಡತಕ್ಕ ರೀತಿ ಇವೆಲ್ಲವನ್ನೂ ನೋಡಿದರೆ, ಕೆಳಗಿರುವವರು ಹೆಚ್ಚಿನ ಸರ್ವಿಸ್ಸು ಆಗಿರುವವರ ಮೇಲೆ ಹೋಗಿರುವುದು, ಮೇಲ್ಮಟ್ಟದಲ್ಲಿರುವವರು ಕೆಳಗಿನ ಮಟ್ಟಕ್ಕೆ ಹೋಗಿರುವುದು ಮತ್ತು ಅವರಿಗಾಗಿ ಕೊಡತಕ್ಕ ಸಂಬಳ ಸಾರಿಗೆಗಳು ಈ ರೀತಿಯಾದ ಜಡಮನೋಭಾವ ಮಾಡಲು ಕಾರಣವಾಗಿದೆ. ಲೋಕೋಪಯೋಗಿ ಶಾಖೆಯಲ್ಲ ಸಣ್ಣ ನೌಕರಿಯಿಂದಾಗಿ ಚೀಫ್ ಇಂಜನೀಯರವರೆಗೆ ಚೆನ್ನಾಗಿ ಕೆಲಸಮಾಡಲು ಸರಕಾರ ತೀವ್ರವಾಗಿ ಪ್ರಯತ್ನ ಮಾಡಿ ಅದನ್ನು ಸರಿಪಡಿಸಿ ದೇಶದಲ್ಲಿರುವ ಅಭಾವವನ್ನು ಹೋಗಲಾಡಿಸಿ ದೇಶದ ಕಲ್ಯಾಣ ಸಾಧನೆಗೆ ಪ್ರಯತ್ನ ಮಾಡಬೇಕೆಂದು ನಾನು ಸರಕಾರದಲ್ಲ ಹೇಳುತ್ತೇನೆ. ಯಾವ ಇಲಾಖೆ Public waste ಎಂದರೆ ಲೋಕ ಅನುಪಯೋಗಿ ಶಾಖೆ ಎಂದು ಹೇಳುವ ಸ್ಥಿತಿಯಲ್ಲಿತ್ತೋ ಅದನ್ನು ಲೋಕೋಪಯೋಗಿ ಶಾಖೆಯಾಗಿ ಮಾಡಿ ಇದರಲ್ಲಿರತಕ್ಕ ಲೋಪದೋಷಗಳನ್ನು ನಿವಾರಣೆ ಮಾಡುವ ಮಾರ್ಗದಲ್ಲ ನಮ್ಮ ಮರಾಮತ್ತು ಶಾಖೆಯ ಮಂತ್ರಿಗಳು ಶೇಕಡ ಇಪ್ಪತ್ತೈದು ಭಾಗದಷ್ಟು ಯಶಸ್ವಿಯಾಗಿದ್ದಾರೆಂದು ಹೇಳಬಹುದು. ಲಂಚರುಷುವತ್ತುಗಳು ಪಿ. ಡಬ್ಲ್ಯು. ಡಿ. ಇಲಾಖೆಯೊಂದರಲ್ಲೇ ಇದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಈ ಲಂಚ ನಿರೋಧ ಇಲಾಖೆಯೂ ತಮ್ಮ ಕೈಯಲ್ಲೇಇದೆ. ಇದನ್ನು ಎಲ್ಲ ನಿರ್ಮೂಲ ಮಾಡಬಹುದೋ ಅದನ್ನು ತಾವು ಅಷ್ಟು ಮಟ್ಟಿಗೆ ನಿರ್ಮೂಲ ಮಾಡಬೇಕು. ತಾವು ಈ ಸೇವೆಯನ್ನು ಮಾಡಲು ಸಾರ್ವಜನಿಕರ ಸಹಕಾರವನ್ನು ಪಡೆದು ಈ ದುಷ್ಟಪದ್ಧತಿಯನ್ನು ನಿರ್ಮೂಲಮಾಡಲು ಸರ್ವ ಪ್ರಯತ್ನ ಮಾಡಬೇಕು. 5-4-10ರೂಪಾಯಿಗಳ ಲಂಚ ತೆಗೆದು ಕೊಳ್ಳುವವರನ್ನು ಹಿಡಿಯುವುದಕ್ಕೆ ಬದಲಾಗಿ ಸಾವಿರ, ಎರಡು ಸಾವಿರ ಪಡೆಯುವಂಥವರನ್ನು ಹಿಡಿದು ಶಿಕ್ಷೆ ಮಾಡಿ. ಸಣ್ಣ ಪುಟ್ಟ ನೌಕರರಿಗೆ ಇದರಿಂದ ನಿಜವಾಗಿಯೂ ಭಯಬರುತ್ತದೆ. ಲಂಚ ಎನ್ನುವುದು P.W.D. ಶಾಖೆಯಲ್ಲ ಬಹಳವಾಗಿದೆ. ಹೇಗೆಂದರೆ, ಮೂರು ಇಂಚು ಮಣ್ಣು ಗುಡ್ಡೆ ಹಾಕಿ ಆರು ಇಂಚು ಎಂದು ಹೇಳಿ ಅಂದಾಜು ಮಂಜೂರು ಮಾಡಿಸಿಕೊಳ್ಳುವುದು ಇತ್ಯಾದಿಗಳೆಲ್ಲ ನಮ್ಮ ಮಾನ್ಯ ಮಂತ್ರಿಗಳಾದ ಚನ್ನಬಸಪ್ಪನವರು ಅವರು ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದಾಗಿನಿಂದಲೂ ನೋಡಿ ಕಂಡು ಕೊಂಡಿದ್ದಾರೆ. ಆದರೂ ಮಂತ್ರಿಗಳಾಗಿರುವವರು ಇಂತಹ ಕೆಲಸಗಳನ್ನೆಲ್ಲಾ ಕಣ್ಣಾರೆ ನೋಡುವುದಕ್ಕಾಗುವುದಿಲ್ಲ. ಈ ಕೆಲಸಗಳನ್ನು ನೀತಿವಂತರಾಗಿರುವವರ ಕೈಯಲ್ಲ ಮಾಡಿಸುವುದು ಉತ್ತಮ; ಹಾಗೆಂದರೆ, ಈಗಿರುವವರೆಲ್ಲ ಅನೀತಿವಂತರೆಂದು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನಾನು ಹೇಳುತ್ತಿಲ್ಲ. ಸರಕಾರದಲ್ಲಿ ಕೆಲಸಮಾಡುವಾಗ ಸಾರ್ವಜನಿಕರಿಗೆ ತೊಂದರೆ ಯಾಗದಂತೆ ಕೆಲಸ ಮಾಡಲು ಗಮನ ಕೊಟ್ಟು ತಕ್ಕ ಪ್ರಯತ್ನಗಳನ್ನೂ ಮಾಡಬೇಕು. ಆ ರೀತಿ ಮಾಡಲು ನಮ್ಮ ಮಂತ್ರಿಗಳಾದ ಶ್ರೀ ಚನ್ನಬಸಪ್ಪ ನವರಿಗೆ ಸಾಧ್ಯವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಕಾಂಗ್ರೆಸ್ಸು ಗುಂಪಿನಲ್ಲಿ ಕೇಳಿದಂತ್ತೆ. ಸರದಾರ್ ವಲ್ಲಭಭಾಯಿ ಪಟೇಲರು "Iron man" ಎಂದು ಹೇಳುವಂತೆ, ನಮ್ಮ ಶ್ರೀಮಾನ್ ಚನ್ನಬಸಪ್ಪನವರು ನಮಗೆ "Iron man" ಆಗಿದ್ದಾರೆ. ಶ್ರೀಮಾನ್ ಚನ್ನಬಸಪ್ಪ ನವರು ನಿಜವಾಗಿಯೂ ಈ ಖಾತೆಗೆ ಬಂದಿರತಕ್ಕ ವಿಪತ್ತನ್ನು ದೂರಮಾಡುವುದಕ್ಕೆ ತಕ್ಕ ಕ್ರಮ ಕೈಗೊಂಡು ಸುವ್ಯವಸ್ಥೆ ಮಾಡಿ ಕೃತಕೃತ್ಯರಾಗುತ್ತಾರೆಂದು ಹೇಳುತ್ತೇನೆ.

ಆಮೇಲೆ ನಮ್ಮ ಡಿಸ್ಟ್ರಿಕ್ಟಿನಲ್ಲಿ ಒಂದು ಸಬ್‌ಡಿವಿಜನ್ನು ಮಾಡಿ ಒಬ್ಬರು ಅಸಿಸ್ಟೆಂಟು ಇಂಜಿನೀಯರನ್ನು ಇಟ್ಟು ಅವರ ಜೊತೆಗೆ ಐದಾರು ಜನರು ಸಬ್ ಓವರ್‌ಸೀಯರುಗಳನ್ನು ನೇಮಿಸಿ ಇಲ್ಲಿನ ಕೆಲಸ ಕಾರ್ಯಗಳನ್ನು ನಡೆಸಬೇಕೆಂದು ಮಾಡಿದ್ದೀರಿ. ಆದರೆ ಎಲ್ಲ ಕೆಲಸಗಳೂ ಇವರಿಂದಲೇ ಎಷ್ಟು ಮಟ್ಟಿಗೆ ನಡೆಯಬೇಕೋ ಅಷ್ಟು ಮಟ್ಟಿಗೆ ನಡೆಯುತ್ತಿಲ್ಲ. ತುಮಕೂರು ಜಿಲ್ಲೆಯಲ್ಲಿರುವ ಕೆಲಸಗಳ ಭಾರ ಜಾಸ್ತಿಯಾಗಿಬಿಟ್ಟು ಎಕ್ಸಿಕ್ಯೂಟೀವ್ ಇಂಜಿನಿಯರವರು ತಲೆ ತಗ್ಗಿಸಿಬಿಟ್ಟಿದ್ದಾರೆ. ಹಾಗೇ ಅಸಿಸ್ಟೆಂಟು ಇಂಜಿನಿಯರವರೂ ತಾವು ನಿರೀಕ್ಷಿಸುವಷ್ಟು ಮಟ್ಟಿಗೆ ಕೆಲಸಗಳನ್ನು ಮಾಡಲಾಗದೆ, ಕೆಲಸಗಳು ನಡೆಯುತ್ತಿಲ್ಲ. ಇದಕ್ಕಾಗಿ ನಾನು ಸೂಚಿಸುವುದು, ತುಮಕೂರು ಜಿಲ್ಲೆಯನ್ನು ಎರಡು ಪಿ. ಡಬ್ಲ್ಯು ಡಿವಿಜನ್ನುಗಳಾಗಿ ಮಾಡಿ ಇಬ್ಬರು ಎಕ್ಸಿಕ್ಯೂಟೀವ್ ಇಂಜಿನಿಯರುಗಳನ್ನು ನೇಮಿಸಿ ಅವರ ಕೈಕೆಳಗೆ ಸರಿಯಾದ ಅಧಿಕಾರಿಗಳನ್ನು ಕೊಟ್ಟು ತೀವ್ರಗಮನಕೊಟ್ಟು ಕೆಲಸಗಳನ್ನು ಮಾಡಿಸಿದರೆ, ಲೋಕೋಪಯೋಗಿ ಖಾತೆ ಎಲ್ಲ ಕೆಲಸಗಳನ್ನೂ ನಿಜವಾಗಿ ಮಾಡಲನುಕೂಲವಾಗುತ್ತದೆ. ಅಲ್ಲಿನ ಜನಗಳ ಹಿತದೃಷ್ಟಿಯಿಂದ ಅತಿ ಶೀಘ್ರವಾಗಿ ತಾವು ಇದನ್ನು ಮಾಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಎಲ್ಲಾ ಕೆಲಸ ಕಾರ್ಯಗಳೂ ಅಷ್ಟು ತೀವ್ರವಾಗಿ ಶ್ರೀಮಾನ್ ಚನ್ನಬಸಪ್ಪನವರು ಹೇಳುವ ವೇಗದಲ್ಲಿ ನಡೆಯುತ್ತಿಲ್ಲ ಎಂದು ಹೇಳಿದರೆ ನಿಜವಾಗಿಯೂ ಇದು ಅತಿಶಯೋಕ್ತಿಯಲ್ಲ. ತಾವು Investigation Department ಎಂದು ಮಾಡಿದ್ದೀರಿ. ಎಲ್ಲೆಲ್ಲಿ ಏನೇನು ರಿಸೋರ್ಸಸ್‌ಗಳಿವೆ ಅವೆಲ್ಲವನ್ನೂ exploit ಮಾಡಿ ಐದು ಎಕರೆಗೆ ಎಷ್ಟು ನೀರುಬರುತ್ತದೆ, ಹತ್ತು ಏಕರೆಗೆ ಎಷ್ಟು ಬರುತ್ತದೆ, ಇಪ್ಪತ್ತು ಎಕರೆಗೆ ಎಷ್ಟು ಬರುತ್ತದೆ ಎನ್ನುವುದನ್ನೆಲ್ಲ ನಿಮ್ಮ ಇಲಾಖೆಯವರು ಪರೀಕ್ಷೆ ಮಾಡಿ ಹೇಳಲಿ, ಕಾಗದ ಬರೆದರೂ ಅದರಂತೆ ಏನೂ ಕ್ರಮ ತೆಗೆದು ಕೊಳ್ಳುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿರುವ ಬುಕ್ಕಾಪುರದ ಹೋಬಳಿಯಲ್ಲಿರುವ ಗಾಮನಗುಡ್ಡದ ಬಳಿ ಎಂಟು ಲಕ್ಷರೂಪಾಯಿಗಳಷ್ಟು ಹಣ ಖರ್ಚುಮಾಡಿದರೆ ಸುಮಾರು 3000 ಎಕರೆಯಷ್ಟು ಭೂಮಿ ವ್ಯವಸಾಯ ಮಾಡಲು ಅನುಕೂಲವಾಗುತ್ತದೆ, ಇದನ್ನು ಇನ್‌ವೆಸ್ಟಿಗೇಟು ಮಾಡಿ ಎಂದು ನಾನು ಹೇಳುತ್ತಿದ್ದರೂ ಇದನ್ನು ಕಾರ್ಯರೂಪಕ್ಕೆ ತರಲು ಇವತ್ತಿಗೆ ಸುಮಾರು ಆರೇಳು ತಿಂಗಳಾದರೂ ಯಾವ ಅಧಿಕಾರಿಗಳೂ ಅಲ್ಲಿಗೆ ಬರಲಿಲ್ಲ. Investigation Department ಇದೆ ಎಂದು ಹೇಳಿದ್ದರೂ ಅದರ ಕೆಲಸವೇನು ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಈ ಇನ್‌ವೆಸ್ಟಿಗೇಷನ್ನಿನ ಡಿಪಾರ್ಟುಮೆಂಟು ನಿದ್ರೆ ಮಾಡುತ್ತಿದ್ದರೆ ಸ್ವಲ್ಪ ಎಚ್ಚರಿಕೆಕೊಟ್ಟು ಎಲ್ಲ ತಾಲ್ಲೂಕುಗಳಲ್ಲಿಯೂ ಎರಡು ಎಕರೆಯಿಂದ ಐದು ಎಕರೆಯ ವರೆಗೆ, ಐದು ಎಕರೆಯಿಂದ ಐನೂರು ಎಕರೆಯವರೆಗೆ, ನೂರರಿಂದ ಸಾವಿರ ಎಕರೆಗೆ ಎಲ್ಲೆಲ್ಲಿ ಎಷ್ಟೆಷ್ಟು ಕೆಲಸಗಳನ್ನು ಮಾಡಬಹುದು ಎಂದು ಪರೀಕ್ಷಿಸಿ ಅಂತಹ ಎಲ್ಲ ಕೆಲಸಗಳ ಬಗ್ಗೆ ಒಂದು ರಿಪೋರ್ಟನ್ನು ತರಿಸುವ ಏರ್ಪಾಡು ಮಾಡಬೇಕೆಂದು ಇಲ್ಲಿ ನಾನು ಹೇಳುತ್ತೇನೆ. ತಾವು ಇಂದಿನಿಂದ ಆರು ತಿಂಗಳೊಳಗಾಗಿ ಇಡೀ ಮೈಸೂರು ಸಂಸ್ಥಾನದಲ್ಲಿ ಎಷ್ಟು ಕೋಟಿರೂಪಾಯಿಗಳ ಮೊತ್ತವನ್ನು ವೆಚ್ಚ ಮಾಡಲು ಸಾಧ್ಯ ಎನ್ನುವ ಒಂದು Brief Report ನ್ನು ತರಿಸಿ ಅಸೆಂಬ್ಲಿಯ ಸದಸ್ಯರ ಕೈಗೆಕೊಡಬೇಕೆಂದು ಹೇಳುತ್ತೇನೆ. ಇದರಿಂದ ಯಾವ ಕೆಲಸಗಳನ್ನು ಮಾಡಲು ಸಾಧ್ಯವೋ ಅದನ್ನು ಮಾಡಬಹುದು. ಎಂದು ನಾನು ಮಾನ್ಯ ಶ್ರೀ ಚನ್ನಬಸಪ್ಪನವರಲ್ಲಿ ಹೇಳುತ್ತಿದ್ದೇನೆ.

4-30 P.M.

ಇನ್ನು ವಿದ್ಯುಚ್ಛಕ್ತಿಯ ವಿಚಾರ. ಕೋಟಿಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ನೀವು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೀರಿ. ದೇಶದಲ್ಲಿ ಸಾಕಷ್ಟು ಆಹಾರವಿಲ್ಲ. ವ್ಯವಸಾಯಕ್ಕೋಸ್ಕರ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಹೇಳುತ್ತಿದ್ದೀರಿ. ನಾನು ತಿಳಿದುಕೊಂಡಿದ್ದೇನೆ ಬೆಂಗಳೂರು ಸಿಟಿಗಳಲ್ಲಿ ಖರ್ಚಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ತಾವು ಹಳ್ಳಿಗಾಡುಗಳಲ್ಲಿ ಕೊಟ್ಟರೆ ಇದರಿಂದ ಎಷ್ಟೋ ಉತ್ಪಾದನೆ ಜಾಸ್ತಿಯಾಗುತ್ತದೆ. ಮೊನ್ನೆತಾನೇ ಒಂದು ಬೋರ್ಡನ್ನು ಹೊಸದಾಗಿ ರಚನೆ ಮಾಡಿದ್ದೀರಿ. ಇದು ಅಟಾನಮಸ್ ಬಾಡಿ ಎಂದು ಶ್ರೀಮಾನ್ ಚನ್ನಬಸಪ್ಪನವರೇ ಹೇಳಿದ್ದಾರೆ. Autonomous body has become monotonous. ಆ ಬೋರ್ಡ್ ರಚನೆಯಾಯಿತು. ಅದಕ್ಕೆ ಒದಗಿಸತಕ್ಕ ಹಣ ಅಲ್ಲಿ ಸದ್ವಿನಿಯೋಗವಾಗಲಿ ಎಂದು ಅನೇಕರು ಹೇಳಿದ್ದಾರೆ. ತಾವು ಶರಾವತಿ ವಿಷಯದಲ್ಲಿ ರಾಜಕೀಯ ದೃಷ್ಟಿಯನ್ನಿಟ್ಟುಕೊಂಡು ತಮ್ಮ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಯಥೇಚ್ಛವಾಗಿ ಒದಗಬೇಕು; ಮಂತ್ರಿಮಂಡಲದಲ್ಲಿ ಯಾರು ವಶೀಲಿಬಾಜಿ ಮಾಡುತ್ತಾರೋ ಅವರಿಗೋಸ್ಕರ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎಂಬ ಭಾವನೆ ಇಲ್ಲವೆಂದು ಹೇಳಿದ್ದೀರಿ. ಅಂಥಾದ್ದರಲ್ಲಿ ತಾವೇ ಈ ರಾಜಕೀಯ ವ್ಯಾಮೋಹಕ್ಕೆ ಸಿಕ್ಕಿಹೋಗಿದ್ದೀರಿ,ಎಂಬ ಕೂಗು ಈಗೀಗ ನಮ್ಮ ಕಿವಿಗೆ ಬೀಳುತ್ತಿದೆ. ಆದ್ದರಿಂದ ತಾವು ಈ ವಶೀಲಿಬಾಜಿಗೆ ಮಾತ್ರ ಬೀಳಬೇಡಿ ಎಂದು ಹೇಳುತ್ತೇನೆ. ಈಗ ತಾನೇ ಸಹಕಾರ ಮಂತ್ರಿಗಳು ಮಾತನಾಡುತ್ತಾ ಇಲ್ಲಿಂದ ಹಿಮಾಚಲದ ವರೆಗೂ ಭಾಷಣ ಮಾಡಿದರು. ಹಿಂದಿನ ಸರ್ಕಾರ ಮಾಡಿದ್ದರಮೇಲೆ ಈ ಸರ್ಕಾರ ಮಾಡಿದ್ದು ಏನೇನು ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. If I am wrong and if I go out of my limits the Chair can pull me up.

Sri T.D.MARANNA (Magadi).—I rise to a point of order, Sir. The Hon'ble Member while speaking on the demand under discussion is referring to the statement made by the Hon'ble Minister for

co-operation. Is it relevant? I want a ruling from the Chair.

Sri C. J. MUCKANNAPPA.—Sri Maranna was the Sub-Editor of "Prajavani." I have not made my point clear. Don't be hasty.

ಇದನ್ನು ಏತಕ್ಕೆ ಹೇಳಿದೆನೆಂದರೆ, ಇದರಲ್ಲಿ ತಾವೆಲ್ಲರೂ ಸಹಕಾರಿಯಾಗಬೇಕು ಎನ್ನುವಾಗ ಹಿಂದಿನ ಸರ್ಕಾರ ಮಾಡಿದ್ದಂತಹ ಕಾರ್ಯಕ್ರಮಗಳನ್ನು ಈ ಸರ್ಕಾರ ಏಕೆ ರದ್ದುಮಾಡಿತು ? ತುಮಕೂರು ಜಿಲ್ಲೆಯಲ್ಲಿ 10 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕುಣಿಗಲ್ ತಾಲ್ಲೂಕಿನ ಕೀಲಾರ ಪಿಕಪ್ಪನ್ನು ಕಟ್ಟಬೇಕೆಂದು ಶ್ರೀಮಾನ್ ವೀರಣ್ಣಗೌಡರು ಪಬ್ಲಿಕ್‌ವರ್ಕ್ಸ್ ಮಂತ್ರಿಯಾಗಿದ್ದಾಗ್ಗೆ ಮಂಜೂರು ಮಾಡಿದ್ದರು. ಅಂಥಾದ್ದಕ್ಕೆ ಈಗ ಕೊಡಲಪೆಟ್ಟನ್ನು ಏಕೆ ಹಾಕಿದಿರಿ ? 57-58ನೆಯ ಸಾಲಿನಲ್ಲಿಯೇ 10 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿ, ಈ ಕೆಲಸ ಪ್ರಾರಂಭ ಮಾಡಬೇಕೆಂದು ನಿರ್ಧರಿಸಿದ್ದರು. ಈ ಕೀಲಾರ ಪಿಕಪ್‌ನಿಂದ ಎರಡು ತಾಲ್ಲೂಕುಗಳಿಗೂ ಅನುಕೂಲವಾಗತಕ್ಕದ್ದು ಇತ್ತು. ಇದನ್ನು ಯಾವ ರೀತಿ ಏತಕ್ಕಾಗಿ ಕ್ಯಾನ್ಸಲ್ ಮಾಡಿದಿರಿ ಎಂಬುದಕ್ಕೆ ನನಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಈ ಬಗ್ಗೆ ಶ್ರೀಮಾನ್ ವೀರಣ್ಣಗೌಡರು ನನಗೆ ಬರೆದಿರತಕ್ಕ ಒಂದು ಪತ್ರ ನನ್ನಲ್ಲಿದೆ. 57–58ರಲ್ಲಿ ಮಾಡಿದ್ದಂತಹ ಯೋಜನೆಯನ್ನು ಪುನಃ ತಿರುಗಿಸಿ ನೋಡಿ ಮುಂದಿನ ಪ್ಲಾನಿಂಗ್ ಸ್ಕೀಂನಲ್ಲಿ ಸೇರಿಸಬೇಕು. ಈ 10 ಲಕ್ಷ ರೂಪಾಯಿಗಳು ಮೈನರ್ ಇರ್ರಿಗೇಷನ್‌ಗಾಗಿ ಉಪಯೋಗವಾಗುತ್ತದೆಂಬುದಾಗಿ ಅದಕ್ಕೆ ಅಡ್ಡಿ ಆತಂಕಗಳನ್ನು ತಂದಿದ್ದೀರಿ. ಅದನ್ನು ಯಾವುದೋ ಒಂದು ಯೋಜನೆಯಲ್ಲಿ ಸೇರಿಸಬೇಕೆಂದು ಮಾಡಿದ್ದೀರಿ. ಎರಡನೆಯ ಮತ್ತು ಮೂರನೆಯ ಯೋಜನೆಯಲ್ಲಿ ಇದರ ಅಂಕಿ ಅಂಶವೇ ಇಲ್ಲ. ಇದರ ವ್ಯವಹಾರವೇ ಇಲ್ಲ. ಒಂದುವೇಳೆ ಇದರಲ್ಲಿ ಏನಾದರೂ ಅನ್ಯಾಯ ನಡೆದಿದ್ದರೆ, ತಮಗೆ ಪ್ರತ್ಯಕ್ಷವಾಗಿಯೋ, ಅಪ್ರತ್ಯಕ್ಷವಾಗಿಯೋ ವಿಷಯ ಗೊತ್ತಾದರೆ ಅದನ್ನು ಕೂಲಂಕಷವಾಗಿ ವಿಚಾರಮಾಡಿ ಜಾಗ್ರತೆ ಸರಿಪಡಿಸಬೇಕೆಂದು ನಾನು ವಿನಯದಿಂದ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ಕುಣಿಗಲ್ ಸೆರಿಕಲ್‌ಚರ್ ಇಲಾಖೆ ಬಿಲ್ಡಿಂಗ್ ವಿಷಯ. ತಾವೇ ಅಲ್ಲಿಗೆಹೋಗಿ ಖುದ್ದು ನೋಡಿಕೊಂಡು ಬಂದಿದ್ದೀರಿ. ಅದರ ವ್ಯವಹಾರ ಏನಾಯಿತು ಎಂಬುದು ಇದುವರೆಗೂ ಗೊತ್ತಿಲ್ಲ. ಅದನ್ನು ಯಾವರೀತಿಯಲ್ಲೂ ಬಿಡಬಾರದು. ಕೇಂದ್ರ ಸರ್ಕಾರದ ಆದೇಶ ಈ ಬಗ್ಗೆ ಬಂದಿದ್ದರೂ ಅದನ್ನು ಬದಲಾಯಿಸಕೂಡದು ಎಂದು ನಾನು ಸರ್ಕಾರದವರಿಗೆ ಹೇಳುತ್ತೇನೆ. ಈ ಕಟ್ಟಡಗಳಮೇಲೆ ಹಾಕತಕ್ಕ ಹಣ ಕೇಂದ್ರ ಸರ್ಕಾರದ್ದಾಗಲೀ, ರಾಜ್ಯ ಸರ್ಕಾರದ್ದಾಗಲೀ, ನಿಮ್ಮ ಇಲಾಖೆಯವರದ್ದಾಗಲೀ, ಅಥವಾ ಬೇರೆ ಇನ್ನೊಂದು ಇಲಾಖೆಯವರದ್ದೇಆಗಲಿ, ಹಣವೇನೋ ನಮ್ಮದು. ಇದಕ್ಕಾಗಿ ಎಲ್ಲೆಲ್ಲಿ ತಾವು ಯಾವ್ಯಾವ ಕಟ್ಟಡಗಳನ್ನು ನೋಡಿ ತೀರ್ಮಾನ ತೆಗೆದುಕೊಂಡಿದ್ದೀರೋ ಅದನ್ನು ಎಂತಹ ಸಂದರ್ಭ ಬಂದರೂ ಬದಲಾಯಿಸಕೂಡದು ಎಂದು ಹೇಳುತ್ತೇನೆ.

ಇನ್ನು ಪಿ.ಡಬ್ಲ್ಯು.ಡಿ. ಯಲ್ಲಿ ಲಂಚ ಇದೆಎಂಬುದು ನಿಜ. ಎಲೆಕ್ಟ್ರಿಸಿಟಿ ಬೋರ್ಡಿನಲ್ಲೂ ಲಂಚವಿರುವುದರಿಂದ ಅಲ್ಲಿಯೂ ಆಂಟಿಕರಪ್ಷನ್ ಇಲಾಖೆಯವರು ಈಚೀಚೆಗೆ ಪ್ರವೇಶ ಮಾಡುತ್ತಿದ್ದಾರೆ. ಏಕೆಂದರೆ ಒಂದೊಂದು ಸಾರಿ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಎಸ್ಟಿಮೇಟನ್ನು ತಯಾರು ಮಾಡಿದರೆ ಅದು ಎಲ್ಲಿ ಹೋಗುತ್ತದೆ ಎಂಬುದೇ ಗೊತ್ತಾಗುವುದಿಲ್ಲ. ಸಾಮಾನ್ಯವಾಗಿ ತುಮಕೂರಿನಿಂದ ಪಿ.ಡಬ್ಲ್ಯು.ಡಿ. ಆಫೀಸಿಗೆ ಒಂದು ಎಸ್ಟಿಮೇಟ್ ಬರುತ್ತದೆ ಎನ್ನೋಣ. ಅಲ್ಲಿಂದ ರೈತ ಇಲ್ಲಿಗೆ ಬಂದು ಕೇಳಿದರೆ ಇಲ್ಲಿ ಇಂಗ್ಲಿಷ್‌ನಲ್ಲಿ ಏನೋ ಹೇಳಿಬಿಡುತ್ತಾರೆ. ಅವನಿಗೆ ಇಂಗ್ಲಿಷ್ ಮಾತನಾಡಲು ಬರುವುದಿಲ್ಲ. ಸರಿಯಾಗಿ ಗೊತ್ತಾಗುವುದಿಲ್ಲ. ಏನೋ ಅದು ಆಗಲಿಲ್ಲವೆಂದು ಹೇಳಿಬಿಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಲಂಚದಿಂದ ಕೆಲಸಗಳು ನಡೆಯುತ್ತವೆ. ಹೀಗೆಯೇ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ದೊಡ್ಡದಾದಮೇಲೆ ಲಂಚರುಷವತ್ತು ಜಾಸ್ತಿಯಾಗಿದೆ. ಅದಕ್ಕೆ ಲಂಗುಲಗಾಮು ಏನೂ ಇಲ್ಲ. ಈ ಬೋರ್ಡ್ ರಚನೆ ಆದಮೇಲೆ ಅದರ ಮೇಲಿದ್ದ ಸರ್ಕಾರದ ಅಧಿಕಾರವೇ ಹೋಯಿತು. ಒಂದು ಹಿಡಿತವೇ ಇಲ್ಲವೆಂಬುದನ್ನು ಈ ಸಭೆಯ ಅವಗಾಹನೆಗೆ ತಂದಿದ್ದೇನೆ. ಅದಕ್ಕಾಗಿಯೇ ಇನ್ನುಮುಂದಾದರೂ ಈ ಬೋರ್ಡಿನ ಕಾರ್ಯ ಚಟುವಟಿಕೆಗಳನ್ನು ಸರ್ಕಾರ ಒಂದು ಹಿಡಿತದಲ್ಲಿ ಇಟ್ಟುಕೊಳ್ಳಬೇಕೆಂದು ನಾನು ಮೊದಲು ಹೇಳಿದ್ದು. I am not very much enamoured of these Boards and Corporations ನೀವು ಯಾವುದೋ ಒಂದು ಕಾನೂನು ಇಟ್ಟುಕೊಂಡು ಅವರಿಗೆ ಇಂತಹ ಅಧಿಕಾರವನ್ನು ಕೊಟ್ಟಿದ್ದೀರಿ. ಇದರಿಂದಲೇ ನಿಮ್ಮ ದೌರ್ಬಲ್ಯ ಎಷ್ಟರಮಟ್ಟಿಗಿದೆ ಎಂಬುದು ಗೊತ್ತಾಗುತ್ತದೆ. ಕೇಂದ್ರ ಸರ್ಕಾರ ಒಂದು ಕಾನೂನು ಮಾಡಿದ್ದಾರೆ. ದೇಶಕ್ಕೆಲ್ಲಾ ಒಂದೇಒಂದು ಕಾನೂನು ಇರುವಾಗ ಆ ಕಾನೂನು ಪರಿಮಿತಿಯೊಳಗೇ ಈ ಬೋರ್ಡನ್ನು ರಚನೆ ಮಾಡಿದ್ದೇವೆಂದು ನೀವು ಹೇಳಿದರೆ ಆಗ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಹಿಂದೆ ಒಂದುಸಾರಿ ಇಂತಹ ಬೋರ್ಡುಗಳೇ ಬೇಡವೆಂದು ಕೇಂದ್ರಸರ್ಕಾರವೇ ಒಪ್ಪಿಕೊಂಡಿರತಕ್ಕ ಕಾಲದಲ್ಲಿ ಇದನ್ನೇಕೆ ಮಾಡಿದಿರಿ? ಈ ಬೋರ್ಡ್ ರಚನೆಯಾದಮೇಲೆ ವಿದ್ಯುಚ್ಛಕ್ತಿ ಖಾತೆಯಲ್ಲಿ ಉಂಟಾದಷ್ಟು ನಷ್ಟ, ಅನಾನುಕೂಲ, ಇದರಲ್ಲಿ ತಾಂಡವವಾಡತಕ್ಕ ಲಂಚ ಇನ್ನಾವ ಇಲಾಖೆಯಲ್ಲೂ ಇಲ್ಲವೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಆದ್ದರಿಂದ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಏನೇನು ಅನಾಹುತ, ಕಷ್ಟಗಳಿವೆ ಎಂಬುದನ್ನು ಸರ್ಕಾರದವರು ಕೂಡಲೇ ಕಂಡುಹಿಡಿಯಬೇಕೆಂದು ನಾನು ಹೇಳುತ್ತೇನೆ.

Sri M. MALLIKARJUNASWAMY.—That is why Sri Channabasappa has taken over Anti-Corruption Department.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಿಂದೆ ಒಂದುಸಾರಿ ಸರ್ಕಾರದವರು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಅಂತಹವರಮೇಲೆ ಕಾನೂನು ಪ್ರಕಾರ ಕ್ರಮಕೈಗೊಂಡು ಶಿಕ್ಷೆ, ಡಿ-ಪ್ರೊಮೋಷನ್ ಮಾಡುತ್ತೇವೆಂದು ಹೇಳಿದರು. ಆ ಮಾತನ್ನು ಎಲೆಕ್ಟ್ರಿಸಿಟಿ ಬಿಲ್ಲನ್ನು ಈ ಸಭೆಯಲ್ಲಿ ಒಪ್ಪಿಕೊಳ್ಳುವಾಗ ಹೇಳಿದ್ದರು. ಆ ವಿಚಾರವಾಗಿ ಇದುವರೆಗೂ ಸರ್ಕಾರ ಸ್ಪಷ್ಟವಾಗಿ ಯಾವ ರೀತಿಯಲ್ಲೂ ಈ ಸಭಾಸದಸ್ಯರಿಗೆ ಮನದಟ್ಟು ಮಾಡಲಿಲ್ಲ. ಎಲ್ಲಾ ಅಧಿಕಾರಿಗಳಮೇಲೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಿಮ್ಮ ಹೋಲ್ಡ್ ಇದೆ. ಅದಕ್ಕೋಸ್ಕರ ನಿಮ್ಮ ಅಧಿಕಾರಿಗಳಿಂದ ರೈತರಿಗೆ ಆಗತಕ್ಕ ಅನ್ಯಾಯ ಮತ್ತು ಕಷ್ಟವನ್ನು ತಪ್ಪಿಸುವುದಕ್ಕೆ ಸರ್ವ ಪ್ರಯತ್ನ ಮಾಡಬೇಕು. ಬೆಂಗಳೂರು ಮತ್ತು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮೈಸೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಲಸಕ್ಕೆ ಬಾರದ ರೀತಿಯಲ್ಲಿ ಖರ್ಚಾಗುತ್ತಿರುವ ಎಲೆಕ್ಟ್ರಿಸಿಟಿಯನ್ನು ವ್ಯವಸಾಯಕ್ಕೆ ಉಪಯೋಗಮಾಡಿ ಹೆಚ್ಚಿಗೆ ಹೆಚ್ಚಿಗೆ ಆಹಾರವನ್ನು ಬೆಳೆಯುವುದಕ್ಕೆ ಅವಕಾಶ ಮಾಡಬೇಕು ಎಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಈ ಹಣವನ್ನು ತಮ್ಮ ಕೈಯಲ್ಲಿ ಕೊಟ್ಟಿರುವುದು ದೇಶದ ಅಭ್ಯುದಯಕ್ಕೋಸ್ಕರವಾಗಿ, ಈ ಖಾತೆಗಳಲ್ಲಿ ಲಂಚ ಖುಷುವತ್ತುಗಳ ನಿರ್ಮೂಲಕ್ಕೋಸ್ಕರವಾಗಿ, ಹೆಚ್ಚಿನ ಆಹಾರವನ್ನು ಉತ್ಪನ್ನ ಮಾಡುವುದಕ್ಕೋಸ್ಕರವಾಗಿ, ರಸ್ತೆಯನ್ನು ಮಾಡುವುದಕ್ಕೋಸ್ಕರವಾಗಿ, ಮತ್ತು ಸಂಚಾರಕ್ಕೆ ಅನಾನುಕೂಲವಿರುವ ಕಡೆ ಸೇತುವೆಗಳನ್ನು ಕಟ್ಟುವುದಕ್ಕೋಸ್ಕರವಾಗಿ ಹಣ ಸದ್‌ವಿನಿಯೋಗ ಆಗಲೀ ಎಂದು ಯಾವ ರಾಜಕೀಯಕ್ಕೂ ಸಿಲುಕದೆ ನಮ್ಮ ಪಕ್ಷ ನಿಮ್ಮ ಪಕ್ಷ ಎಂಬ ಪಕ್ಷದ ಭಾವನೆ ಇಲ್ಲದೆ ಈ ಲೋಕೋಪಯೋಗಿ ಖಾತೆಗೆ ಕೊಟ್ಟಿರತಕ್ಕ 38 ಕೋಟಿ ರೂಪಾಯಿಗಳು ಸದ್‌ವಿನಿಯೋಗವಾಗಲಿ ಎಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ.ಎಂ.ದೇವಯ್ಯ(ಪಿರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೇ, ಈ ಡಿಮ್ಯಾಂಡನ್ನು ಸಮರ್ಥಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ನೀರಾವರಿ ಯೋಜನೆಯಲ್ಲಿ ಹಾರಂಗಿ ನಾಲೆ ಆಗಬೇಕು ಎನ್ನುವ ಒಂದು ಅಭಿಪ್ರಾಯದಿಂದ ನಾವು ಕೊಡಗು ಸರ್ಕಾರದಲ್ಲಿರುವಾಗಲೇ ಆಗಿನ ಸರ್ಕಾರ ಪ್ರಯತ್ನ ಮಾಡುತ್ತಾ ಇರುವಾಗ ಮೈಸೂರು ಸರ್ಕಾರ ಅಡ್ಡಿಬಂದು ನಿಲ್ಲಬೇಕಾಯಿತು. ಈಗ ನಾವೆಲ್ಲಾ ಒಂದುಗೂಡಿದ್ದೇವೆ. ಹಾರಂಗಿ ನಾಲೆಯನ್ನು ತೆಗೆದುಕೊಳ್ಳಬೇಕು ಎನ್ನುವ ಅಭಿಪ್ರಾಯದಿಂದ ಸರ್ಕಾರದವರು ಹಣವನ್ನು ನೀಡುತ್ತಾ ಇರುವಾಗ 6 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಿದ್ದಾರೆ. ಇದು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮೇಜರ್ ಇರ್ರಿಗೇಷನ್ ಪಟ್ಟಿಯಲ್ಲಿ ಇಲ್ಲದೆ ಮೀಡಿಯಂ ಇರ್ರಿಗೇಷನ್ ಪಟ್ಟಿಯಲ್ಲಿ ಇದ್ದ ಹಾಗೆ ಕಾಣುತ್ತದೆ. ಇಷ್ಟು ಖರ್ಚು ಆದರೂ ಕೂಡ ಏತಕ್ಕೋಸ್ಕರ ಮೀಡಿಯಂ ಇರ್ರಿಗೇಷನ್ ಪಟ್ಟಿಯಲ್ಲಿ ಇಟ್ಟಿದ್ದಾರೋ ಕಾಣುವುದಿಲ್ಲ. ಹಾರಂಗಿ ನಾಲೆ ಕೊಡಗು, ಮಂಡ್ಯ, ಹಾಸನ, ಮತ್ತು ಮೈಸೂರು ಈ ಮೂರು ಡಿಸ್ಟ್ರಿಕ್ಟುಗಳಿಗೂ ನೀರನ್ನು ಒದಗಿಸುತ್ತದೆ. ಈ ನಾಲೆಯನ್ನು ಕಟ್ಟುವುದರಿಂದ ಕೊಡಗಿನಲ್ಲಿ ಆರು ಸಾವಿರ ಎಕರೆ ಜಮೀನು ನೀರಾವರಿ ಆಗುತ್ತದೆ. ಹಾಗೂ ಮೈಸೂರು, ಹಾಸನ, ಮತ್ತು ಮಂಡ್ಯ ಡಿಸ್ಟ್ರಿಕ್ಟುಗಳಲ್ಲಿ 54 ಸಾವಿರ ಎಕರೆ ಜಮೀನಿಗೆ ನೀರು ಸಪ್ಲೈ ಮಾಡುವ ಯೋಜನೆಯಾಗುತ್ತದೆ. ಇಂಥಾ ಯೋಜನೆಯನ್ನು ಮೀಡಿಯಮ್ ಟರ್ಮ್ ಇರ್ರಿಗೇಷನ್‌ಗೋಸ್ಕರ ಇಟ್ಟಿದ್ದು ನೋಡಿದರೆ ಅದನ್ನು ಸರ್ಕಾರದವರು ನಿಜವಾಗಿಯೂ ತೆಗೆದುಕೊಳ್ಳುತ್ತಾರೋ ಇಲ್ಲವೋ, ಏತಕ್ಕೋಸ್ಕರ ಈ ಮೀಡಿಯಮ್ ಇರ್ರಿಗೇಷನ್‌ನಲ್ಲಿ ಇಟ್ಟಿದ್ದಾರೋ ಎನ್ನುವ ಸಂಶಯ ಬರುತ್ತದೆ. ಈ ಯೋಜನೆಯನ್ನು ಮಾಡಿದರೆ ಏನು ಅನುಕೂಲವಾಗುತ್ತದೆ ಎಂದರೆ, ಈ ನಾಲೆಯ ಹತ್ತಿರ ನೀರಿನ ಪ್ರಯೋಜನವನ್ನು ಹೊಂದುವುದಕ್ಕೆ ಭೂಮಿಯನ್ನು ತಯಾರು ಮಾಡಿದರೆ 4-5 ವರ್ಷಗಳಲ್ಲಿ 40-50 ಸಾವಿರ ಎಕರೆ ಜಮೀನು ವ್ಯವಸಾಯಕ್ಕೆ ಬರುತ್ತದೆ. ಇಲ್ಲಿನ ಜನರು ಇರ್ರಿಗೇಷನ್ ಮೈಂಡೆಡ್ ಆಗಿರುವುದರಿಂದ ಒಡನೆಯೇ ಪ್ರಯೋಜನಕ್ಕೆ ಬರುವ ಅನುಕೂಲವಿದೆ. ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳುತ್ತಿರುವುದನ್ನು ಕೇಳುತ್ತಿದ್ದೇವೆ. ಇಂಥಾ ನಾಲೆಗಳನ್ನಾದರೂ ಕಟ್ಟುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅಲ್ಲಿ ಭೂಮಿಯನ್ನು ಸಿದ್ಧಮಾಡುವುದಕ್ಕೆ ಜನ ತಯಾರು ಇರುವುದರಿಂದ ತಾವು ಇದನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮೇಜರ್ ಇರ್ರಿಗೇಷನ್ನಿನ ಹಾಗೆ ಭಾವಿಸಿ ತೆಗೆದುಕೊಳ್ಳಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಂಬದಕಡ ಯೋಜನೆಯೂ ಕಾಣುವುದಿಲ್ಲ. 1924ನೇ ಇಸವಿಯಲ್ಲಿ ಮದ್ರಾಸಿಗೂ ಮತ್ತು ಮೈಸೂರಿಗೂ ಆದ ಕಾವೇರಿ ನೀರಿನ ವಾದವಿವಾದದ ಒಪ್ಪಂದದಲ್ಲಿ ಮೈಸೂರು ಸರ್ಕಾರದವರು ಒಂದು ಲಕ್ಷ ಚಿಲ್ಲರೆ ಎಕರೆ ಜಮೀನಿಗೆ ನೀರು ಕೊಡಬೇಕು ಎಂದು ಇದೆ ಎಂದು ತಿಳಿದಿದ್ದೇನೆ. 1924ನೇ ಇಸವಿಯಿಂದ 1960ನೇ ಇಸವಿಯ ವರೆಗೂ ಮೈಸೂರು ಸರ್ಕಾರದವರು ಇದಕ್ಕೆ ಏನೂ ಗಮನ ಕೊಡದೆ ಸುಮ್ಮನೆ ಇರುವುದನ್ನು ನೋಡಿದರೆ, ಕಾವೇರಿ ಹೊಳೆಯು ನಮ್ಮ ದೇಶದಲ್ಲಿ ಹುಟ್ಟಿ ನಮ್ಮ ದೇಶದಲ್ಲಿ ಹರಿಯುತ್ತಾ ಇದ್ದರೂ ಅದರ ಪ್ರಯೋಜನವನ್ನು ಹೊಂದಲು ತಾತ್ಸಾರ ಏತಕ್ಕೆ ಮಾಡುತ್ತಿದ್ದಾರೋ ಗೊತ್ತಾಗುವುದಿಲ್ಲ. ಇದನ್ನು ತೆಗೆದುಕೊಳ್ಳಬೇಕು ಎಂದು ಪ್ರಾರ್ಥಿಸುತ್ತೇನೆ. ಕಂಬದಕಡ ಪ್ರಾಜೆಕ್ಟನ್ನು ಕಟ್ಟುವುದರಿಂದ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹುಣಸೂರು ತಾಲ್ಲೂಕು ಮತ್ತು ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ 55 ಸಾವಿರ ಎಕರೆ ನೀರು ಸಪ್ಲೈ ಆಗುವ ಅನುಕೂಲ ಇದೆ. ಏತಕ್ಕೋಸ್ಕರ ಸುಮ್ಮನೆ ಇದ್ದಾರೆ? ಈಗ 13 ವರ್ಷಗಳಿಂದಲೂ ಸುಮ್ಮನೆ ಇದ್ದಾರೆ. ಹೀಗೆ ಮಾಡುವುದರಿಂದ ನೀರನ್ನು ಉಪಯೋಗಿಸಿಕೊಳ್ಳುವ ಹಕ್ಕನ್ನು ಕಳೆದುಕೊಳ್ಳುವ ತೊಂದರೆ ಬರುತ್ತದೆ. ಆದ್ದರಿಂದ ಅದನ್ನು ಜಾಗ್ರತೆಯಾಗಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಆಮೇಲೆ ರಸ್ತೆಗಳ ವಿಷಯ. ಪಿರಿಯ್ಯಾಪಟ್ಟಣ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಅನವತ್ತಿಯಿಂದ ಕಂಗಲ್, ಪಿರಿಯಾಪಟ್ಟಣದಿಂದ ಬುವನಹಳ್ಳಿ, ವಯಾ ಕೋಮಲಾಪುರ, ರಾವಂದೂರಿನಿಂದ—ಕೆ. ಆರ್. ನಗರ, ಪಿರಿಯಾಪಟ್ಟಣದಿಂದ—ಸತ್ಯಗಾಲ್ ರೋಡು, ಬೆಟ್ಟದಪುರದಿಂದ—ರಾವಂದೂರು, ವಯಾ ತುಂಗ, ಗೋರಹಳ್ಳಿಯಿಂದ—ಚಪ್ಪರದಹಳ್ಳಿ, ವಯಾ ದೊಡ್ಡಕುಮಾರವಳ್ಳಿ, ಈ ರಸ್ತೆಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಇವನ್ನು ಸರ್ಕಾರಕ್ಕೆ ಸೇರಿಸಿದರೂ ಕೂಡ ಅಲ್ಲಿ ಕೆಲಸ ಆಗಿಲ್ಲ. ಅದು ಏತಕ್ಕೆ ಆಗಿಲ್ಲವೋ ಗೊತ್ತಿಲ್ಲ. ಇದು ಬಹಳ ಆವಶ್ಯವಾಗಿ ಆಗಬೇಕಾಗಿದೆ. ಜನಗಳಿಗೆ ವ್ಯಾಪಾರ ವಹಿವಾಟುಗಳಿಗೆ ತೊಂದರೆಯಾಗಿದೆ. ಆದ್ದರಿಂದ ಆದಷ್ಟು ಬೇಗನೆ ಕಾಂಪ್ರಿಹೆನ್ಸೀವ್ ಎಸ್ಟಿಮೇಟ್ ಮಾಡಿ ಒಡನೆಯೇ ತೆಗೆದುಕೊಳ್ಳಬೇಕು ಎಂದು ಅತಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ವಿಲೇಜ್ ಕಮ್ಯುನಿಕೇಶನ್ ರೋಡ್ಸ್ ಇದರಲ್ಲಿ 4-6 ರೋಡುಗಳನ್ನು ಒಡನೆಯೇ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಅವು ಯಾವುವೆಂದರೆ, ಹೆಬಟೂರು, ಸುಲಗೋಡು ರೋಡು. ಕುನಹಳ್ಳಿ—ಬಸವನಹಳ್ಳಿ, ಮತ್ತು ತುಂಗಾರೋಡು, ಕಂಪಲಾಪುರದಿಂದ ಸತ್ಯಗಾಲ್ ರೋಡ್, ನಂದಿನಾತಪುರದಿಂದ ಬೂತನಹಳ್ಳಿ, ಹಾಲನಹಳ್ಳಿ ರೋಡು, ಪೂನಡಹಳ್ಳಿಯಿಂದ ತುಣಸೂರು, ವಯಾ ಬಸವನ

ಹಳ್ಳಿ. ಇದನ್ನು ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಮೈನರ್ ಇರ್ರಿಗೇಷನ್ ವಿಷಯದಲ್ಲಿ ಹೇಳುವುದಾದರೆ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ 525 ಕೆರೆಗಳಿವೆ. ಕೆಲವು ಕೆರೆಗಳು ರಿಪೇರಿ ಆಗಿವೆ. ಕೆಲವು ಕೆರೆಗಳು ರಿಪೇರಿ ಆಗಿಲ್ಲ. ಆದ್ದರಿಂದ ರಿಪೇರಿ ಆಗದೆ ಇರುವ ಕೆರೆಗಳನ್ನು ಆದಷ್ಟು ಬೇಗ ಸಜ್ಜುಗೊಳಿಸಿ ಜನಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಮೈಸೂರಿನಿಂದ ಮೂಗೂರಿಗೆ ಹೋಗುವ ರಸ್ತೆಗೆ ಟಾರ್ ಹಾಕಿದ್ದಾರೆ. ಬೇರೆ ಯಾವ ರಸ್ತೆಗಳಿಗೂ ಟಾರು ಹಾಕಿಲ್ಲ. ಫ್ರೇಜರ್ ಪೇಟೆಯಿಂದ ಬೆಟ್ಟದಪುರ ರೋಡು, ಪಿರಿಯಾಪಟ್ಟಣದಿಂದ ಬೆಟ್ಟದಪುರ ರೋಡು, ಬೆಟ್ಟದಪುರದಿಂದ ಕೆ.ಆರ್. ನಗರರೋಡು ಮತ್ತು ಕಿತ್ತೂರಿನಿಂದ ರಾವಂದೂರು ರೋಡು, ಈ ರೋಡುಗಳು ಬಹಳ ಮುಖ್ಯವಾದ ರಸ್ತೆಗಳಾಗಿರುವುದರಿಂದ ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಯಾವ ರಸ್ತೆಗಳೂ ಟಾರ್ ಆಗದೆ ಇರುವುದರಿಂದ ಈ ರಸ್ತೆಗಳನ್ನು ಟಾರ್ ಮಾಡಬೇಕು ಎಂದು ಅತಿವಿನಯದಿಂದ ಬೇಡಿಕೊಳ್ಳುತ್ತೇನೆ. ಮೈಸೂರು ಮಾರ್ಗದಲ್ಲಿ ಬೆಂಗಳೂರು ರೋಡು ಬಹಳ ಮುಖ್ಯವಾದ ರೋಡು. ಕೊಡಗಿನಲ್ಲಿ ಕಾಫಿ, ಏಲಕ್ಕಿ, ಕಿತ್ತಳೆ, ಟಿಂಬರ್, ಬೇಕಾದಷ್ಟು ಸಿಕ್ಕುತ್ತದೆ. ಇವುಗಳಿಂದ ಲಕ್ಷಗಟ್ಟಲೆ ರೂಪಾಯಿ ಕೊಡಗಿನಿಂದ ಮೈಸೂರು ಸರ್ಕಾರಕ್ಕೆ ಉತ್ಪತ್ತಿಯಾಗುತ್ತದೆ. ಸುಮಾರು 85-90 ಲಕ್ಷ ರೂಪಾಯಿ ಮರದಿಂದಲೇ ಉತ್ಪತ್ತಿಯಾಗುತ್ತದೆ. ಆ ಮರಗಳು ರಸ್ತೆಯಿಂದ ಸಾಗಬೇಕಾಗಿದೆ. ಆದರೆ ರಸ್ತೆಯ ಸ್ಥಿತಿಯನ್ನು ನೋಡಿದರೆ ಬಹಳ ಶೋಚನೀಯವಾಗಿದೆ.

ಮೈಸೂರು-ಮರ್ಕೆರಾ ರೋಡು ಟಾರ್ ಆಗಿದ್ದರೂ ಚೆನ್ನಾಗಿಲ್ಲ. ಇದು ಮಂತ್ರಿಗಳಿಗೆ ಗೊತ್ತಿರಬಹುದು. ಅವರ ಊರು ಅಲ್ಲಿಯೇ ಇರುವುದರಿಂದ ಸ್ವತಃ ಅನುಭವವಿರಬಹುದು. ಇಷ್ಟು ಪ್ರಾಮುಖ್ಯವಾದ ರಸ್ತೆಯನ್ನು ಸರಿಯಾಗಿ ಮಾಡದೆ ಇರುವುದು ಒಂದು ದೊಡ್ಡ ಕೊರತೆಯಾಗಿದೆ. ಈ ರಸ್ತೆಯಲ್ಲಿ ಲಾರಿ ಟ್ರಾಫಿಕ್ ಜಾಸ್ತಿಯಾಗಿದೆ. ಆದ್ದರಿಂದ ಮೈಸೂರು-ಮಂಗಳೂರು ರಸ್ತೆಯನ್ನು ನ್ಯಾಶನಲ್ ಹೈವೆ ಆಗಿ ಮಾಡಬೇಕು, ಮತ್ತು ಈಗಿರುವುದರ ಎರಡರಷ್ಟು ಅಗಲ ಮಾಡಿ ಕನ್‌ಸಾಲಿಡೇಟ್ ಮಾಡಿ ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಕೊಡಗಿನಲ್ಲಿ ಹಿಂದಿನ ಸರ್ಕಾರ ಇದ್ದಾಗ ಇದನ್ನು ಮಾಡಲು ಒಪ್ಪಿದ್ದರು. ಇಷ್ಟೇ ಅಲ್ಲದೆ ಹುಣಸೂರಿನಲ್ಲಿ ಲಕ್ಷ್ಮಣ ತೀರ್ಥಕ್ಕೆ ಒಂದು ಸೇತುವೆ ಇದೆ; ಅದು ಬಹಳ ಇಕ್ಕಟ್ಟಿನ ಸೇತುವೆ; ಅದನ್ನು 24 ಅಡಿ ಅಗಲ ಮಾಡಿ ಟ್ರಾಫಿಕ್ ಸರಾಗವಾಗಿ ನಡೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಹುಣಸೂರಿನಿಂದ ಕುಟ್ಟಕ್ಕಿರುವ ರಸ್ತೆಯೂ (ಮಾರ್ಗವಾಗಿ ಕುಣಿಗಲ್) ಆಗಬೇಕಲ್ಲವೇ!

ಶ್ರೀ ಕೆ. ಎಂ. ದೇವಯ್ಯ.—ಅದೂ ಮುಖ್ಯವಾದುದು, ಅದನ್ನು ಮಾಡಬೇಕು, ಆದರೆ ಮೈಸೂರಿನಿಂದ ಮಂಗಳೂರು ರಸ್ತೆಯೂ ಬಹಳ ಮುಖ್ಯವಾದುದು ಮತ್ತು ಅಗತ್ಯವಾದುದು. ಏಕೆಂದರೆ ಇದು ಈಸ್ಟ್-ವೆಸ್ಟನ್ನು ಜಾಯಿನ್ ಮಾಡುತ್ತದೆ. ಆದ್ದರಿಂದ ಇದನ್ನು ಬೇಗ ಮಾಡಬೇಕು.

ಕೊಡಗಿಗೆ ಸಿವಿಲ್ ವರ್ಕ್‌ಸಿಗಾಗಿ 75 ಲಕ್ಷ ರೂಪಾಯಿ ಮಂಜೂರು ಮಾಡಿದ್ದೀರಿ. ಹಿಂದೆ ಕೊಡಗಿನ ಸರ್ಕಾರವಿದ್ದಾಗ ಅಲ್ಲಿ P.W.D. ಎರಡು ಡಿವಿಜನ್‌ಗಳಿದ್ದುವು.—(1) P.W.D., (2) Minor Irrigation ಎಂದು. ಕೊಡಗು ಮಲೆನಾಡು ಪ್ರದೇಶ. ವರ್ಷಕ್ಕೆ ಆರು ತಿಂಗಳು ಮಳೆ ಇರುತ್ತದೆ; ಆಕಾಲದಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಕೊಡಗಿನಲ್ಲಿ ಮಳೆ 44 ಇಂಚಿನಿಂದ 330 ಇಂಚಿನವರೆಗೆ ಆಗುತ್ತದೆ. ಕೆಲಸವೆಲ್ಲಾ ಕೇವಲ ಆರು ತಿಂಗಳಿನಲ್ಲಿ, ಮಳೆ ಇಲ್ಲದಾಗ ಆಗಬೇಕು. ಬಾಕಿ ಕೆಲವು ಕಡೆಗಳಲ್ಲಿ 12 ತಿಂಗಳು ಕೆಲಸ ಮಾಡಬಹುದು. ಆದ್ದರಿಂದ ಕೊಡಗಿಗೆ ವರ್ಷಕ್ಕೆ ಏನು ಖರ್ಚು ಮಾಡಬೇಕೆಂದಿದೆಯೋ, ಅದು ಆರು ತಿಂಗಳಿನಲ್ಲಿಯೇ ಖರ್ಚಾಗಬೇಕು. ಎಂದರೆ ಆರು ತಿಂಗಳಿನಲ್ಲಿ 70 ಲಕ್ಷ ರೂಪಾಯಿ ಖರ್ಚು ಮಾಡಬೇಕು. ಕೊಡಗಿನಲ್ಲಿ ಕಂಟ್ರಾಕ್ಟರುಗಳು ಸಿಗುವುದೂ ಕಷ್ಟ. ಕೊಡಗಿಗೆ ವರ್ಗ ಮಾಡಿದ ಇಂಜನಿಯರುಗಳು ಈ ಕಾರಣಗಳಿಗಾಗಿ ಅಲ್ಲಿ ಇರಲು ಇಷ್ಟಪಡುವುದಿಲ್ಲ; ಚಾರ್ಜು ತೆಗೆದುಕೊಂಡು ರಜ ಹಾಕಿ ಬೆಂಗಳೂರಿಗೆ ಬಂದು, ಪುನಃ ವಾಪಸು ವರ್ಗಮಾಡಿಕೊಳ್ಳಲು ಪ್ರಯತ್ನಪಡುತ್ತಾರೆ. ಹೀಗಾಗಿ ಕೆಲಸವಾಗುವುದು ಬಹಳ ಕಷ್ಟವಾಗಿದೆ. ಆದ್ದರಿಂದ ಹಿಂದೆ ಇದ್ದಹಾಗೆಯೇ ಕೊಡಗಿನಲ್ಲಿ ಪ್ರತ್ಯೇಕವಾದ ಎರಡು ಡಿವಿಜನ್ನುಗಳನ್ನು ಮಾಡಬೇಕು. ಅಲ್ಲಿ ನಾಲ್ಕು ಸೇತುವೆಗಳ ಕೆಲಸವಾಗಬೇಕಾಗಿದೆ. ಮೂರು ಸೇತುವೆಗಳಿಗೆ ಅಡಿಗಲ್ಲು ಹಾಕಿದ್ದಾರೆ. ಆಗ್ಯೆ ಇದ್ದ ಮಂತ್ರಿಗಳು ಅಡಿಗಲ್ಲು ಇಡುವಾಗ, ಒಂದು ವರ್ಷದಲ್ಲಿ ಇವುಗಳನ್ನು ಪೂರೈಸಿ ಕೊಡುತ್ತೇವೆಂದು ಒಪ್ಪಂದ ಮಾಡಿಕೊಂಡಿದ್ದರು. ಆದರೆ ಇದುವರೆಗೂ ಕೆಲಸ ತೆಗೆದುಕೊಂಡಿಲ್ಲ. ಇಷ್ಟೇ ಅಲ್ಲ. ರಸ್ತೆ ಕೆಲಸ ಅಲ್ಲೇ ನಿಂತಿದೆ. ಒಬ್ಬ ಇಂಜನಿಯರು ಇಷ್ಟೆಲ್ಲಾ ಕೆಲಸ ಮಾಡುವುದಕ್ಕೆ ಕಷ್ಟ. ಈ ಕಷ್ಟ ನಿವಾರಣೆಯಾಗಬೇಕಾದರೆ, ತಾತ್ಕಾಲಿಕವಾಗಿಯಾದರೂ ಈ ನಾಲ್ಕು ಸೇತುವೆಗಳು ಆಗುವವರೆಗೆ, ಎರಡು ಡಿವಿಜನ್ ಮಾಡಿ, ಕೆಲಸ ಒಡನೆ ಆಗುವಂತೆ ಸಹಾನುಭೂತಿಯಿಂದ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಗತ್ಯವಾದ ಕೆಲವು ಸೂಚನೆಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಅವುಗಳನ್ನು ಗಮನಕ್ಕೆ ತೆಗೆದುಕೊಂಡು ಕೆಲಸ ಮಾಡಿಕೊಡುತ್ತೀರೆಂಬ ಭರವಸೆ ನನಗಿದೆ. ಇಷ್ಟು ಮಾತುಗಳನ್ನು ಹೇಳಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತೇನೆ.

*ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ, ನನಗೆ ಕುಳಿತುಕೊಂಡು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ವಂದನೆಗಳು.

ಸ್ವಾಮಿ, ಈ P.W.D. ಇಲಾಖೆಯಲ್ಲಿ ಏನಾಗಿದೆಯೆಂದರೆ, ಒಂದು ಸಣ್ಣ ಗಾದೆ ಹೇಳುತ್ತಾರೆ, ಅದರ ಹಾಗೆ ಆಗಿದೆ. ಹೊಸ ಆಡಳಿತದಲ್ಲಿ ನಮ್ಮ ತೋಳಗಳು ಕುರಿಗಳನ್ನು ಕಾಯುತ್ತಾ ಇವೆ. ತೋಳ ಕುರಿ ಕಾಯುವಾಗ ದಿನಾ ಒಂದೊಂದು ಕುರಿ ತಿಂದು ಹಾಕುತ್ತಿತ್ತಂತೆ; ತೋಳವನ್ನು ತಪ್ಪಿಸಿ ಜನರು ಕುರಿಯನ್ನು ಕಾಯುತ್ತಿದ್ದಾರೆ. ಈಗ ನೀವು ಏನು ಮಾಡಿದ್ದೀರೆಂದರೆ ಹಳೇ ತೋಳವನ್ನೇ ಕುರಿ ಕಾಯಲು ಇಟ್ಟುಕೊಂಡಿದ್ದೀರಿ. ಹೀಗಿರುವಾಗ ಆಡಳಿತ ಬದಲಾಗಿದೆ ಎಂದರೆ ಹೇಗೆ? ಈ ಇಲಾಖೆಯಲ್ಲಿ ಹೊಗಳತಕ್ಕಂಥವರು ಮತ್ತು ಪ್ರಭಾವ ಬೀರತಕ್ಕಂಥವರಿಗೆ ಪ್ರಾಶಸ್ತ್ಯವಿದೆಯೆಂದು ಅಂಕಿ

(ಶ್ರೀ ಬಿ. ಎಸ್. ಶಂಕರಪ್ಪ)

ಅಂಶಗಳಿಂದ ತೋರಿಸಿಕೊಡುತ್ತೇನೆ. ಯಾರು ಘಂಟಾಘೋಷವಾಗಿ ಟೀಕೆ ಮಾಡುತ್ತಾರೋ, ಅಂಥವರಿಗೆ ಸ್ಥಾನವಿಲ್ಲ. ಇಲಾಖೆಯ ಹೆಸರು ಬದಲಾಯಿಸಿ ಆಡಳಿತ ಕ್ರಮ ಹಿಂದೆ ಹೇಗಿತ್ತೋ ಹಾಗೆಯೇ ಉಳಿದರೆ, ಏನು ಉಪಯೋಗವಾಗುತ್ತದೆ? ಬಹಳ ಹಣ ಖರ್ಚಾಗುವ ಈ ಇಲಾಖೆಯಲ್ಲಿ ಹಣ ಪೋಲಾಗುವ ಅವಕಾಶವಿದೆ ; ಲಂಚಖುಶುವತ್ತಿಗೆ ಅವಕಾಶವಿದೆ ಎಂದು ನಾನು ಖಚಿತವಾಗಿ ಹೇಳುತ್ತೇನೆ. ಹಾಗಿದ್ದರೆ ಏನು ಮಾಡಬೇಕು ? ಶ್ರೀ ಚನ್ನಬಸಪ್ಪನವರು ಅಕಸ್ಮಾತ್ ನಿರ್ದಾಕ್ಷಿಣ್ಯದಿಂದ ಆಡಳಿತ ನಡೆಸಿದರೂ, ಅವರೇ ಏನೂ ಮಾಡುವುದಕ್ಕಾಗುವುದಿಲ್ಲ. ಕಾರಣ, ಈ ಇಲಾಖೆಯ ಕ್ರಮ ಹಾಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಈಗ ಒಂದು ಎಸ್ಟಿಮೇಟು ಮಾಡುವುದನ್ನು ತೆಗೆದುಕೊಳ್ಳೋಣ. ಎಲ್ಲಿ ಯಾರಿಗೆ ಕೆಲಸವಾಗಬೇಕೋ, ಅಲ್ಲಿ ಒಂದು ಎಸ್ಟಿಮೇಟ್ ಮಾಡಿ ಕೆಲಸದ ಏರ್ಪಾಡು ಮಾಡುತ್ತೀರಿ. ಎಲ್ಲಿ ಬೇಡವಾಗಿದೆಯೋ, ಅಲ್ಲಿ ತಪ್ಪು ಹುಡುಕಿಕೊಂಡು ಎಸ್ಟಿಮೇಟು ಸ್ಕ್ರೂಟಿನಿಯಲ್ಲಿ ವರ್ಷಾನುಗಟ್ಲೆ ಕಾಲಹರಣ ಮಾಡುತ್ತೀರಿ. ಎಸ್ಟಿಮೇಟಿನ ವಿಚಾರದಲ್ಲಿ ಉದಾಸೀನತೆ ತೋರಿಸಲು ಯಾವಾಗ ಪ್ರಯತ್ನಪಡುತ್ತೀರೋ, ಆಗ ಆ ಪಕ್ಷದ ಜನರುಸಂಬಂಧಪಟ್ಟವರಿಗೆ ಏನಾದರೂಕೊಟ್ಟರೆ ನಮ್ಮ ಕೆಲಸವಾಗುತ್ತದೋ ಏನೋ ಎಂಬ ಮನೋಭಾವನೆ ಬಂದು, ಏನಾದರೂ ಕೊಟ್ಟು ಕೆಲಸ ಮಾಡಿಕೊಳ್ಳಬೇಕು. ಲಂಚ ಕೊಡಬೇಕು ಎಂಬ ಪ್ರೇರೇಪಣೆ ಕೆಲವರಲ್ಲಿ ಆಗುತ್ತದೆ. ಈ ಸಂದರ್ಭದಲ್ಲಿ ಒಂದು ಸಲಹೆ ಕೊಡುತ್ತೇನೆ. ಒಂದು ಎಸ್ಟಿಮೇಟ್ ಮಾಡುವ ಕಾಲದಲ್ಲಿ ಯಾವ ನಿಯಮಗಳನ್ನು ಅನುಸರಿಸಬೇಕು, ಸ್ಕ್ರೂಟಿನಿ ಮಾಡಲು ಎಷ್ಟು ಕಾಲವನ್ನು ತೆಗೆದುಕೊಳ್ಳಬೇಕು, ಎಷ್ಟು ಟೈಮಿನಲ್ಲಿ ಕೆಲಸ ಕಾರ್ಯಗತವಾಗಬೇಕು ಮುಂತಾದ ನಿಯಮಗಳನ್ನು ಹಾಕಿಕೊಂಡು, ಒಂದು ಯೋಜನೆಯ ಪ್ರಕಾರ ಅವುಗಳನ್ನು ಕಟ್ಟುನಿಟ್ಟಾಗಿ ನೆರವೇರಿಸುವ ಹಾಗೆ ಮಾಡಬೇಕು. ಹಿಂದೆ ಎಸ್ಟಿಮೇಟ್ ಮಾಡಿ ಕಂಟ್ರಾಕ್ಟರಿಗೆ ಕೆಲಸ ಕೊಡುವ ಕಾಲದಲ್ಲಿ ವರ್ಕ್ ಆರ್ಡರ್ ಕೊಟ್ಟು, ಮುಚ್ಚಳಿಕೆ ಬರೆಸಿಕೊಂಡು, ಕಂಟ್ರಾಕ್ಟರ್ ಕೆಲಸ ಮಾಡುವ ಪರಿಸ್ಥಿತಿ ಇತ್ತು ; ಒಂದು ಹಕ್ಕು ಇತ್ತು. ಈಗ ಏನಾಗಿದೆಯೆಂದರೆ, ಕಂಟ್ರಾಕ್ಟರಿಗೆ ಕೊಡುವ ಕೆಲಸಕ್ಕೆ ಷೆಡ್ಯೂಲ್ ಆಫ್ ರೇಟ್ಸ್, ವರ್ಕ್ ಆರ್ಡರ್, ಕಂಟ್ರಾಕ್ಟರಿಗೆ ಕೊಡುತ್ತಿಲ್ಲ. ಆದ್ದರಿಂದ ಕಂಟ್ರಾಕ್ಟರಿಗೆ ಮಾಡಿದ ಕೆಲಸಕ್ಕೆ ಬಿಲ್ ಮಾಡುವ ಅವಕಾಶವಿಲ್ಲ. ಇಲಾಖೆಯವರು ಬೇಕಾದರೆ ಬಿಲ್ ಮಾಡುತ್ತಾರೆ; ಸಾಕಾದರೆ ಮೂರು ವರ್ಷ ಕಂಟ್ರಾಕ್ಟರನ್ನು ಹಣ ಗಾಡಿಸುತ್ತಾರೆ. ಕಂಟ್ರಾಕ್ಟರು ಏನು ಮಾಡುತ್ತಾರೆಂದರೆ, ಬಿಲ್ ಮಾಡತಕ್ಕಂಥ, ಚೆಕ್ ಮಾಡತಕ್ಕಂಥ ಅಧಿಕಾರಿಗಳನ್ನು ವಶೀಕರಣ ಮಾಡಿಕೊಳ್ಳಲು ಹಣ ಕೊಡಲಿಕ್ಕೆ ಪ್ರಯತ್ನಪಡುತ್ತಾರೆ.

5-00 P.M.

ಆದುದರಿಂದ ಏನು ಮಾಡಬೇಕೆಂದರೆ, ಕಂಟ್ರಾಕ್ಟರಿಗೆ ವರ್ಕ್ ಆರ್ಡರ್ ಕೊಡಬೇಕಾದರೆ, ಅವರು ಕೆಲಸ ಪ್ರಾರಂಭ ಮಾಡಿದ ಮೇಲೆ ಆ ಕೆಲಸ ಇಷ್ಟನೇ ತಾರೀಖಿನೊಳಗೆ ಚೆಕ್ ಮೆಷರ್‌ಮೆಂಟ್ ಆಗಬೇಕು, ಇಷ್ಟನೇ ತಾರೀಖಿನೊಳಗೆ ಫೈನಲ್ ಬಿಲ್ ಆಗಿ ಹಣ ಪಾವತಿಯಾಗಬೇಕು ಎಂದು ನಿಗದಿ ಮಾಡಬೇಕು. ಬಿಲ್ ತಯಾರು ಮಾಡತಕ್ಕ ಮತ್ತು ಅದನ್ನು ಪಾಸ್ ಮಾಡತಕ್ಕ ಅಧಿಕಾರಿಗಳ ಮೇಲೆ ಮೇಲ್ಪಟ್ಟವರು ಚೆಕ್ ಇಟ್ಟುಕೊಂಡು ಕೆಲಸ ಮಾಡಬೇಕು. ಕೆಲಸ ಮುಗಿದು ಎಷ್ಟೋ ದಿನವಾದರೂ ಕಂಟ್ರಾಕ್ಟರಿಗೆ ಏಕೆ ಹಣ ಕೊಡಲಿಲ್ಲವೆಂದು ಈಗ ಯಾರೂ ನೋಡುವುದಿಲ್ಲ. ಒಂದು ಕೆಲಸದ ಅಂದಾಜಾಗಿ, ಅದು ಪೂರ್ತಿಯಾಗಿ ಹತ್ತು ವರ್ಷಗಳಾಗಿದ್ದರೂ ಅದರ ಕಂಟ್ರಾಕ್ಟರಿಗೆ ಫೈನಲ್ ಬಿಲ್ ಮಾಡಿ ಹಣ ಕೊಡದೆ, ಅವನು ದಿನವೂ ನನಗೆ ಕಾಗದ ಬರೆಯುತ್ತಿದ್ದಾನೆ. ಹಾಗಾಗಿರುವುದರಿಂದ ಕಂಟ್ರಾಕ್ಟರುಗಳು ಯಾರಲ್ಲಿ ಹೋದರೆ ತಮ್ಮ ಕೆಲಸ ಬೇಗ ಆಗುತ್ತದೆ ಎಂದು ಹುಡುಕಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿದ್ದಾರೆ. ಇದನ್ನು ನಿವಾರಣೆ ಮಾಡಬೇಕಾದರೆ ಒಂದು ಬಿಲ್ ಆದಕೂಡಲೆ ತಕ್ಷಣ ಹಣ ಪಾವತಿಯಾಗಬೇಕೆಂದು ಕಡ್ಡಾಯ ಹಾಕಬೇಕು. ಇನ್ನೊಂದು ವಿಷಯವೇನೆಂದರೆ, ಕೆಲಸಗಳನ್ನು ಮಾಡತಕ್ಕ ಕಾಲದಲ್ಲಿ ಅಧಿಕಾರ ಯಾರ ಕೈಯಲ್ಲಿದೆಯೋ ಅವರ ಕಡೆ ಒಲವು. ಯಾರು ಯಾರು ಹಳೆಯ ಮೈಸೂರಿನಲ್ಲಿ ಮಂತ್ರಿಗಳಾಗಿದ್ದರೋ ಆ ಪ್ರದೇಶಗಳಲ್ಲಿ ಎಲ್ಲ ಕಟ್ಟಡಗಳನ್ನೂ ಪೂರ್ತಿ ಮಾಡಿದ್ದಾರೆ. ಅಲ್ಲಿಗೆ ಯಾವ ಯಾವ ಕೆರೆ, ಅಣೆಕಟ್ಟು, ರಸ್ತೆ, ಕೈಗಾರಿಕೆಗಳನ್ನು ಕೊಡಬಹುದೋ ಅವನ್ನೆಲ್ಲಾ ಕೊಟ್ಟು, ಅವುಗಳಿಂದ ಆ ಪ್ರದೇಶಗಳು ತುಂಬಿ ತುಳುಕುತ್ತಿವೆ. ದೇಶದ ಜನತೆಯಿಂದ ತೆರಿಗೆ ಸುಂಕಗಳನ್ನು ವಸೂಲು ಮಾಡಿ ಆ ಹಣವನ್ನು ತಮ್ಮ ಇಚ್ಛಾನುಸಾರವಾಗಿ ತಮ್ಮ ಸ್ವಾರ್ಥಕ್ಕಾಗಿ ಒಂದೇ ಕಡೆ ಅಥವಾ ಕೆಲವೇ ಕಡೆ ಕೆಲಸ ಮಾಡಿಸುವುದು ಎಂದಿನವರೆಗೆ ತಪ್ಪುವುದಿಲ್ಲವೋ ಅದುವರೆಗೆ ಪ್ರಜಾ ಪ್ರಭುತ್ವ ಯಶಸ್ವಿಯಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಜಿಲ್ಲೆಯಲ್ಲೇ ಚೀಫ್ ಮಿನಿಸ್ಟರ್ ಇದ್ದರು.

ಶ್ರೀ ಬಿ. ಎಸ್. ಶಂಕರಪ್ಪ.—ಕೆಲಸದ ಆವಶ್ಯಕತೆಯ ಮೇಲೆ ಕೆಲಸವಾಗಬೇಕೇ ಹೊರತು ಮಂತ್ರಿಗಳಿದ್ದಾರೆಂದು ಕೆಲಸ ಮಾಡಬಾರದು.

ಈ ಇಲಾಖೆಯಲ್ಲಿ ಕೆಲಸಗಳು ವಿಳಂಬವಾಗಲು ಕಾರಣವೇನೆಂದು ಯೋಚಿಸಿ ಅದನ್ನು ನಿವಾರಿಸಬೇಕು. ಒಂದು ಕೆಲಸ ಪ್ರಾರಂಭವಾದಮೇಲೆ, ಅಂದಾಜಾಗಬೇಕಾದುದು ಯಾವ ತಾರೀಖು, ಪ್ರಾರಂಭ ಯಾವತ್ತು ಮಾಡಬೇಕು, ಬಿಲ್ ಯಾವಾಗ ಆಗಬೇಕು ಎಂಬ ಬಗ್ಗೆ ಕಾಲವನ್ನು ಗೊತ್ತುಮಾಡಿ, ಅಷ್ಟರಲ್ಲಿ ಆಗುವಂತೆ ಮಾಡಬೇಕು. ಹಾಗೆ ಮಾಡದಿದ್ದವರಿಗೆ ಶಿಕ್ಷೆ ಮಾಡಬೇಕು. ಇದನ್ನು ಚೆಕ್ ಮಾಡದಿದ್ದರೆ ಕೆಲಸ ಸಕಾಲದಲ್ಲಿ ಆಗುವುದಿಲ್ಲ. ಈ ಇಲಾಖೆಯಲ್ಲಿ ಕಾಲ ಮತ್ತು ಹಣ ಸದ್ವಿನಿಯೋಗವಾಗುತ್ತಿಲ್ಲ. ಕಾಲವೇ ದುಡ್ಡು, ದುಡ್ಡೇ ಕಾಲ. ಕಾಲಹರಣವೆಂದರೆ ದುಡ್ಡಿನ ಹರಣ. ಒಂದು ಅಂದಾಜು ತಯಾರಾಗಿ ಅದು ಸ್ಕ್ರೂಟಿನಿ ಆಗಬೇಕಾದರೆ ಎಷ್ಟೋ ವರ್ಷ. ಒಂದು ಉದಾಹರಣೆ ಹೇಳುತ್ತೇನೆ, ಹೊಸದುರ್ಗ ತಾಲ್ಲೂಕು ಗದಗೂರು ಕೆರೆ ಫೀಡರ್‌ಚಾನಲ್ 1950 ರಲ್ಲಿ ಷುರು ಆಗಿ 1955 ರಲ್ಲಿ ಪೂರ್ತಿಯಾಗಿ ಈಗ ರಿವೈಸ್ ಮಾಡುತ್ತೇವೆಂದು ಹೇಳಿ ಅದು ಮಂಜೂರಾಗಬೇಕೆಂದೂ ಹೇಳುತ್ತಾ ಕಂಟ್ರಾಕ್ಟರಿಗೆ ಇನ್ನೂ ಹಣ ಬಂದಿಲ್ಲ. ಇದಕ್ಕೆ ಕಾರಣವೇನೆಂದು ಸರ್ಕಾರ ನೋಡುವುದಿಲ್ಲ.

ಲಂಚ ಖುಷುವತ್ತು ಪಡೆಯತಕ್ಕ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಅವರ ಮೇಲೆ ಆಪಾದನೆ ಬಂದು ತನಿಖೆ ನಡೆಯುವಾಗ ಅವರನ್ನು ಸಸ್‌ಪೆಷನ್ನಲ್ಲಿರಿಸುತ್ತಾರೆ. ಅಕಸ್ಮಾತ್ ನಿರಪ

ರಾಧಿಯಾಗಿರುವವರೂ ಸಿಕ್ಕಬಹುದು. ಇಂಥವರನ್ನು ಎರಡು ಮೂರು ವರ್ಷ ಸಸ್‌ಪೆನ್ಷನ್‌ನಲ್ಲಿಟ್ಟರೆ ಅವರಿಗೆ ಷ್ಟು ತೊಂದರೆಯಾಗುತ್ತದೆಂಬುದನ್ನು ಯೋಚನೆಮಾಡಬೇಕು. ಲಂಚ ನಿರೋಧ ಇಲಾಖೆ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ತಕ್ಕ ಕ್ರಮ ಕೈಗೊಳ್ಳಲು ಇರುವುದು. ಆದರೆ ಈ ರೀತಿ ಅನಿರ್ದಿಷ್ಟವಾಗಿ ದೀರ್ಘಕಾಲ ಸಸ್‌ಪೆನ್ಷನ್‌ನಲ್ಲಿಡುವುದು ತಪ್ಪು, ಇದನ್ನು ಸರಿಪಡಿಸಬೇಕು. ಒಬ್ಬರು ಅಧಿಕಾರಿ ತಪ್ಪು ಮಾಡಿದರೆಂದು ಅವರನ್ನು ಸಸ್‌ಪೆಂಡ್ ಮಾಡಿ ಮೂರು ವರ್ಷವಾಯಿತು, ಈ ಹೊತ್ತಿನವರೆಗೂ ಅವರ ಕೇಸ್ ತೀರ್ಮಾನವಾಗಿಲ್ಲ. ತಪ್ಪಿತಸ್ಥರನ್ನು ಶಿಕ್ಷೆ ಮಾಡಲು ನಮ್ಮ ಅಭ್ಯಂತರವಿಲ್ಲ. ತಪ್ಪಿತಸ್ಥರಲ್ಲದವರಿಗೂ ಈ ರೀತಿಯಾದರೆ ಅವರ ಮನಸ್ಸು ಇನ್ನೆಷ್ಟು ನೋಯುತ್ತದೆಂಬುದನ್ನು ಊಹಿಸಬಹುದು.

ಈ ಸಾರಿಯ ಬಡ್ಜೆಟ್‌ಅನ್ನು ನೋಡಿದರೆ ಕಟ್ಟಡಗಳಿಗಾಗಿ ಬಹಳ ಹಣವನ್ನೊದಗಿಸಿದ್ದಾರೆಂದು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು. Capital Account of Civil Works outside the Revenue Account ನಲ್ಲಿ providing additional lifts (Heavy duty) to Vidhana Soudha ಎಂಬುದಕ್ಕೆ 1,55,520 ರೂಪಾಯಿ ಅಂದಾಜಾಗಿ 1960–61ಕ್ಕೆ ಒಂದು ಲಕ್ಷ ರೂಪಾಯಿ ಒದಗಿಸಿದ್ದಾರೆ. ದಾವಣಗೆರೆಯಲ್ಲಿ ಒಂದು ಹಾಸ್ಟೆಲ್‌ಗೆ 2,30,000 ರೂಪಾಯಿ ಅಂದಾಜಾಗಿ, ಈ ವರ್ಷ 1,28,000 ರೂಪಾಯಿ ಒದಗಿಸಿದ್ದಾರೆ. ಇವುಗಳಿಂದ ಪ್ರತಿಫಲ ಏನು ಬರುತ್ತದೆ? ಹಳ್ಳಿಗಳಲ್ಲಿ ಮಳೆ ಬೆಳೆ ಕಡಮೆಯಿರುವ ಪ್ರದೇಶದಲ್ಲಿ ಸರ್ಕಾರ ಒಂದು ಖಾಯಂ ಪರಿಹಾರ ಕೊಡಬೇಕಾದರೆ ಏನು ಮಾಡಬೇಕೆಂಬುದನ್ನು ಪರಿಶೀಲನೆ ಮಾಡಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ವಜ್ರ ಯೋಜನೆಯ ವಿಚಾರವನ್ನು ಹೇಳಿದ್ದೇನೆ. ಅಲ್ಲಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಕೆರೆಯನ್ನು ಕಟ್ಟಿದರೆ ನೂರು ಎಕರೆ ಅಚ್ಚುಕಟ್ಟಾಗುತ್ತದೆ. ಅಲ್ಲದೆ ಬೇರೆ ಕೆರೆಗಳಿಗೆ ಫೀಡರ್ ಕೂಡ ಆಗುತ್ತದೆ. ಒಂದು ವೇಳೆ ಸಾಕಷ್ಟು ನೀರು ನಿಲ್ಲದಿದ್ದರೂ ಸುತ್ತಮುತ್ತಿನ ಬಾವಿಗಳಿಗೆ ನೀರು ಬರುತ್ತದೆ. ಇಂಥ ಕೆಲಸ ಮಾಡಿ ಎಂದು ಹೇಳಿದರೆ ಸಾಕಷ್ಟು ಪ್ರತಿಫಲ ಬರುವುದಿಲ್ಲವೆನ್ನುತ್ತಾರೆ. ಎಲ್ಲಿಯ ವರೆಗೆ ಈ ಮನೋಭಾವ ಸರ್ಕಾರದಲ್ಲಿರುತ್ತದೆಯೋ ಅಲ್ಲಿಯ ವರೆಗೆ ದೇಶದಲ್ಲಿ ಅನ್ನ ಕ್ಷಾಮ ತಪ್ಪುವುದಿಲ್ಲ....

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದಾದರೂ ಒಂದು ಪ್ರಮಾಣದ ಪ್ರತಿಫಲವನ್ನು ಗೊತ್ತುಮಾಡಬೇಕು. ನೀವೇ ಹೇಳಿ, ಶೇಕಡ ಎಷ್ಟು ಕಾಲ ನಿರೀಕ್ಷೆ ಮಾಡಬಹುದೆಂದು ?

I would like to know from the Hon'ble Member one thing. We must fix some kind of percentage. You please tell us the minimum that could be expected. Government will look into these things very generously because these areas will have no rainfall and so they suffer. But, please tell us the lowest percentage of income that we could expect in these areas.

ಶ್ರೀ ಬಿ. ಎಸ್. ಶಂಕರಪ್ಪ.—ಸ್ವಾಮಿ, ವಿಧಾನ ಸೌಧದ heavy duty lift ಗಳಿಗೆ ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡಿದರೆ ಏನು ಪ್ರಯೋಜನವಾಗುತ್ತದೆ? ನನ್ನಂಥ ಕಾಯಿಲೆಯವನೇನೋ ಮೇಲೆ ಹೋಗಬಹುದು, ವಯಸ್ಸಾದವರು ಹೋಗಬಹುದು. ನಾಲ್ಕು ದಿಕ್ಕುಗಳಿಗೂ ಲಿಫ್ಟ್ ಹಾಕಿದರೆ, ವಿಧಾನಸೌಧದಲ್ಲಿ ಕೆಲಸ ಮಾಡುವ ಕೆಲವು ಜನರಿಗೆ ಅನುಕೂಲವಾಗಬಹುದು. ಇದಕ್ಕಾಗಿ ಲಕ್ಷ ರೂಪಾಯಿ ಖರ್ಚು ಮಾಡಿದರೆ ಬರುವ ಪ್ರತಿಫಲವೇನು ? ಸರ್ಕಾರಕ್ಕೆ ಒಂದು ಕೆಲಸ ಮಾಡಬೇಕೆಂದು ಮನಸ್ಸು ಬಂದರೆ ಅದಕ್ಕೆ ಪ್ರತಿಫಲವನ್ನು ಯೋಚಿಸುವುದಿಲ್ಲ, ಮಾಡಬಾರದೆಂದು ಮನಸ್ಸು ಬಂದರೆ ಆಗ ಶೇಕಡಾವಾರು ಪ್ರತಿಫಲದ ಪ್ರಶ್ನೆ ಬರುತ್ತದೆ.

Sri H. M. CHANNABASAPPA.—That is not the correct statement. Government do not like to give up projects mainly on account of want of return. But, we should set our limit at some point. Let it be five or no return. You please let us know the lowest return that could be expected. Government will have no objection and we will examine it.

ಶ್ರೀ ಬಿ. ಎಸ್. ಶಂಕರಪ್ಪ.—ಆಹಾರ ಕೊರತೆಯಿರುವ ಪ್ರದೇಶದಲ್ಲಿ ಪ್ರತಿಫಲ ನಿರೀಕ್ಷಿಸುವುದು ಬೇಡ. ಒಂದು ಲಕ್ಷ ರೂಪಾಯಿ ಖರ್ಚು ಮಾಡಿದರೆ ನೂರು ಎಕರೆ ನೀರಾವರಿಯಾಗುತ್ತದೆ. ನೂರೇ ರೂಪಾಯಿ ಕಂದಾಯ ಬರಬಹುದು. ಆದರೆ ಆ ಪ್ರದೇಶದಲ್ಲಿ ಕ್ಷಾಮ ನಿವಾರಣೆಯಾಗುತ್ತದೆ. ಕ್ಷಾಮ ಬಂದರೆ ಆಗ ಎಷ್ಟು ಕೋಟಿ ರೂಪಾಯಿ ಖರ್ಚು ಮಾಡಿದರೆತಾನೆ ಆಹಾರ ಎಲ್ಲಿ ಬರುತ್ತದೆ ? ಆದುದರಿಂದ ಬೆಳೆಯನ್ನು ಬೆಳೆಯತಕ್ಕ ವಿಷಯಕ್ಕೆ, ಹಳ್ಳಿಯ ರೈತರ ಅನುಕೂಲದ ವಿಷಯಕ್ಕೆ ಪ್ರತಿಫಲವನ್ನು ನಿರೀಕ್ಷಿಸಬಾರದು. ನಮ್ಮ ಬಡ್ಜೆಟ್ ನೋಡಿದರೆ ಇದರಲ್ಲಿ ಹದಿನೆಂಟು ಇಪ್ಪತ್ತು ಕೋಟಿ ರೂಪಾಯಿಗಳ ಖರ್ಚು ಪ್ರತಿಫಲ ಬಾರದೇಯಿರುವುದಿದೆ. ಇದಕ್ಕೆ ಕಾರಣವೇನಿರಬಹುದು? ಹೆಸರಘಟ್ಟ ಕೆರೆಯ ನೀರನ್ನು ಬೆಂಗಳೂರಿಗೆ ತರಬೇಕೆಂದು ಪ್ರಯತ್ನ ಮಾಡಿ, ಹತ್ತು ಮೈಲಿ ದೂರದಲ್ಲಿ Silt dam ಮಾಡಿ ಹೂಳು ತುಂಬದಂತೆ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟೋ ಕೆರೆಗಳು ಹೂಳು ತುಂಬುತ್ತಿವೆ. ಅವಕ್ಕೆ ಅಲ್ಲಲ್ಲಿ ಪಿಕಪ್‌ಗಳನ್ನು ಕಟ್ಟಿದರೆ ನೀರಾವರಿಗೂ ಅನುಕೂಲ, ಹೂಳೂ ತುಂಬುವುದಿಲ್ಲ. ಅಲ್ಲದೆ ನಿಲ್ಲತಕ್ಕ ಸಿಲ್ಟನ್ನು ರೈತರು ತೆಗೆದುಕೊಂಡು ಭೂಮಿಗೆ ಹಾಕಿದರೆ ಒಳ್ಳೆಯ ಬೆಳೆಯಾಗುತ್ತದೆ. ಅಲ್ಲದೆ ಪಿಕಪ್ ಕಟ್ಟುವುದರಿಂದ ಲಿಫ್ಟ್ ಇರಿಗೇಷನ್ನಿಗೂ ಅನುಕೂಲವಾಗುತ್ತದೆ. ವಿದ್ಯುಚ್ಛಕ್ತಿಯನ್ನುಪಯೋಗಿಸಿ ನೀರನ್ನೆತ್ತುವುದಕ್ಕೆ 1200 ರೂಪಾಯಿ ಖರ್ಚು ಮಾಡುವುದಕ್ಕೆ ಒಂದು ಎಚ್. ಪಿ. ಕೊಡಬಹುದೆಂದು ಮಾಡಿದ್ದಾರೆ. ಹೀಗೆ ಪಕ್ಷಪಾತ ಮಾಡುವ ಸರ್ಕಾರಕ್ಕೆ ಅಧಿಕಾರ ಸಿಕ್ಕಿರುವುದರಿಂದ ಹೀಗಾಗಿದೆ. ನಮ್ಮ ಹಳ್ಳಿಯಲ್ಲಿ ಮೂರು ನಾಲ್ಕು ಸಾವಿರ ಪ್ರಜಾಸಂಖ್ಯೆಯಿದೆ. ಬಾವಿ ತೆಗೆದರೆ ಮೂವತ್ತು ಅಡಿಗೆಮೇಲೆ ತೆಗೆಯಬೇಕು. ಇಂಥಾ ಪ್ರದೇಶದಲ್ಲಿ ಆಹಾರ ಬೆಳೆಯಲು ಅನುಕೂಲ ಮಾಡಬೇಡವೆ? ಬಾವಿಗೆ ದುಡ್ಡು ಎಷ್ಟು ಖರ್ಚು ಮಾಡಬೇಕು, ಎಷ್ಟು ಶೇಕಡ ಬರಬೇಕು ಎಂಬುದನ್ನೆಲ್ಲಾ ಲೆಕ್ಕ ಹಾಕಿದರೆ ಹೇಗೆ ? ಕ್ಷಾಮಪೀಡಿತ ಪ್ರದೇಶಗಳಲ್ಲಿ ಆಹಾರ ಬೆಳೆಯುವುದಕ್ಕೆ 1250 ರೂಪಾಯಿಗಿಂತಲೂ ಹೆಚ್ಚಿಗೆಯಾದರೂ ಕೊಡಬೇಕೆಂದು ನಾನು ಸೂಚಿಸಬಯಸುತ್ತೇನೆ.

(ಶ್ರೀ ಬಿ. ಎಸ್. ಶಂಕರಪ್ಪ)

ಆಮೇಲೆ ಕೆಲವು ಕಡೆ ಗಣಿಗಳಿವೆ. ಗಣಿಗಳಿಂದ ಸರ್ಕಾರಕ್ಕೆ ಲಕ್ಷಾಂತರ ವರಮಾನ ಬರುತ್ತಿದೆ. ಅಲ್ಲಿಗೆ ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಿರುತ್ತವೆ. ದಿನ ಪತಿ 100-200 ಬಸ್ಸುಗಳು ಅಲ್ಲಿ ತಿರುಗುತ್ತಿರುತ್ತವೆ. ಅಲ್ಲಿನ ಕೂಲಿಗಾರರು ಹಗಲೆಲ್ಲಾ ಧೂಳು ಕುಡಿದು ಕುಡಿದು ಕ್ಷಯರೋಗಕ್ಕೆ ತುತ್ತಾಗುತ್ತಿದ್ದಾರೆ. ಇದನ್ನು ಕೇಳುವವರಿಲ್ಲ. ಆದ್ದರಿಂದ ತಾವು ಈ ಮೈನಿಂಗ್ ಏರಿಯಾಗಳಲ್ಲಿ ಆ ಜನರು ಕೇಳದೆ ಇದ್ದರೂ ಅಲ್ಲಿನ ರಸ್ತೆಗಳನ್ನು ಅಸ್ಫಾಲ್ಟ್ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ರಸ್ತೆ ರಿಪೇರಿಯ ವಿಷಯ. ರಸ್ತೆ ರಿಪೇರಿಯನ್ನು ಚೆಕ್‌ಮಾಡುವುದರಲ್ಲಿ ತಮ್ಮದೊಂದು ವಿಧಾನವಿದೆ. ಏನಿದ್ದರೂ ರಿಪೇರಿ ಎಸ್ಟಿಮೇಟು ಬಂದಿತೇ, ಬಿಲ್ಲು ಪೇಮೆಂಟಾಯಿತೇ, ಎಂಬುದನ್ನು ತಾವು ಚೆಕ್ ಮಾಡುತ್ತೀರೇ ಹೊರತು ಏನು ರಿಪೇರಿ ಮಾಡಿದ್ದರೆ ಎಂಬುದನ್ನು ನೋಡುವವರೇ ಇಲ್ಲ. ಹಿಂದೆ ಇಲಾಖೆಯಿಂದ ಒಂದು ಕಾರನ್ನು ಕೊಡುತ್ತಿದ್ದರು. ಅಸಿಸ್ಟೆಂಟ್ ಇಂಜಿನಿಯರು ಒಂದುದಿನ ಕ್ಯಾಂಪು ಮಾಡಿದ್ದು ಎಲ್ಲವನ್ನೂ ಚೆಕ್ ಮಾಡುತ್ತಿದ್ದರು. ಚೆಕ್ ಮೆಷರ್‌ಮೆಂಟ್ ಕೂಡ ನಡಸುತ್ತಿದ್ದರು. ಈಗ ಕಾರೂ ಇಲ್ಲ. ಈಗ ಸಬ್ ಡಿವಿಜನ್ ಆಫೀಸರು ಸ್ವಂತ ಕಾರಿನಲ್ಲಿ 5 ಗಂಟೆಗೆ ಅತ್ತ ಕಡೆ ಹೋಗಿ ಚೆಕ್‌ಮಾಡಿಕೊಂಡು ಹೋಗುತ್ತಾರೆ. ಆದ್ದರಿಂದ ರಿಪೇರಿ ಮಾಡುವವರಿಗೆ ಒಂದು ಷರತ್ತು ಹಾಕಬೇಕು; ಇಷ್ಟುಕಾಲದವರೆಗೆ ಜೆಲ್ಲಿ ಮೇಲಕ್ಕೆ ಏಳ ಕೂಡದು. ಎದ್ದರೆ ಅವರೇ ಮತ್ತೆ ಮಾಡಿಸಿಕೊಡಬೇಕು ಎಂದು ಒಂದು ನಿಯಮ ಹಾಕಬೇಕು. ಹೀಗೆ ಮಾಡಿದರೆ ಅವರ ಮೇಲೆ ಒಂದು ಜವಾಬ್ದಾರಿ ಇರುತ್ತದೆ. ಇದನ್ನೀಗ ಮಾಡದಿರುವುದರಿಂದಲೇ ಈ ಇಲಾಖೆಯಲ್ಲಿ 50 ಭಾಗ ಹಣ ಪೋಲಾಗುತ್ತಿದೆ. ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟ್ ಎಂದು ಇದಕ್ಕೆ ಹೆಸರು ಬಂದಿರುವುದು ಈ ಕಾರಣದಿಂದಲೇ. ಹಿಂದೆ ರಿಪೇರಿ ಮಾಡು ಎಂದರೆ ಫರ್ಲಾಂಗ್ ಕಲ್ಲಿಗೆ ಬಣ್ಣ ಹಾಕುವುದು, ಕೈಮರಕ್ಕೆ ಬಣ್ಣ ಹಾಕುವುದು, ಇಷ್ಟು ಮಾಡಿದರೆ ರಿಪೇರಿ ಆಯಿತು ಎಂದಿತ್ತು. ಅದರ ಮೇಲೆ ಬಿಲ್ಲು ಪೇಮೆಂಟಾಗುತ್ತಿತ್ತು. ಮಾರನೆಯ ದಿನ ಹೋಗಿ ನೋಡಿದೆಂದರೆ ಮೊಳದುದ್ದ ಗುಂಡಿ ಉದ್ದಕ್ಕೂ ಇರುತ್ತದೆ. ಹಿಂದಿನ ಕಾಲದ ಫಾರಮ್ಮುಗಳಲ್ಲಿ ಜೆಲ್ಲಿ ಕಲ್ಲನ್ನು ಪಿಕ್ ಮಾಡಿದ್ದಾರೆಯೇ, ಕಲ್ಲುಗಳಿಗೆ ಬಣ್ಣ ಹಾಕಿದ್ದಾರೆಯೇ? ಎಂದಿತ್ತು. ಆದ್ದರಿಂದ ತಾವುಗಳು ಮುಖ್ಯವಾಗಿ ಕೆಲಸ ಮಜಬೂತಾಗಿ ನಡೆದಿದೆಯೋ ಇಲ್ಲವೇ ಎಂಬುದನ್ನು ನೋಡಿ ನಂತರ ಹಣ ಪಾವತಿ ಮಾಡಬೇಕೆಂದು ಹೇಳುತ್ತೇನೆ.

*ಶ್ರೀ ಎಸ್. ಆರ್. ಪಾಟೀಲ್ (ಕಾಲ್ಗಿ).—ಮಾನ್ಯ ಅಧ್ಯಕ್ಷರೇ, ಈ ಲೋಕೋಪಯೋಗಿ ಖಾತೆಯ ಡಿಮಾಂಡನ್ನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಹೈದರಾಬಾದಿನ ನಮ್ಮ ಗುಲ್ಬರ್ಗ ಜಿಲ್ಲೆಯು ಬಹಳ ಹಿಂದುಳಿದ ಪ್ರದೇಶವಾಗಿದೆ. ಪಿ. ಡಬ್ಲ್ಯು.ಡಿ. ಮಂತ್ರಿಗಳಾಗಿ ತಾವೂ ಅಲ್ಲಿಗೆ ಬಂದು ನೋಡಿಕೊಂಡು ಬಂದಿದ್ದೀರಿ. ಅಲ್ಲಿ ಎಷ್ಟೋ ಕೆಲಸಗಳು ಇದುವರೆಗೆ ಎಷ್ಟೋ ಪತ್ರವ್ಯವಹಾರ ನಡೆಸಿದರೂ ಮುಂದುವರಿಯದೆ ಹಾಗೇನಿಂತಿವೆ. ಇನ್ನೂ ಯಾವಸ್ವರೂಪಕ್ಕೂ ಬಂದಿಲ್ಲ. ನಮ್ಮ ಕ್ಷೇತ್ರದಲ್ಲಿ ಹೆಮ್ಮೆಯಿಂದ ಇಂಥ ಕೆಲಸವನ್ನು ಮಾಡಿ ಮುಗಿಸಿದ್ದೇನೆ ಎಂದು ಹೇಳಿಕೊಳ್ಳುವ ಒಂದು ಕೆಲಸವೂ ನಡೆದಿಲ್ಲ. ನನ್ನ ಸ್ವಂತ ಕಾನ್ಸಿಟ್ಯುಯನ್ಸಿಯಲ್ಲೇ ಫ್ಯಾಮಿನ್ ವರ್ಕ್ಸ್ ಎಂದು ಕೈಕೊಂಡ 12 ಮೈಲಿ ರಸ್ತೆಯ ಕೆಲಸ ಮೂರು ವರ್ಷವಾದರೂ ಇನ್ನೂ ಮುಗಿಯಲಿಕ್ಕಿಲ್ಲ. ಮಂತ್ರಿಗಳಿಗೂ ಎಷ್ಟೋ ಕಾಗದ ಬರೆದುದಾಯಿತು. ಮೊನ್ನೆ ಭೇಟಿ ಮಾಡಿದಾಗ ಇದನ್ನು ರೂರಲ್ ಕಮ್ಯುನಿಕೇಷನ್ನಿನಿಂದ ತೆಗೆದುಕೊಳ್ಳಬೇಕೆಂದು ಈಗ ಅರ್ಡರ್ ಮಾಡಿದ್ದಾರೆ. ಆದರೂ ಎಂದು ಮಾಡುತ್ತಾರೆಂಬ ಭರವಸೆ ನನಗಿಲ್ಲ. ದಯವಿಟ್ಟು ಅದಷ್ಟು ಬೇಗನೆ ಈ ಕಾರ್ಯವನ್ನು ನೆರವೇರಿಸಿಕೊಡಬೇಕಾಗಿ ನಾನು ಕೇಳಿಕೊಳ್ಳುತ್ತೇನೆ. ನಾವೇನೂ ಇತರ ಕಡೆಯವರ ಹಾಗೆ ಟಾರ್‌ರೋಡ್ ಕೇಳುವುದಿಲ್ಲ. ಇದ್ದಂಥ ರೋಡುಗಳನ್ನು ದುರಸ್ತು ಮಾಡಿಸಿ ಸಣ್ಣಪುಟ್ಟ ಸೇತುವೆಗಳನ್ನು ಕಟ್ಟಿಸಿ ಜನರಿಗೆ ತಿರುಗಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಒಂದೆರಡು ರಸ್ತೆಗಳನ್ನು ಸೂಚಿಸುವುದಾದರೆ ಹರನೂರು ಅಪ್ರೋಚ್ ರಸ್ತೆ. ಅದನ್ನು ಸರಿಮಾಡಬೇಕೆಂದು ಹೇಳಿ ಮಣ್ಣು ಕಲ್ಲು ಎಲ್ಲಾ ಅಲ್ಲಿ ತಂದುಹಾಕಿದ್ದಾರೆ. ಟೆಕ್ನಿಕಲ್ ಸ್ಯಾಂಕ್ಷನ್ ಇಲ್ಲವೆಂದು ಹೇಳಿ ಇದುವರೆಗೂ ಅದನ್ನು ಷುರುಮಾಡಲಿಲ್ಲ. ಈಗ ಟೆಕ್ನಿಕಲ್ ಸ್ಯಾಂಕ್ಷನ್ ಬಂದಿದೆಯೆಂದು ಹೇಳಿದರು. ಆದರೆ ಸದ್ಯಕ್ಕೆ ದುಡ್ಡಿಲ್ಲವೆಂದು ಅದನ್ನು ನಿಲ್ಲಿಸಿದ್ದಾರೆಂದು ತಿಳಿದುಬಂದಿದೆ. ಇದೇರೀತಿ ಓಕಳಿ ಅಪ್ರೋಚ್ ರಸ್ತೆ ಕೆಲಸಷುರುವಾಗದೆ ನಿಂತಿದೆ. ಸಾಂತ್ ಅಪ್ರೋಚ್ ರಸ್ತೆ ಇನ್ನೊಂದು. ಇದನ್ನು ಸ್ಟೇಟ್ ಫಂಡಿನಿಂದ ತೆಗೆದುಕೊಂಡಿದ್ದಾರೆ. ಬೇಕಾದ ಸಾಮಗ್ರಿಗಳನ್ನೆಲ್ಲಾ ತಂದುಕೊಂಡು ಸಿದ್ಧವಾಗಿದ್ದರೂ ಜಮೀನು ಅಕ್ವೈರ್ ಮಾಡುವುದೇ ಇನ್ನೂ ಆಗದೆ ನಿಂತಿವೆ. ಇದರ ಅವಶ್ಯಕತೆಯನ್ನು ನಾನು ಒತ್ತಿ ಹೇಳಲಾರೆ. ಕೀರ್ಣಗಿ, ಫರ್ಕಾಬಾದ್ ರಸ್ತೆಯಲ್ಲಿ ಒಂದು ಸೇತುವೆ ಈಗ ಮಾಡುವುದಿದೆ. ಇದು ಹೊಸ ರಸ್ತೆ ಅಲ್ಲ. ಅದನ್ನು ಮೇಂಟೆನೆನ್ಸ್ ಮಾಡಬೇಕಾಗಿದೆ. ಕೀರ್ಣಗಿ ಒಂದು ದೊಡ್ಡ ಗ್ರಾಮ. 5 ಸಾವಿರ ಜನಸಂಖ್ಯೆಯಿದೆ. ಇದನ್ನು ಮಾಡಿಕೊಟ್ಟರೆ ಬಸ್ಸುಗಳ ಓಡಾಟಕ್ಕೆ ಅನುಕೂಲವಾಗುತ್ತದೆ. ಈಗ ಒಂದು ಬಸ್ಸನ್ನು ಸ್ಯಾಂಕ್ಷನ್ ಮಾಡಿ ಎಂದು ಬರೆದರೆ, ಇಲಾಖೆಯವರು ರಸ್ತೆ ಸರಿಯಾಗಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ತಾವು ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟಿನವರಿಗೆ ಹೇಳಿ ಈ ರಸ್ತೆಯನ್ನು ದುರಸ್ತು ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ಗುಲ್ಬರ್ಗ ಜಿಲ್ಲೆಯಲ್ಲೂ ಹೀಗೆಯೇ ಒಂದು ರಸ್ತೆಯಿದೆ. ಇದನ್ನು ರಿಪೇರಿ ಮಾಡಿಕೊಟ್ಟರೆ ಜನರಿಗೆ ಬಹಳ ಅನುಕೂಲಮಾಡಿಕೊಟ್ಟಂತಾಗುತ್ತದೆ. ಆದರೆ ಇದು ಲೋಕಲ್ ಬೋರ್ಡ್ ರಸ್ತೆಯಾಗಿದ್ದು ಪಿ. ಡಬ್ಲ್ಯು. ಡಿ. ಯವರು ಅದು ತಮ್ಮ ಅಧೀನಕ್ಕೆ ಬಂದಿಲ್ಲ ಎಂದು ಹೇಳಿತ್ತಿದ್ದಾರೆ. ಲೋಕಲ್ ಬೋರ್ಡಿನವರನ್ನು ಕೇಳಿದರೆ ಅವರು ಎಲ್ಲಾ ರಸ್ತೆಗಳನ್ನೂ ತಾವು ಪಿ. ಡಬ್ಲ್ಯು. ಡಿ. ಗೆ ಕೊಟ್ಟಿರುವುದಾಗಿ ಹೇಳುತ್ತಾರೆ. ಹೀಗಾಗಿ ಈಗ ಯಾರು ಮಾಡಬೇಕಾಗಿದೆಯೋ ಗೊತ್ತಿಲ್ಲವಾಗಿದೆ. ಹೊಸದಾಗಿ ರಸ್ತೆಗಳನ್ನು ಮಾಡುವುದಿರಲಿ, ಇರುವ ರಸ್ತೆಗಳನ್ನು ದುರಸ್ತುಮಾಡಿಕೊಟ್ಟರಾದರೂ ಜನರಿಗೆ ಅನುಕೂಲ ಮಾಡಿಕೊಟ್ಟಂತಾಗುವುದೆಂದು ನಾನು ಸರ್ಕಾರದವರಿಗೆ ತಿಳಿಸಬಯಸುತ್ತೇನೆ. ಚುಂಚಳ್ಳಿ ಕುಡಿಕೊಟ್ಟರೋಡ್ ಎಂಬುದು ಪ್ರಾರಂಭವಾದುದು ಮೊದಲನೆಯ ಯೋಜನೆಯಲ್ಲಿ. ಅರ್ಧ ಆಗಿ ಅಲ್ಲಿಗೇ ಅದು ನಿಂತಿದೆ. ಮಂತ್ರಿಗಳಿಗೆ ಕಾಗದ ಬರೆದಿದ್ದಕ್ಕೆ ಮಾಡುತ್ತೇವೆಂದು ಹೇಳಿದರು. ಆಗಲೇ ಒಂದು ವರ್ಷವಾಯಿತು. ಇಲ್ಲಿ ಬಜೆಟ್ಟಿನಲ್ಲಿ ಸೇರಿಸಿದ್ದರೂ ಕೊನೆಗೆ ಕಾರ್ಯರೂಪಕ್ಕೆ ಕೊಡುವವೇಳೆಗೆ ಅದನ್ನು ತೆಗೆದುಹಾಕುತ್ತಾರೆ.

ಈ ರಸ್ತೆ ಬಹಳ ಮಹತ್ವದ್ದು ಇದೆ. ತಮಗೆ ಗೊತ್ತಿದೆ. ಚಿಂಚೋಳಿ, ಗುಲ್ಬರ್ಗಾಕ್ಕೆ ಹೋಗಬೇಕಾ

ದರೆ ಆಂಧ್ರಪ್ರದೇಶದಲ್ಲಿ ಹಾಯ್ದು ಹೋಗಬೇಕಾಗುತ್ತದೆ. ಚಿಂಚೋಳಿಯಿಂದ ಧಾನ್ಯ ಮಾರಾಟಕ್ಕಾಗಿ ಗುಲ್ಬರ್ಗಾಕ್ಕೆ ಬರಬೇಕಾದರೆ ಆಂಧ್ರ ಪ್ರದೇಶದ ಮೂಲಕ ಬರಬೇಕಾಗಿರುವುದರಿಂದ ಎಷ್ಟೋ ಹಣ ಆಂಧ್ರಪ್ರದೇಶಕ್ಕೆ ಹೋಗಲು ಹತ್ತಿದೆ. ಇದಕ್ಕೆ ಫಸ್ಟ್ ಪ್ರಯಾರಿಟಿ ಕೊಡಿರಿ ಎಂದು ಎಷ್ಟೋ ಹೇಳಿದರೂ ಫಸ್ಟ್ ಪ್ರಯಾರಿಟೀನೂ ಇಲ್ಲ, ಯಾವ ಪ್ರಯಾರಿಟೀನೂ ಇಲ್ಲ. ಇದ್ದ ಪರಿಸ್ಥಿತಿಯಲ್ಲೇ ಇದೆ. ಮಾನ್ಯ ಮಂತ್ರಿಗಳು ಇದರಕಡೆಗೆ ಲಕ್ಷ್ಯ ತೆಗೆದುಕೊಂಡು ಇದೇ ಬಡ್ಜೆಟ್ ಉತ್ತರದಲ್ಲಿ ಆದರೂ ಇದರ ವಿಷಯದಲ್ಲಿ ಸಾಕಷ್ಟು ಭರವಸೆಯ ಉತ್ತರ ಕೊಡುತ್ತಾರೆ ಎಂದು ಆಶೆ ಮಾಡುತ್ತೇನೆ.

ವಿದ್ಯುಚ್ಛಕ್ತಿ ವಿಷಯದಲ್ಲಿ ಕೆಲವು ವಿಷಯ ತಿಳಿಸಬೇಕೆಂದು ಇದ್ದೇನೆ. ಕಮಲಾಪೂರ, ಗುಲ್ಬರ್ಗಾ-ಹುಮನಾಬಾದ್ ರೋಡ್‌ನಲ್ಲಿದೆ. ಅಲ್ಲಿ ಲಿಫ್ಟ್ ಇರಿಗೇಷನ್ ಮಾಡಲು ಡೀಸಲ್ ಆಯಿಲ್ ಇಂಜನ್ ಹಾಕಿ ಪವರ್‌ಕೊಡಲು ಹೈದರಾಬಾದ್ ಸರ್ಕಾರದವರು ವಿಚಾರ ಮಾಡಿದ್ದರು. ಸ್ವಲ್ಪ ಹಣ ಕೂಡ ಮಂಜೂರು ಮಾಡಿದ್ದರು. ಇಂಟಿಗ್ರೇಟ್ ಆದ ಮೇಲೆ ಅಲ್ಲಿಯ ಎಲೆಕ್ಟ್ರಿಕಲ್ ಇಂಜನಿಯರು ಬಂದು ನೋಡಿ ಡೀಸಲ್ ಎಂಜಿನ್‌ನಿಂದ ಉಪಯೋಗವಾಗುವುದಿಲ್ಲ, ಕೆಲವೇ ದಿವಸದಲ್ಲಿ ತುಂಗಭದ್ರಾದಿಂದ ವಿದ್ಯುಚ್ಛಕ್ತಿ ಬರುತ್ತದೆ, 1960–61ರಲ್ಲಿ ಬರಬಹುದು, ಅದರಿಂದ ಅನುಕೂಲವಾಗುತ್ತದೆ ಎಂದು ಹೇಳಿದರು. 1961ರಲ್ಲಿ ಆದರೂ ಬರುತ್ತದೆಯೋ ಇಲ್ಲವೋ. ಇದು ಎರಡು ವರ್ಷದಲ್ಲಿ ಬರುತ್ತದೆ, ಇನ್ನು ಒಂದು ವರ್ಷದಲ್ಲಿ ಬರುತ್ತದೆ ಎಂದು ತಿಳಿದುಕೊಂಡು 3 ವರ್ಷದಿಂದ ಕೇಳಿಕೊಳ್ಳುತ್ತ ಬಂದಿದ್ದೇವೆ. ಇಲ್ಲಿಯವರೆಗೂ ಸರ್ವೆ ಆಗಿಲ್ಲ, ಅಥವಾ ಯಾವ ಪ್ರಕಾರದ ಕಾರ್ಯವೂ ಇಲ್ಲ. ಮುಂದೆ 1961ನೇ ಇಸವಿ ಬಂದರೂ ಬರುತ್ತದೆಯೋ ಎಂಬ ಭರವಸೆ ಆಗಲಾರದು. ಅದರ ಸಲುವಾಗಿ ತುಂಗಭದ್ರಾ ಎಲೆಕ್ಟ್ರಿಕಲ್ ಯೋಜನೆಯನ್ನು ಬಹಳ ತೀವ್ರವಾಗಿ ಮಾಡಿ ರಸ್ತೆ ಪಕ್ಕದಲ್ಲಿರತಕ್ಕ ಹಳ್ಳಿಗಳಿಗೆ ಫಸ್ಟ್ ಪ್ರಯಾರಿಟಿ ಕೊಟ್ಟು, ಎಲ್ಲಿ ಲಿಫ್ಟ್ ಇರ್ರಿಗೇಷನ್‌ಗೆ ಅನುಕೂಲತೆ ಇದೆ ಅಲ್ಲಿಗೆ ವಿದ್ಯುಚ್ಛಕ್ತಿ ಒದಗಿಸಿ ಕೊಟ್ಟರೆ ಬಹಳ ಜನರಿಗೆ ಅವರ ಆರ್ಥಿಕ ಪರಿಸ್ಥಿತಿ ಬೆಳವಣಿಗೆಗೆ ಸಹಾಯವಾಗುತ್ತದೆ. ಇದರ ಸಲುವಾಗಿ ಈಗ ಅಲ್ಲಿ ಸರ್ವೇ ಕಾರ್ಯವನ್ನು ಕೂಡಲೇ ಕೈಕೊಂಡು ಆ ಕಾರ್ಯ ಮಾಡಿಸಬೇಕೆಂದು ಹೇಳಿ ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ವಿದ್ಯುಚ್ಛಕ್ತಿಯನ್ನು ನಾವು ಮನೆಯ ದೀಪದ ಬೆಳಕಿನ ಸಲುವಾಗಿ ಇಚ್ಛೆ ಮಾಡುವುದಿಲ್ಲ. ಅದು ನಮಗೆ ಬೇಕಾಗಿಯೂ ಇಲ್ಲ. ಲಿಫ್ಟ್ ಇರ್ರಿಗೇಷನ್ ಮತ್ತು ಚಿಕ್ಕ ಉದ್ಯೋಗ ಹ್ಯಾಂಡಿಕ್ರ್ಯಾಫ್ಟ್, ಅಲ್ಲಿ ನೇಕಾರ ಎಷ್ಟೋ ಮನೆಗಳು ಇವೆ. ಆ ಎಲ್ಲ ಸಣ್ಣ ಸಣ್ಣ ಕೈಗಾರಿಕೆಗಳಿಗೂ ಸಹಾಯವಾಯಿತು ಎಂದರೆ ಎಷ್ಟೋ ನಿರುದ್ಯೋಗ ದೂರವಾದಂತಾಗುತ್ತದೆ. ಇದರ ಸಲುವಾಗಿ ವಿದ್ಯುಚ್ಛಕ್ತಿ ಬಯಸಲಿಕ್ಕೆ ಹತ್ತಿದ್ದೇವೆ. ಇದರ ಕಡೆ ಲಕ್ಷ್ಯ ಕೊಟ್ಟು ಬಹಳ ತೀವ್ರ ವಿದ್ಯುಚ್ಛಕ್ತಿಯನ್ನು ಒದಗಿಸಿ ಆ ಜನರ ಆಕಾಂಕ್ಷೆಯನ್ನು ಪೂರ್ಣ ಮಾಡುತ್ತಾರೆ ಎಂದು ನಾನು ಆಶೆ ಮಾಡುತ್ತೇನೆ.

ಇನ್ನೂ ಒಂದು ವಿಷಯ ಎಂದರೆ, ಅಲ್ಲಿ ಲೋಕಲ್ ಇಂಜನಿಯರು ಇದ್ದರು. ಅವರನ್ನೂ ತೆಗೆದು ಎರಡು, ಮೂರು ತಾಲ್ಲೂಕಿಗೆ ಒಂದು ಸಬ್‌ಡಿವಿಜನ್ ಮಾಡಿದ್ದಾರೆ. ಇದು ಬಹಳ ಚೆನ್ನಾದ ವ್ಯವಸ್ಥೆ, ಇದರ ಸಲುವಾಗಿ ನಾವು ಬಹಳ ಅಭಾರಿ ಆಗಿದ್ದೇವೆ. ಈಗ ನಮ್ಮ ಗುಲ್ಬರ್ಗಾ ಜಿಲ್ಲೆ ಸಾಮಾನ್ಯವಾಗಿ ಬಹಳ ದೊಡ್ಡ ಜಿಲ್ಲೆ ಎಂದು ಅವರಿಗೆ ಮನವರಿಕೆಯಾಗಿದೆ. ಮತ್ತು ಅಂಕಿಅಂಶದಿಂದಲೂ ಕೂಡ ನೋಡಬಹುದು. ಅಲ್ಲಿ ಒಂದೇಡಿವಿಜನ್ ಇದ್ದು ಯಾವುದೇ ಕೆಲಸವೂ ಆಗಲಾರದಂತಾಗಿದೆ. ಅದಕ್ಕೆ ನಾವು ಮಂತ್ರಿಗಳಿಗೆ ಎಷ್ಟೋಸಲ ಹೇಳಿಕೊಂಡೆವು. ಲೋಡ್ ಹೆಚ್ಚಾದರೆ ಮತ್ತೊಂದು ಡಿವಿಜನ್ ಮಾಡುತ್ತೇವೆ ಎಂದು ಹೇಳುತ್ತಾರೆ. ಎಲ್ಲಿ ಇಂಜನಿಯರು ಇಲ್ಲ, ಎಲ್ಲಿ ಸಿಬ್ಬಂದಿ ಇಲ್ಲ ಅಲ್ಲಿ ಎಸ್ಟಿಮೇಟ್ ಆಗುವಹಾಗಿಲ್ಲ, ಸ್ಕ್ರೂಟಿನಿ ಆಗುವಹಾಗಿಲ್ಲ. ಕೆಲಸ ಮಂಜೂರು ಆಗುವಹಾಗಿಲ್ಲ. ಮಂಜೂರಾಗದಿದ್ದ ಮೇಲೆ ಯಾವುದೂ ಕೆಲಸ ಪ್ರಾರಂಭವಾಗುವಹಾಗಿಲ್ಲ. ಎಂದರೆ ಲೋಡ್ ಎಲ್ಲಿ ಹೆಚ್ಚಾಗಬೇಕು ? ಇದರಕಡೆ ಲಕ್ಷ್ಯ ಕೊಡಬೇಕು. ಎಸ್ಟಿಮೇಟು ಆದರೆ ಪ್ಲಾನ್ ತಯಾರಾಗುತ್ತದೆ, ಕೆಲಸ ಆಗುತ್ತದೆ, ಲೋಡ್ ಹೆಚ್ಚಾಗುತ್ತದೆ. ಅದರ ಸಲುವಾಗಿ ಗುಲ್ಬರ್ಗಾದಲ್ಲಿ ಎರಡು ಡಿವಿಜನ್ ಆಗಬೇಕು. ಗುಲ್ಬರ್ಗಾದಲ್ಲಿ ಒಂದು, ಯಾದ್ಗಿರ್‌ನಲ್ಲಿ ಒಂದು ಡಿವಿಜನ್ ಹೊಸದಾಗಿ ಏರ್ಪಾಡು ಮಾಡಿ ಎಕ್ಸಿಕ್ಯೂಟಿವ್ ಇಂಜನಿಯರನ್ನು ಹಾಕಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಅವರು ಆಶ್ವಾಸನೆ ಕೊಟ್ಟಿದ್ದಾರೆ, ಇಷ್ಟರಲ್ಲೇ ಮಾಡುತ್ತೇವೆ, ಲಕ್ಷ್ಯ ಕೊಡುತ್ತೇವೆ ಎಂದು ಹೇಳಿದ್ದಾರೆ. ಬಡ್ಜೆಟ್ ಉತ್ತರದಲ್ಲಿ ಪೂರ್ಣ ಭರವಸೆ ಕೊಡುತ್ತಾರೆ ಎಂದು ಆಶೆ ಮಾಡುತ್ತೇನೆ.

ಇನ್ನು ಸಣ್ಣಪುಟ್ಟ ಮೈನರ್ ಇರ್ರಿಗೇಷನ್ ವಿಚಾರ ಇದೆ. ಎಷ್ಟೋ ಸಣ್ಣ ಸ್ಕೀಂಗಳಿಗೆ, ಹಳ್ಳಗಳಿಗೆ ಅಣೆಕಟ್ಟು ಕಟ್ಟಿದ್ದಾರೆ. ಅದು ಯಾವುದೂ ಉಪಯೋಗವಾಗದಹಾಗೆ ಆಗಿದೆ. ಏಕೆಂದರೆ ಅದರಲ್ಲಿ ಒಂದು ದೊಡ್ಡ ಕೊರತೆ; ಅಣೆಕಟ್ಟು ಕಟ್ಟಿ ಎಲ್ಲಿವರೆಗೆ ನೀರು ಹೋಗುತ್ತದೆ ಅಲ್ಲಿವರೆಗೂ ಕಾಲುವೆ ಮಾಡುತ್ತಾರೆಯೋ ಎಂದರೆ ಮಾಡುವುದಿಲ್ಲ, ನೀವೇ ಮಾಡಿಕೊಳ್ಳಿರಿ ಎಂದು ಬಿಟ್ಟುಬಿಡುತ್ತಾರೆ. ಜನರಿಗೆ ಅಷ್ಟು ಶಕ್ತಿ ಇಲ್ಲ. ಅವರು ಕಾಲುವೆ ತೋಡಿಸುವಹಾಗಿಲ್ಲ, ನೀರು ಉಪಯೋಗಕ್ಕೆ ಬರುವಹಾಗಿಲ್ಲ. ನನ್ನ ಸಲಹೆ ಏನೆಂದರೆ, main canal ಅನ್ನಾದರೂ ನೀವು ಮಾಡಿಕೊಡಿ. ಸಬ್ ಕೆನಾಲನ್ನು ಆ ಜನರೇ ಮಾಡಿಕೊಳ್ಳುವುದಕ್ಕೆ ಮುಂದೆ ಬರುತ್ತಾರೆ. ಇಲ್ಲದೇ ಇದ್ದರೆ ನಿಮಗೆ ದುಡ್ಡು ಖರ್ಚಾಗುತ್ತದೆ, ಜನರಿಗೆ ಉಪಯೋಗ ಆಗುವುದಿಲ್ಲ. ಇದರಕಡೆಗೆ ಹೆಚ್ಚು ಲಕ್ಷ್ಯಕೊಟ್ಟು ಯಾವುದೇ ಒಂದು ಹಳ್ಳಕ್ಕೆ ಅಣೆಕಟ್ಟಿದರೂ ಅದರ ಜೊತೆಯಲ್ಲೇ main canalಗೂ ಸರ್ವೇ ಆಗಿ, ಅದನ್ನು ಮಾಡಬೇಕೆಂದು ಹೇಳುತ್ತೇನೆ. ಈಗ ಹತ್ತಾರು ಅಣೆಕಟ್ಟುಗಳನ್ನು ಕಟ್ಟಿದ್ದೀರಿ. ಏನೂ ಉಪಯೋಗವಿಲ್ಲದೇ ಬಿಟ್ಟುಬಿಟ್ಟಿದ್ದಾರೆ. ಮೈನರ್ ಇರಿಗೇಷನ್ ಸಲುವಾಗಿ ಗುಲ್ಬರ್ಗಾದಲ್ಲಿ ಕಾಗಿಣಿ, ಭೀಮಾ, ಅಮರ್ಜಾ ನದಿಗಳು ಹರಿಯುತ್ತವೆ. ಕಾಗಿಣೆಯಲ್ಲಿ ಮತ್ತು ಭೀಮಾದಲ್ಲಿ ದೊಡ್ಡ ಯೋಜನೆಗಳಿವೆ ಎಂದು ಕೇಳುತ್ತಾ ಇದ್ದೇವೆ. ಅದು ಇತ್ತು ಎಂದರೆ ಅದರ ಸೈಟ್ ಸೆಲೆಕ್ಷನ್‌ಮಾಡಿ, ಬಡ್ಜೆಟ್‌ನಲ್ಲಿ ಹಣ ಒದಗಿಸಿ. ಆ ಬಗ್ಗೆ ತಿಳಿವಳಿಕೆ ಕೊಟ್ಟರೆ ಅಲ್ಲಿನ ಜನರಿಗೆ ಸಂತೋಷವಾಗುತ್ತದೆ. ಇಲ್ಲದೆ ಇದ್ದರೆ ಜನರು ನಮ್ಮ ಊರು ಎಲ್ಲಿ ಮುಳುಗಡೆಯಾಗುತ್ತದೆಯೋ ಎಂದು ಯಾವಾಗಲೂ ಸಂಶಯದಿಂದ ಕೂತಿರುತ್ತಾರೆ. ಆದುದರಿಂದ ಸೈಟ್ ಸೆಲೆಕ್ಷನ್‌ಮಾಡುವುದು ಅವಶ್ಯಕ. ಸಣ್ಣ ನೀರಾವರಿ ಆಗಲೀ ದೊಡ್ಡ ನೀರಾವರಿ ಆಗಲೀ ಯಾವುದೇ ಆಗಲೀ ಸೈಟ್ ಸೆಲೆಕ್ಷನ್ ಮಾಡಿ ಜನರಿಗೆ ತಿಳಿವಳಿಕೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

(ಶ್ರೀ ಎಸ್. ಆರ್. ಪಾಟೀಲ್)

ನಮ್ಮಲ್ಲಿ ಜನರಲ್ ಹಾಸ್ಪೆಲ್ ಕಟ್ಟಿಸಬೇಕೆಂದು ಯೋಚನೆ ಮಾಡಿದ್ದಾರೆ. ಅದರ ಪ್ಲಾನ್, ಎಸ್ಟಿಮೇಟ್ ಸ್ಯಾಂಕ್ಷನಿಮಾಡಿ ಕಳುಹಿಸಬೇಕೆಂದು ಇದೆ. ಅದು ಮಾಡಬೇಕಾದರೆ P. W. D. ಯಿಂದ ಒಂದು ವರ್ಷ ಹಿಡಿಯಿತು. ಇನ್ನೂ ಮಂಜೂರು ಆಗಿಲ್ಲ. ಅದರ ಸಲುವಾಗಿ ದಯವಿಟ್ಟು ಲಕ್ಷ್ಯ ತೆಗೆದುಕೊಂಡು ಅದನ್ನು ಮಾಡಿಸಲು ವ್ಯವಸ್ಥೆ ಮಾಡಬೇಕೆಂದು ಹೇಳಿ, ಇಷ್ಟರವರೆಗೂ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದನೆಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

5-30 P.M.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ರಾಜ್ಯದ ಆದಾಯದ ಅರ್ಧ ಭಾಗಕ್ಕಿಂತ ಹೆಚ್ಚು ಹಣವನ್ನು ಈ ಲೋಕೋಪಯೋಗಿ ಇಲಾಖೆಯಲ್ಲಿ ನಾವು ಖರ್ಚುಮಾಡುತ್ತಿದ್ದೇವೆ. ಆದರೆ ಈ ಶಾಖೆ ಆಹಾರದ ಅಭಾವವನ್ನು ನಿವಾರಣೆ ಮಾಡುವುದರಲ್ಲಿ ಎಷ್ಟರಮಟ್ಟಿಗೆ ಕೆಲಸಕಾರ್ಯಗಳನ್ನು ಸಾಧಿಸಿದೆಯೆಂದು ನಾವು ಯೋಚನೆಮಾಡಿದರೆ ಇನ್ನೂ ಸಾಲದೆಂದು ನಮಗೆ ಭಾಸವಾಗುತ್ತದೆ. ಉದಾಹರಣೆಗೆ ಮೈಸೂರು ಸರ್ಕಾರಕ್ಕೂ ಮತ್ತು ಮದ್ರಾಸು ಸರ್ಕಾರಕ್ಕೂ ಇರುವ ಒಂದು ಕರಾರಿನ ಅಥವಾ ಷರತ್ತಿನ ಪ್ರಕಾರ ಕಾವೇರಿ ನದಿ ಪ್ರದೇಶದಲ್ಲಿ ಸುಮಾರು ಒಂದು ಲಕ್ಷ ಹತ್ತು ಸಾವಿರ ಎಕರೆ ಜಮೀನನ್ನು ಹೆಚ್ಚಾಗಿ ಸಾಗುವಳಿ ಮಾಡಬಹುದೆಂದು ವಿಧಾಯಕವಾಗಿದೆ. ಆದರೆ ಸರ್ಕಾರದವರು ಈಗ ತಿಳಿಸಿರುವ ಪ್ರಕಾರ ಗೊರೂರು ಪ್ರಾಜೆಕ್ಟಿನಿಂದ 35 ಸಾವಿರ ಎಕರೆ ಮಾತ್ರ ನೀರಾವರಿಯಾಗುತ್ತದೆ. ಬಾಕಿ ಭಾಗವನ್ನು ಅವರು ಯಾವ ರೀತಿ ಉಪಯೋಗ ಮಾಡಿಕೊಳ್ಳುತ್ತಾರೆಂಬುದ ಗೊತ್ತಾಗಿಲ್ಲ. ಅಗ್ರಿಮೆಂಟಿನ ಅವಧಿ ಮುಗಿಯುವ ಕಾಲ ಸಮೀಪವಾಗುತ್ತಿದೆ. ಆದುದರಿಂದ ಕಾವೇರಿ ಬೇಸಿನ್ ಉಪಯೋಗ ಮಾಡಿಕೊಳ್ಳಲು ಯಾವ ಯೋಜನೆಯಿದೆ ಯೆಂಬುದನ್ನು ಸರ್ಕಾರದವರು ಉತ್ತರ ಹೇಳುವಾಗ ತಿಳಿಸಬೇಕೆಂದು ಕೇಳುತ್ತೇನೆ. ಅದೇ ಮ ದ ರಾ ಸು ಸರ್ಕಾರದವರು ಕಾವೇರಿ ಬೇಸಿನ್ವಿಚಾರದಲ್ಲಾಗಿರುವ ಅಗ್ರಿಮೆಂಟ್ ಮೀರಿದು ಬೇಕಾದಷ್ಟು ಜಮೀನನ್ನು ನೀರಾವರಿ ಮಾಡಿಕೊಂಡಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೂ ಪ್ರಾಂತ ಸರ್ಕಾರಕ್ಕೂ ಪತ್ರ ವ್ಯವಹಾರ ನಡೆಯುತ್ತಿದೆಯೆಂದು ಮಂತ್ರಿಗಳು ಹೇಳಿದ್ದರು. ಅಗ್ರಿಮೆಂಟಿನ ಅವಧಿ ಮುಕ್ತಾಯ ವಾಗುತ್ತಾ ಬಂದಿರುವುದರಿಂದ ಶೀಘ್ರವಾಗಿ ಕಾವೇರಿ ನದಿಯ ನೀರನ್ನು ಆದಷ್ಟು ಉಪಯೋಗಿಸಿಕೊಳ್ಳಲು ಪ್ರಯತ್ನ ಮಾಡಬೇಕು. ಆ ಬಗ್ಗೆ ಸರ್ಕಾರದ ಯೋಜನೆಯೇನಿದೆಯೆಂಬುದನ್ನು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಈಗ ಅನೇಕ ಹೊಸ ಪ್ರಾಜೆಕ್ಟುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಹಳೇ ಇರ್ರಿಗೇಷನ್ ಛಾನಲ್ಸ್ ಬೇಕಾದಷ್ಟಿವೆ. ಅವುಗಳ ನೀರು ಪರಿಣಾಮಕಾರಿಯಾಗಿ ಉಪಯೋಗವಾಗುತ್ತಿದೆಯೋ ಎಂದು ನೋಡಿದರೆ ಅನೇಕ ಕಾಲುವೆಗಳಲ್ಲಿ ನೀರು ಸರಿಯಾಗಿ ಹರಿಯದೆ ಜೊಂಡು ಮತ್ತು ಸಿಲ್ಟ್ ಕಟ್ಟಿಕೊಂಡು ಎಷ್ಟು ಉಪಯೋಗ ವಾಗಬೇಕಾಗಿತ್ತೋ ಅಷ್ಟಾಗದೆ ಸಾಗುವಳಿಯಾಗ ಬೇಕಾಗಿದ್ದಷ್ಟು ಅಚ್ಚುಕಟ್ಟು ಸಾಗುವಳಿಯಾಗುತ್ತಿಲ್ಲ. ಆದುದರಿಂದ ಹೊಸ ಪ್ರಾಜೆಕ್ಟುಗಳ ಜೊತೆಗೆ ಸಾಮಾನ್ಯವಾದ ಕಾಲುವೆಗಳ ನೀರೂ ಸರಿಯಾಗಿ ಸಾಕಷ್ಟು ಉಪಯೋಗವಾಗಲು ಅವಕಾಶ ಮಾಡಿಕೊಡುವುದು ಸೂಕ್ತ.

ಮೈನರ್ ಇರ್ರಿಗೇಷನ್ ಕೆಲಸಗಳು ಇನ್ನೂ ಬೇಕಾದಷ್ಟು ಆಗಬೇಕಾಗಿವೆ. ಇದಕ್ಕಾಗಿ ಇನ್ವೆಸ್ಟಿಗೇಷನ್ ಸರ್ಕ್‌ಲ್‌ಗಳನ್ನು ಮಾಡಿರುವುದಾಗಿ ಮಂತ್ರಿಗಳು ಇದೇ ಸಭೆಯಲ್ಲಿ ಹೇಳಿದ್ದಾರೆ. ಈಗ ಹಳೇ ಮೈಸೂರಿಗೊಂದು, ಹೊಸ ಮೈಸೂರಿಗೊಂದು ಸರ್ಕಲ್ ಇದೆ. ಆದರೆ ಎಷ್ಟು ಆಸಕ್ತಿಯಿಂದ ಕೆಲಸ ಮಾಡುತ್ತಾರೆಂದು ನೋಡಿದರೆ ಈಗಿರುವಂತೆ ಮುಂದುವರೆದರೆ ಹತ್ತು ವರ್ಷವಾದರೂ ಕೆಲಸಗಳು ಮುಗಿಯುವಂತಿಲ್ಲ. ಆದುದರಿಂದ ಇನ್ವೆಸ್ಟಿಗೇಷನ್ ಸರ್ಕಲ್‌ಗಳು ಈಗೇನಿವೆ ಅವುಗಳನ್ನು ದ್ವಿಗುಣ ಅಥವಾ ತ್ರಿಗುಣ ಮಾಡುವುದು ಸೂಕ್ತ ಎಂದು ಹೇಳುತ್ತೇನೆ. ಇನ್ವೆಸ್ಟಿಗೇಷನ್ ಆದಷ್ಟು ಶೀಘ್ರವಾಗಿ ನಡೆಸಲು ಹೆಚ್ಚು ಸಿಬ್ಬಂದಿ ಒದಗಿಸಿ ನೀರನ್ನು ರೈತರಿಗೆ ಬೇಗ ಒದಗಿಸಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು.

ಹೊಳೆ ನರಸೀಪುರಟಾನಲ್ಲಿ ಶ್ರೀ ರಾಮದೇವರ ಕಟ್ಟೆಯಿಂದ ಬರುವ ದಕ್ಷಿಣ ನಾಲೆ ಊರ ಮಧ್ಯೆ ಹೋಗುತ್ತಿದೆ. ಅದನ್ನು ಹೊರಗಡೆಗೆ ಡೀವಿಯೇಟ್ ಮಾಡಬೇಕು, ಜನರ ಆರೋಗ್ಯಕ್ಕೆ ತೊಂದರೆಯಾಗಿದೆ ಎಂದು ಹತ್ತಾರು ವರ್ಷಗಳಿಂದ ಹೇಳುತ್ತಿದ್ದೇವೆ. ಜನರಿಗೆ ಬಹಳ ಕಷ್ಟವಾಗಿದೆ, ಇನ್ನು ಆ ಕೆಲಸವಾಗದಿರುವುದಕ್ಕೆ ಕಾರಣವೇನೆಂಬುದನ್ನು ಮಂತ್ರಿಗಳು ತಿಳಿಸಬೇಕು. ಬಹುಶಃ ಅದಕ್ಕೆ ಸಂಬಂಧಪಟ್ಟ ಫೈಲ್ ಎಲ್ಲಾದರೂ ನಿಂತಿದ್ದರೆ ಜಾಗ್ರತೆ ತರಿಸಿಕೊಂಡು ಈ ಕೆಲಸವನ್ನು ಬಹಳ ಜಾಗ್ರತೆ ಮಾಡುವುದಕ್ಕೆ ಏರ್ಪಾಟು ಮಾಡಬೇಕು. ಹೊಳೆನರಸಿಪುರ-ಕೇರಳಾಪುರ ರಸ್ತೆ ಸುಮಾರು ಹತ್ತು ವರ್ಷದಿಂದ 20-30 ಗ್ರಾಮಗಳವರು ಹಾತೊರೆಯುತ್ತಿದ್ದರೂ ಆಗದೆ, ನಿಂತಿದೆ ಗಾಡಿಗಳು ಹೋಗುವುದಕ್ಕೆ, ಸಾಮಾನು ಸಾಗಿಸುವುದು ವಗೈರೆಗೆ ಬಹಳ ತೊಂದರೆಯಾಗಿದೆ. ಇದಕ್ಕೆ ಇಲಾಖೆ ಎಸ್ಟಿಮೇಟ್ ಮಾಡಿ ಟೆಂಡರ್ ಕಾಲ್‌ಫಾರ್ ಮಾಡಿದ ನಂತರ ಕಂಟ್ರಾಕ್ಟರುಗಳ ತಕರಾರಿನಿಂದ ಕೆಲಸ ನಿಂತಿದೆ. ಆದರೆ ಒಬ್ಬ ತಕರಾರು ಹಾಕಿದ ಮಾತ್ರಕ್ಕೆ ಸುಮಾರು 20 ಗ್ರಾಮಸ್ಥರಿಗೆ ತೊಂದರೆ ಮಾಡುವುದು ಸೂಕ್ತವಲ್ಲ. ಆದುದರಿಂದ ಜಾಗ್ರತೆ ಈ ರಸ್ತೆ ಕೆಲಸ ಕೈಕೊಳ್ಳಬೇಕಾದ್ದು ಸೂಕ್ತ. ಇದನ್ನು ಸರ್ಕಾರದವರು ಗಮನಿಸಿ ಅತಿ ಜಾಗ್ರತೆಯಾಗಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಮದ್ರಾಸ್ ಮತ್ತು ಮೈಸೂರಿಗೆ ಆಗಿರುವ ಅಗ್ರಿಮೆಂಟಿನ ಪ್ರಕಾರ ಹೇಮಾವತಿ ನದಿಯ ಇಷ್ಟು ನೀರನ್ನು ತೆಗೆದುಕೊಳ್ಳಬಹುದೆಂದು ನಿಗದಿಯಾಗಿದೆ. ಈಗ ದಕ್ಷಿಣ ನಾಲೆ ಮತ್ತು ಉತ್ತರ ನಾಲೆ ಎಂದು ಎರಡು ನಾಲೆಗಳಿವೆ. ಉತ್ತರ ನಾಲೆಯನ್ನು ಬಡಾವಣೆ ಮಾಡಿದರೆ ಸುಮಾರು 15-16 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಸುಮಾರು 1,500 ಎಕರೆಯನ್ನು ನೀರಾವರಿಗೆ ತರಬಹುದೆಂದು ಲೋಕೋಪಯೋಗಿ ಇಲಾಖೆ ಅಂದಾಜು ಮಾಡಿದೆ. ಅದೇ ದಕ್ಷಿಣ ನಾಲೆ ಬಡಾವಣೆ ಮಾಡಿದರೆ ಕೇವಲ 8-9 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಸುಮಾರು 1,500 ಎಕರೆಗೆ ನೀರನ್ನೊದಗಿಸಬಹುದೆಂದು ಅಂದಾಜಾಗಿದೆ. ಆ ದೃಷ್ಟಿಯಿಂದ ಉತ್ತರ ನಾಲೆಗೆ ಬದಲಾಗಿ ದಕ್ಷಿಣ ನಾಲೆ ಬಡಾವಣೆ ಮಾಡಿದರೆ ಖರ್ಚು ಕಡಮೆಯಾಗಿ ಜನರಿಗೂ ಹೆಚ್ಚು ಉಪಯೋಗವಾಗುತ್ತದೆ. ಇದನ್ನು

ತೀವ್ರವಾಗಿ ಪರಿಶೀಲನೆ ಮಾಡಿ ಕಾರ್ಯಕ್ರಮ ತೆಗೆದು ಕೊಳ್ಳಬೇಕು.

ವಾಟರ್ ರೇಟ್ ನಿಗದಿ ಮಾಡುವಾಗ ದೇಶದ ಎಲ್ಲಾ ಭಾಗಗಳಲ್ಲೂ ಒಂದೇ ತರಹ ಇರುವಂತೆ ಮಾಡುವುದು ಒಳ್ಳೆಯದೆಂದು ತೋರುತ್ತದೆ. ನನಗೆ ಗೊತ್ತಿರುವಂತೆ ಕನ್ನಂಬಾಡಿ ಕಟ್ಟೆಯ ನೀರಾವರಿ ಜಮೀನಿಗೆ, ಮುಖ್ಯವಾಗಿ ವಿಶ್ವೇಶ್ವರಯ್ಯ ನಾಲಾ ಕೆಳಗಿರುವ ಜಮೀನಿಗೆ ಬಹಳ ಕಡಮೆ ವಾಟರ್ ರೇಟ್ ಇದೆ. ಅನೇಕ ಸಲ ಇಲ್ಲಿ ಹೇಳಿದಂತೆ ಒಂದು ಕಡೆ ಒಂದು ದರ, ಇನ್ನೊಂದು ಕಡೆ ಇನ್ನೊಂದು ದರ ನಿಗದಿ ಮಾಡುವುದು ಸರಿಯಲ್ಲ. ಈ ವ್ಯತ್ಯಾಸವಿರುವುದು ನಿಜವಾದರೆ ಸರ್ಕಾರ ಪರಿಶೀಲಿಸಿ ದೇಶದಾದ್ಯಂತ ಒಂದೇ ರೀತಿಯಾದ ವಾಟರ್ ರೇಟ್ ನಿಗದಿ ಮಾಡುವುದು ಸೂಕ್ತ. ಅದೂ ಅಲ್ಲದೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ಆದಾಯ ಸಹ ಬರುವ ನಿರೀಕ್ಷೆಯಿದೆ.

ಮೈನರ್ ಇರ್ರಿಗೇಷನ್ ವಿಚಾರದಲ್ಲಿ ಹೊಳೆನರಸೀಪುರಕ್ಕೆ ಸಂಬಂಧಪಟ್ಟಂತೆ ಒಂದು ಪ್ರಶ್ನೆ ಹಾಕಿದಾಗ ಸುಮಾರು 360 ಪ್ರಾಜೆಕ್ಟುಗಳಿವೆ. ಸುಮಾರು 164 ಪೂರ್ಣವಾಗಿವೆ, ಇನ್ನೂ 194 ಆಗುವುದರಲ್ಲಿವೆ ಎಂದು ಮಂತ್ರಿಗಳು ಹೇಳಿದ್ದಾರೆ. ಅಲ್ಲಿಯ ಸ್ಥಿತಿಗತಿ, ಜನರ ಆರ್ಥಿಕ ಮುಗ್ಗಟ್ಟು ನೋಡಿ ಎಲ್ಲಾ ಮೈನರ್ ಇರ್ರಿಗೇಷನ್ ಪ್ರಾಜೆಕ್ಟುಗಳನ್ನೂ ಜಾಗ್ರತೆ ಕಾರ್ಯಗತ ಮಾಡಿದರೆ ನಿಜವಾಗಿಯೂ ಅನುಕೂಲವಾಗುತ್ತದೆಂದು ಈ ಸಮಯದಲ್ಲಿ ಹೇಳುತ್ತೇನೆ.

ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದರಲ್ಲಿ ವಿಳಂಬವಾಗುತ್ತಿದೆ. ಅನೇಕ ಮಿತ್ರರು ಎಲೆಕ್ಟ್ರಿಸಿಟಿ ಬೋರ್ಡ್ ಆದ ಮೇಲೆ ಈ ದಿವಸ ಈ ಸಂಬಂಧವಾದ ಕಾರ್ಯನಿಧಾನವಾಗುತ್ತಿದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಇತರರೂ ಆ ಅಭಿಪ್ರಾಯವನ್ನು ಒಪ್ಪುತ್ತಾರೆ. ಹೊಳೆನರಸೀಪುರ ಕಸಬಾ ತಾಲ್ಲೂಕು ಮಾರನಾಯಕನ ಹಳ್ಳಿ, ಅಡಕೆ ಕೆರೆ, ಹೊಸೂರು ಮುಂತಾದ ಅನೇಕ ಕಡೆ ರೈತರ ಉತ್ಸಾಹದಿಂದ ಬಂದು ವಿದ್ಯುಚ್ಛಕ್ತಿ ಸರಬರಾಯಿ ಮಾಡಿ, ಆಹಾರ ಬೆಳೆಯುತ್ತೇವೆ ಎಂದು ಅರಿಕೆ ಮಾಡಿಕೊಂಡಿದ್ದಾರೆ. ಜಾಗ್ರತೆ ರೈತರಿಗೆ ಸರಬರಾಯಿ ಮಾಡದೇ ಹೋದರೆ ಅವರ ಉತ್ಸಾಹ ಕಡಮೆಯಾಗಿ ಹೆಚ್ಚು ಆಹಾರ ಬೆಳೆಯುವುದಕ್ಕಾಗುವುದಿಲ್ಲ. ಇದನ್ನು ಗಮನಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ನನ್ನ ಅನುಭವಕ್ಕೆ ಬಂದಿರುವ ಪ್ರಕಾರ, ಕಂಟ್ರಾಕ್ಟರುಗಳು ರಸ್ತೆಗಳಲ್ಲಿ ಜಲ್ಲಿಯನ್ನು ಜೋಡಣೆ ಮಾಡುತ್ತಾರೆ. ಅದನ್ನು ಅಳತೆ ಮಾಡಿಸಿ ಬಿಲ್ ತೆಗೆದು ಕೊಳ್ಳುತ್ತಾರೆ. ಅನಂತರ ಒಂದು ವರ್ಷವಾದರೂ ಜಲ್ಲಿಯು ರಸ್ತೆಯಲ್ಲಿಯೇ ಇರುತ್ತದೆ. ಗಾಡಿ, ದನಕರಗಳು ತಿರುಗಾಡಿ ಸುಮಾರು ಕಾಲು ಭಾಗದಷ್ಟು ಜಲ್ಲಿ ಕಡಮೆಯಾಗುತ್ತದೆ. ಇದರಿಂದ ಜಲ್ಲಿಗಾಗಿ ಎಷ್ಟು ಹಣವನ್ನು ಕೊಟ್ಟಿರುತ್ತಾರೆಯೋ ಅಷ್ಟೂ ರಸ್ತೆಗೇ ಉಪಯೋಗವಾಗದೆ ತೊಂದರೆಯಾಗುತ್ತದೆ. ಆದುದರಿಂದ ಸಂಬಂಧಪಟ್ಟ ಕಂಟ್ರಾಕ್ಟರುಗಳು ನಿರ್ದಿಷ್ಟವಾದ ಕಾಲದಲ್ಲಿ ರಸ್ತೆ ರಿಪೇರಿಮಾಡಿ ಜಲ್ಲಿ ವಗೈರೆ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಸೂಕ್ತ. ಮಾನ್ಯ ಮಿತ್ರರೊಬ್ಬರು ಹೇಳಿದ ಹಾಗೆ ರಸ್ತೆ ರಿಪೇರಿ ಮಾಡುವಾಗ ನಿರ್ದಿಷ್ಟವಾದ, ಶಾಸ್ತ್ರೋಕ್ತವಾದ ರೀತಿಯಲ್ಲಿ ಮಾಡಿದರೆ ಆ ರಸ್ತೆಯ quality ಉಳಿಯುತ್ತದೆ. ಪಿಕಾಸಿಯೊಳಗೆ ಅಗೆದು, ಜಲ್ಲಿಯನ್ನು ಹಾಕಿ, ಸರಿಯಾದ ರೀತಿಯಲ್ಲಿ pack ಮಾಡದೆ ಇದ್ದರೆ ರಸ್ತೆ ಹೆಚ್ಚು ಕಾಲ ಉಪಯೋಗಕ್ಕೆ ಬರುವುದಿಲ್ಲ. ಮತ್ತು ಸಾರ್ವಜನಿಕರಿಗೆ ಹೆಚ್ಚು ಹಣ ಖರ್ಚಾಗಿ ಜನರಿಗೆ ಅದರಿಂದ ಉಪಯೋಗ ಕಡಮೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕಾವೇರಿ ಬೇಸಿನ್ ನೀರನ್ನು ಜಾಗ್ರತೆಯಾಗಿ ಸದುಪಯೋಗ ಪಡಿಸಿಕೊಂಡು ನಮಗೆ ಬರತಕ್ಕ 1,10,000 ಎಕರೆ ಜಮೀನು ಜಾಗ್ರತೆ ಉಪಯೋಗವಾಗುವಂತೆ ಸರ್ಕಾರದವರು ಯೋಜನೆಗಳನ್ನು ಮಾಡಿ ಕಾರ್ಯಗತವಾಗಲು ಪ್ರಯತ್ನ ಮಾಡಬೇಕು. ಗೊರೂರು ಪ್ರಾಜೆಕ್ಟ್ ಕೆಲಸ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಗಿ ಜನರಿಗೆ ಉಪಯೋಗವಾಗುವಂತೆ ಮಾಡಬೇಕು. ಗೊರೂರು ಪ್ರಾಜೆಕ್ಟ್ ಆದರೆ, ತಜ್ಞರ ಅಭಿಪ್ರಾಯದಂತೆ ಮೂರು ಸಕ್ಕರೆ ಕಾರ್ಖಾನೆಗಳು ಹಾಸನ ಜಿಲ್ಲೆಯಲ್ಲಿ ಪ್ರಾರಂಭವಾಗಲು ಸಾಧ್ಯವಿದೆ ಮತ್ತು ಅಲ್ಲಿಯ ಜನರ ಆರ್ಥಿಕಸ್ಥಿತಿಯೂ ಉತ್ತಮಗೊಳ್ಳುತ್ತದೆ. ಆದ್ದರಿಂದ ಗೊರೂರು ಪ್ರಾಜೆಕ್ಟ್ ಶೀಘ್ರವಾಗಿ ಆಗುವುದಕ್ಕೆ ಪ್ರಯತ್ನ ಮಾಡಬೇಕು. ಎಷ್ಟೇ ಅಡ್ಡಿ ಆತಂಕಗಳಿದ್ದಾಗ್ಯೂ ಕೂಡ ಅದನ್ನು ಪರಿಗಣಿಸದೆ ಜನಗಳಿಗೆ ಉಪಯೋಗವಾಗುತ್ತದೆನ್ನುವ ವಿಶಾಲ ದೃಷ್ಟಿಯಿಂದ ಕಾರ್ಯಗತ ಮಾಡುವುದು ಸೂಕ್ತವೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನಾನು ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಮರಾಮತ್ತು ಖಾತೆಯ ಡಿಮ್ಯಾಂಡನ್ನು ಸ್ವಾಗತಮಾಡುತ್ತ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಹೈದರಾಬಾದ್ ಕರ್ಣಾಟಕಕ್ಕೆ ಮರಾಮತ್ತು ಖಾತೆಯಿಂದ ಸಾಕಷ್ಟು ಕೆಲಸವಾಗಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ರಸ್ತೆಗಳ ಕೆಲಸ ಹೋದ ವರ್ಷದಿಂದ ಮಂಜೂರಾಗಿ ಕಾಮಗಾರಿ ನಡೆದಿದೆ. ಆದರೆ ಮೊನ್ನೆ ಮಾನ್ಯ ಮಂತ್ರಿಗಳು ಯಾವುದೇ ಕ್ಷೇತ್ರದಲ್ಲಿಯಾಗಲಿ, ಯಾರೇ ಸದಸ್ಯರು ಎಲ್ಲಿ ರಸ್ತೆಗಳು ಬೇಕು ಎಂದು ಬೇಡಿದರೂ ಕೊಡುತ್ತಿದ್ದೇವೆ ಮತ್ತು ರೊಕ್ಕದ ಬಗ್ಗೆ ಕಾಳಜಿಮಾಡುವ ಕಾರಣವಿಲ್ಲ, ಸಾಕಷ್ಟು ಹಣ ರಸ್ತೆಗಳ ಬಗ್ಗೆ ಇದೆ ಎಂದು ಹೇಳಿದರು. ಎಲ್ಲೆಲ್ಲಿ ರಸ್ತೆಗಳು ಬೇಕೆಂದು ಕೇಳಿದರೋ ಅಲ್ಲೆಲ್ಲಾ ಕೊಟ್ಟಿದ್ದಾರೆ. ನಮ್ಮ ಹೈದರಾಬಾದ್ ಕರ್ಣಾಟಕದಲ್ಲಿ ಮೊದಲು ಯಾವ ಕಡೆಗೂ ರಸ್ತೆಗಳಿದ್ದಿಲ್ಲ. ಜಿಲ್ಲೆಯಿಂದ ತಾಲ್ಲೂಕಿಗೆ ಹೋಗಬೇಕಾದರೆ ಎಷ್ಟೋ ಕಡೆ ರಸ್ತೆಗಳು ಇದ್ದಿಲ್ಲ. ಈಗ ಕೆಲವು ಕಡೆ ಆಗಿದೆ. ಆದರೆ ಹಳೆಯ ಮೈಸೂರು ಭಾಗಕ್ಕೂ ಅದಕ್ಕೂ ಹೋಲಿಸಿದರೆ ನಮ್ಮ ಕಡೆ ರೂಪಾಯಿನಲ್ಲಿ ಎರಡಾಣೆ ಕೆಲಸವಾಗಿದೆ. ನಾನು ಹಳೆಯ ಮೈಸೂರಿನ ಕೆಲವು ಜಿಲ್ಲೆಗಳಲ್ಲಿ ತಿರುಗಾಡಿದ್ದೇನೆ. ಇಲ್ಲಿಯ ಪರಿಸ್ಥಿತಿಗೂ ನಮ್ಮಲ್ಲಿಯ ಪರಿಸ್ಥಿತಿಗೂ ಬಹಳ ಅಂತರವಿದೆ. ನನ್ನ ಗೆಳೆಯರಾದ ಶ್ರೀ ಮಾರ್ಕ ಎಸ್. ಆರ್. ಪಾಟೀಲ್ ಅವರು ನಮಗೆ ಟಾರ್‌ರಸ್ತೆ ಬೇಕಾಗಿಲ್ಲ, ತಿರುಗಾಡಲಿಕ್ಕೆ ರಸ್ತೆ ಆದರೆ ಸಾಕು ಎಂದು ಹೇಳಿದರು. ಅವರು ಸರಿಯಾಗಿ ಹೇಳಿದ್ದಾರೆ. ನಾನು ಹೇಳುವುದೇನೆಂದರೆ ನಮಗೆ ಮೊದಲು ಜಿಲ್ಲೆಯಿಂದ ತಾಲ್ಲೂಕಿಗೆ ರಸ್ತೆ, ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ರಸ್ತೆ ಮತ್ತು ತಾಲ್ಲೂಕಿನಿಂದ ಹೋಬಳಿಗೆ ಮತ್ತು ಹೋಬಳಿಗಳಿಂದ ಪ್ರಮುಖ ಗ್ರಾಮಗಳಿಗೆ ರಸ್ತೆಗಳು ಬೇಕು.

ನಮ್ಮ ಮಾನ್ಯ ಮಂತ್ರಿಗಳು ಸರ್ಕಾರದಿಂದ ಸಾಕಷ್ಟು ರೊಕ್ಕ ಕೊಡುತ್ತೇವೆ, ಕೆಲಸಮಾಡಿಸುತ್ತೇ

(ಶ್ರೀ ಇ. ಪುಂಡಲೀಕಪ್ಪ)

ವೆಂದು ಹೇಳುತ್ತಾರೆ. ಆದರೆ ಸರ್ವೆಮಾಡುವುದಕ್ಕೆ ಸಿಬ್ಬಂದಿ ಕಡಿಮೆ ಇದೆ. ಅಲ್ಲಿ ಓವರ್‌ಸಿಯರ್‌ಗಳಿಲ್ಲ. ಕೆಲಸ ಬಹಳವಾಗಿದೆ. ಸರ್ಕಾರದವರು ರಸ್ತೆ ಎಲ್ಲಿಗೆ ಬೇಕು ಎಂದು ಕೇಳಿದರೆ ಅಲ್ಲಿಗೆ ಮಂಜೂರು ಮಾಡುತ್ತಾರೆ. ಆದರೆ ಸಿಬ್ಬಂದಿ ಇಲ್ಲದೇ ಅದರಿಂದ ಏನೂ ಉಪಯೋಗ ಬೀಳುವುದಿಲ್ಲ. ಯಾವಾಗ ಹೆಚ್ಚು ರಸ್ತೆ ಕೆಲಸಗಳನ್ನು ಮಂಜೂರು ಮಾಡುತ್ತೀರೋ ಆವಾಗ ಸಂಬಂಧಪಟ್ಟ ಡಿವಿಜನ್‌ಗಳಿಗೆ ಸಿಬ್ಬಂದಿಯನ್ನು ಸಾಕಷ್ಟು ಕೊಡಬೇಕು. ಆಗ ಮಾತ್ರ ಜನತೆಗೆ ಉಪಯೋಗವಾಗುತ್ತದೆ. ಇಲ್ಲದೆ ಇದ್ದರೆ ಕೆಲಸ ಮಂಜೂರಾಗುವುದು ಮಾತ್ರವೇ ವಿನಾ ತೀವ್ರ ಕೆಲಸವಾಗುವುದಿಲ್ಲ. ಕಾಗದದಲ್ಲಿ ಕೆಲಸ ಮಂಜೂರಾಗಿದೆ ಎಂದು ನೋಡಬಹುದು, ಕಾರ್ಯ ಮಾತ್ರ ಆಗುವುದಿಲ್ಲ. ಸರ್ವೆ ಕೆಲಸ ತ್ವರಿತದಿಂದ ಆಗಲಿಕ್ಕೆ ಏರ್ಪಾಡು ಮಾಡಬೇಕು. ಅಲ್ಲದೆ ಮಂತ್ರಿಗಳಿಂದ ಹಿಡಿದು ಕೆಳಹುಟ್ಟದವರೆಗೆ ಎಲ್ಲರೂ ಕೆಲಸ ತೀವ್ರ ಪೂರೈಸಬೇಕೆಂಬ ಉದ್ದೇಶದಿಂದ ಕೂಡಿರಬೇಕು.

ನಾನು ಕೆಲವು ರಸ್ತೆಗಳ ಬಗ್ಗೆ ಹೇಳಬೇಕಾಗಿದೆ. ಈಗಾಗಲೇ ನಮ್ಮಲ್ಲಿ ಕುಷ್ಟಗಿಯಿಂದ ತ್ಯಾದಿಗುಂದಿ, ಕುಷ್ಟಗಿಯಿಂದ ಹನುಮಸಾಗರ ಮತ್ತು ಕುಷ್ಟಗಿಯಿಂದ ಗಜೇಂದ್ರಗಡ ಈ ರಸ್ತೆಗಳ ಕೆಲಸ ಷುರುವಾಗಿದೆ.

ಅಲ್ಲಿ ಕೆಲವು ಕಡೆ ಪೂಲ್ ಕಟ್ಟಲಿಕ್ಕೆ ಹಳ್ಳದೊಳಗಿನ ನೀರನ್ನು ತೆಗೆಯಬೇಕಾಗಿದೆ. ಈ ಕೆಲಸಕ್ಕೆ ಇಂಜಿನ್‌ಗಳಿಲ್ಲ. ನನ್ನಕ್ಷೇತ್ರದೊಳಗೆ ನಾಲ್ಕೈದು ಇಂಜಿನ್‌ಗಳಾದರೂ ಬೇಕು. ಇದರಿಂದ ಕೆಲಸ ಬಹಳ ಹಿಮ್ಮುಖವಾಗತೊಡಗಿದೆ. ಎಲ್ಲೆಲ್ಲಿ ನಾಲ್ಕೈದು ರಸ್ತೆಗಳು ಆಗುತ್ತಿವೆಯೋ ಅಲ್ಲಿ ರೋಲ್ ಮಾಡಲು ರೋಲರ್‌ಸಹ ಬೇಕು. ರೋಲರ್ ಕೊಟ್ಟರೆ ತೀವ್ರಗತಿಯಿಂದ ಕೆಲಸ ಮಾಡಲಿಕ್ಕೆ ಸಾಧ್ಯವಾಗಬಹುದು ಎಂದು ನಾನು ಮಾನ್ಯಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ರೋಲರ್ ಇಲ್ಲದ್ದಕ್ಕೆ ಕುಷ್ಟಗಿಯಿಂದ ಹನುಮಸಾಗರದ ರಸ್ತೆ ಕೆಲಸ ಅರ್ಧದಲ್ಲಿ ನಿಂತು ಹೋಗಿದೆ. ಗಜೇಂದ್ರಗಡ ರಸ್ತೆಯನ್ನು ಹೊಸದಾಗಿ ತೆಗೆದುಕೊಂಡಿದ್ದಾರೆ. ಅದಕ್ಕೆ ರೋಲರ್ ಅಗತ್ಯ. ಇದನ್ನೆಲ್ಲ ಮಾನ್ಯ ಮಂತ್ರಿಗಳು ನೋಡಿಬಂದಿದ್ದಾರೆ. ನಮ್ಮ ಪರಿಸ್ಥಿತಿ ಅವರಿಗೆ ಸಾಕಷ್ಟು ಗೊತ್ತಿದೆ. ಆದುದರಿಂದ ಅವರು ನಮ್ಮಸಲುವಾಗಿ ಹೆಚ್ಚಿನ ಕಾಳಜಿ ತೆಗೆದುಕೊಂಡು ಕೆಲಸಮಾಡುತ್ತಿದ್ದಾರೆ. ಇನ್ನು ಹೆಚ್ಚು ಕಾಳಜಿ ತೆಗೆದುಕೊಳ್ಳಬೇಕೆಂದು ನಾನು ನಮ್ರ ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಪಟ್ಟದಕಲ್‌ನಿಂದ ಹನುಮನಾಳ ಮಾರ್ಗವಾಗಿ ಸೂಟಿಗೆ ಒಂದುರಸ್ತೆ, ದೋಟೀಹಾಳದಿಂದ ಹನಮಸಾಗರಕ್ಕೆ ಒಂದು ರಸ್ತೆ, ಇಲಕಲ್‌ನಿಂದ ಗಜೇಂದ್ರಗಡಕ್ಕೆ ಹನುಮಸಾಗರ ಮಾರ್ಗವಾಗಿ ಒಂದು ರಸ್ತೆ ಹೀಗೆ ಮೂರು ಹೊಸರಸ್ತೆಗಳನ್ನು ಮಂಜೂರು ಮಾಡಿ ಎರಡುರಸ್ತೆಗಳನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ಇಲಕಲ್ ನಿಂದ ಗಜೇಂದ್ರಗಡಕ್ಕೇ ಹನುಮಸಾಗರಮಾರ್ಗವಾಗಿ ಹೋಗುವ ರಸ್ತೆಗೆ ಸರ್ವೆಮಾಡಿ ಮಂಜೂರು ಮಾಡಿದ್ದರೂ ಬಡ್ಜೆಟ್‌ನಲ್ಲಿ ರೊಕ್ಕ ಹಾಕಿಲ್ಲ. ಅದೂ ಕೂಡ ಬಹಳ ಮುಖ್ಯವಾದ ರಸ್ತೆ. ಇಲಕಲ್‌ನಿಂದ ಗಜೇಂದ್ರಗಡಕ್ಕೆ ಹನುಮಸಾಗರ ಮಾರ್ಗವಾಗಿ ರಸ್ತೆ ಹಾಕಲು ತೀವ್ರಅಂದಾಜು ಮಾಡಿಸಬೇಕು ಮತ್ತು ತೀವ್ರಗತಿಯಿಂದ ತೆಗೆದುಕೊಳ್ಳಬೇಕು.

[MR. SPEAKER in the Chair.]

ರಸ್ತೆಗಳ ಕೆಲಸಕ್ಕೆ ನಮ್ಮಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ಕೊಡಬೇಕು. ಈಗ ನಮ್ಮ ಜಿಲ್ಲೆಯಲ್ಲಿ ಒಂದೇ ಡಿವಿಜನ್ ಇದೆ. ಇಡೀ ಒಂದು ಜಿಲ್ಲೆಯ ಕೆಲಸಕಾರ್ಯಗಳನ್ನು ನೋಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಎಷ್ಟೋ ಕೆಲಸ ಕಾರ್ಯಗಳಿಗೆ ತೊಂದರೆಯಾಗಲಿಕ್ಕೆ ಹತ್ತಿದೆ. ಇದರ ಬಗ್ಗೆ ಈಗಾಗಲೇ ಮಂತ್ರಿಗಳು ಪ್ರಯತ್ನಮಾಡುತ್ತಿರಬಹುದೆಂಬ ವಿಶ್ವಾಸವಿದೆ. ನಮ್ಮ ಜಿಲ್ಲೆಗೆ ಇನ್ನೂ ಒಂದು ಡಿವಿಜನ್‌ಬೇಕು. ಕೊಪ್ಪಳ ಅಥವಾ ಸಿಂಧನೂರು ಎಲ್ಲಿಯಾದರೂ ಮತ್ತೊಂದು ಡಿವಿಜನ್ ಕೊಡಬೇಕು. ಅಲ್ಲಿಮತ್ತೊಂದು ಡಿವಿಜನ್ ತೆರೆದು ಕೆಲಸಕಾರ್ಯಗಳು ತ್ವರಿತವಾಗಿ ನಡೆಯಲಿಕ್ಕೆ ಸಹಾಯಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯ ವಿಷಯವೆಂದರೆ, ನಮ್ಮಲ್ಲಿ ಚಿಕ್ಕನೀರಾವರಿ ಯೋಜನೆಗಳು ಕಡಮೆ. ತತ್ರಾಪಿ ನನ್ನಕ್ಷೇತ್ರದಲ್ಲಿ ಇವು ತೀರಾಕಡಮೆ. ನಮ್ಮ ಪ್ರದೇಶಕ್ಕೆ ಮುನಿರಾಬಾದಿನ ಕಡೆಯಿಂದ ನೀರು ಬರಲಿಕ್ಕೆ ಬಹಳ ಎತ್ತರ ಮತ್ತು ದೂರವಾಯಿತು. ಮೇಲಾಗಿ ನನ್ನ ಕ್ಷೇತ್ರಕ್ಕೆ ಆ ಪ್ರದೇಶದ ನೀರಿನ ಸಂಬಂಧವೇ ಇಲ್ಲ. ಆದರೆ ಅಲ್ಲಲ್ಲೇ ನಮ್ಮಕಡೆ ಕೆಲವು ಸಣ್ಣಪುಟ್ಟ ಕೆರೆಗಳಿರುತ್ತವೆ. ಆದರೆ ನನ್ನಕ್ಷೇತ್ರದಲ್ಲಿ ಕೆಲವುಹಳ್ಳಗಳಿವೆ. ಅವುಗಳಲ್ಲಿ ಕೆಲವು 12ತಿಂಗಳೂ ನೀರುಹರಿಯುವಂಥ ಹಳ್ಳಗಳು ಇವೆ. ಇನ್ನು ಕೆಲವು ಹಳ್ಳಗಳಲ್ಲಿ 8-9 ತಿಂಗಳು ಮಾತ್ರ ನೀರು ಹರಿಯುವಂಥ ಹಳ್ಳಗಳೂ ಸಹ ಇರುತ್ತವೆ. ಮೊನ್ನೆ ನಮ್ಮ ಮಂತ್ರಿಗಳು ಆ ಪ್ರದೇಶಕ್ಕೆಬಂದಿದ್ದಾಗ ಹನುಮಸಾಗರಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ಸಿಕ್ಕಿದ ಅನೇಕ ಹಳ್ಳಗಳ ವಿಚಾರ ಅವರ ಗಮನದಲ್ಲಿರುವುದೆಂದು ನಾನು ತಿಳಿಯುತ್ತೇನೆ. ಆಗ ಮಾನ್ಯಮಂತ್ರಿಗಳೇ ನನ್ನಲ್ಲಿ "ಏನ್ರಿ ನಿಮ್ಮಲ್ಲಿ ಇಂಥ ಒಳ್ಳೆಯಹಳ್ಳಗಳಿದ್ದರೂ ನೀವೇಕೆ ಪ್ರಯೋಜನ ಪಡೆಯಬಾರದೆಂದು" ಕೇಳಿದ್ದರು. ಆದರೆ ಹಾಗೆ ಬಾಯಿಂದ ಅವರು ಅಷ್ಟುವ್ಯಕ್ತ ಪಡಿಸಿದರೆ ಸಾಲದು. ಅಲ್ಲಿಗೆ ನಮ್ಮ ತೊಂದರೆಗಳೆಲ್ಲ ಮುಗಿದಂತಾಗಲಿಲ್ಲ. ಮಾನ್ಯಮಂತ್ರಿಗಳು ಉದಾರ ಮನಸ್ಸು ಮಾಡಿ ನಮ್ಮಕ್ಷೇತ್ರಕ್ಕೆ ಒಬ್ಬ ಸ್ಪೆಷಲ್ ಸರ್ವೆಯರನ್ನು ನೇಮಿಸಿ ನಮ್ಮಕ್ಷೇತ್ರದಲ್ಲಿ ಹರಿಯುತ್ತಿರುವ ಎಲ್ಲ ಹಳ್ಳಗಳನ್ನೂ ಸರ್ವೆ ಮಾಡಿಸಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ನಮ್ಮ ಪ್ರದೇಶದಲ್ಲೆಲ್ಲಾ ಅಡ್ಡಾಡಿ ನೋಡಿರುವುದರಿಂದ ಅವರಿಗೆ ನಮ್ಮಲ್ಲಿ ಎಲ್ಲೆಲ್ಲಿ ಕೆರೆ, ಭಾವಿಗಳನ್ನು ಮಾಡಿಸಬೇಕೆಂಬ ಮಾಹಿತಿ ಚೆನ್ನಾಗಿ ಗೊತ್ತಾಗಿದೆ. ಇನ್ನು ಮುಂದಿನ ಮಳೆಗಾಲ ಪ್ರಾರಂಭವಾಗುವುದಕ್ಕೆ 3-4ತಿಂಗಳಿರುವಾಗಲೇ ಅಲ್ಲಿಯ ಸರ್ವೇಕೆಲಸಗಳನ್ನು ತೀವ್ರವಾಗಿ ಕೈಗೊಳ್ಳಬೇಕೆಂಬುದಾಗಿ ನಾನು ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ನಮ್ಮ ಕ್ಷೇತ್ರದಲ್ಲಿ ಸಣ್ಣಕೆರೆಗಳೂ ಸಹ ಬಹಳಕಡಮೆ. ಮೂರುನಾಲ್ಕುಇದ್ದರೆ ಹೆಚ್ಚಾಯಿತು. ಇಲ್ಲಿಮುಖ್ಯವಾದ ಮೂರು ಹಳ್ಳಗಳಿವೆ. ಆ ಹಳ್ಳಗಳುಯಾವುವೆಂದರೆ ಮಾಲಗಿತ್ತಿ ಹಳ್ಳ, ಬಿಜಕಲ್ ಹಳ್ಳ ಮತ್ತು ಮೋಣಿಥಾಳ್ ಈ ಮೂರಕ್ಕೆ ಕೆರೆಗಳನ್ನು ನಿರ್ಮಾಣ ಮಾಡಬೇಕಾಗಿದೆ. ಇದಲ್ಲದೆ ಕೆರೆಗಳಿಗೆ ಈ ಗಾಗಲೇ ಸರ್ಕಾರಿ ಮಂಜೂರಾತಿ ದೊರೆತಿದೆ. ಆದರೆ ಅಲ್ಲಿ ಕೆಲಸ ಚುರುಕಾಗಿ ನಡೆಯುತ್ತಿಲ್ಲ. ಹನುಮನಗುಡಿ ಕೆರೆಗೆ ಕೆಳಗೆ 300-400ಎಕರೆ ತರಿಸಾಗುವಳಿಗೆ ಬರುತ್ತೆಂದು ಹಿರಿಯರು ಹೇಳುತ್ತಿದ್ದರು. ಆದರೆ ಅಲ್ಲಿ

ಇನ್ನೂ ಸರ್ವೆ ಆಗಿಲ್ಲ. ಅದರೆ ಕೆಲಸವನ್ನು ಸರ್ಕಾರದವರು ಅತಿ ತೀವ್ರವಾಗಿ ಕೈಗೊಳ್ಳಲೇಬೇಕಾಗಿದೆ. ಇದಲ್ಲದೆ ಅಚನೂರು ಮತ್ತು ಕಾಟಾಪುರ ಕೆರೆಗಳನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕಾಗಿದೆ. ಈ ಪ್ರದೇಶಕ್ಕೆತುಂಗಭದ್ರ ಪ್ರಾಜೆಕ್ಟಿನ ನೀರು ಬರುವುದಿಲ್ಲ. ಆದ್ದರಿಂದ ಈ ಪ್ರದೇಶಕ್ಕೆ ಸರ್ಕಾರದವರು ಹೆಚ್ಚಿನ ಲಕ್ಷಕೊಡಬೇಕಾಗಿರುತ್ತೆಂದು ಹೇಳುತ್ತಿದ್ದೇನೆ. ಇನ್ನು ಕನಕನ ನಾಲಾ ವಿಚಾರದಲ್ಲಿ ಹೇಳಬೇಕೆಂದರೆ ಆ ಕೆಲಸವನ್ನೇನೋ ಮಂತ್ರಿಗಳು ಉದ್ಘಾಟನೆ ಮಾಡಿ ಬಂದರು. ಆದರೆ ಅಲ್ಲಿ ಈ ಹೊತ್ತಿನವರೆಗೆ ಏನೂ ಕೆಲಸವಾಗಿಲ್ಲ. ಈ ಕೆಲಸದ ಕಡೆ ಮಾನ್ಯ ಮಂತ್ರಿಗಳು ತೀವ್ರ ಗಮನ ಕೊಡ ಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆ ನೀರಾವರಿ ಕಾಂಗಾರಿಗಳು ಬಹಳ ಕಡಮೆ. ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿ ಕೆರೆಗಳಾಗುತ್ತೆಂಬ ಬಗ್ಗೆ ಹಿಂದಿನ ಹೈದ್ರಾಬಾದ್ ಸರ್ಕಾರದವರು ಒಂದು ಸಮಗ್ರ ಸರ್ವೆ ನಡೆಸಿದ್ದರೆಂಬುದು ಗೊತ್ತಿತ್ತು. ಆ ಪೈಕಿ ಹುಲಿಯಾಪುರ ಎಂಬ ಕೆರೆ ಆದರೆ ಅಲ್ಲಿ ಸಾವಿರಾರು ಎಕರೆ ತರೀ ಅಚ್ಚುಕಟ್ಟಾಗುತ್ತೆಂದು ಹೇಳುತ್ತಿದ್ದರು. ಆ ಯೋಜನೆ ಸಹ ಮುಂದುವರಿಯದೆ ಇನ್ನೂ ಹಾಗೆಯೇ ಉಳಿದಿದೆ. ಈ ಯೋಜನೆಯನ್ನು ಸರ್ಕಾರದವರು ತೀವ್ರವಾಗಿ ಕೈಗೆ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಮೂರನೆಯದಾಗಿ ಹೈದ್ರಾಬಾದ್ ಕರ್ಣಾಟಕ ಪ್ರದೇಶದಲ್ಲಿ ಡಿಸೇಲ್ ಇಂಜಿನ್‌ಗಳ ಪವರ್ ಹೌಸಿನಿಂದ ಪವರನ್ನು ತಯಾರಿಸಿ ಮುಖ್ಯ ಮುಖ್ಯ ನಗರಗಳಿಗೆ ಸರಬರಾಯಿ ಮಾಡಬೇಕೆಂಬ ಒಂದು ಯೋಜನೆ ಮಂಜೂರಾಗಿತ್ತು. 5 ನಗರಗಳಿಗೆ ಒಂದೊಂದು ಪವರ್ ಹೌಸ್‌ನಂತೆ ಮಂಜೂರು ಮಾಡಲಾಗಿತ್ತು. ಕೆಲವು ಪ್ರಾರಂಭವಾಗಿವೆ. ಕುಪ್ಪಗಿಗೆ ಸಾಮಾನುಗಳು ಮಾತ್ರ ಬಂದು ಬಿದ್ದಿವೆ. ಆದರೆ ಮಂತ್ರಿಗಳ ನಿಗಾ ಕಡಮೆಯಾದುದರಿಂದಲೋ ಏನೋ ಆ ಕೆಲಸಗಳೊಂದೂ ಚುರುಕಾಗಿ ನಡೆಯುತ್ತಿಲ್ಲ. ನಾವು ಅನೇಕ ವೇಳೆ ಅಲ್ಲಿನ ಅಧಿಕಾರಿಗಳಿಗೆ ತಿಳಿಸಿದರೂ ಸಾಮಾನುಗಳಿಲ್ಲ, ನಾವೇನು ಮಾಡೋಣವೆಂಬುದಾಗಿ ಹೇಳುತ್ತ ನಿಧಾನ ಮಾಡುತ್ತಿದ್ದಾರೆ. ಈಗ ಹಾಲಿ ಮಂಜೂರಾಗಿರತಕ್ಕ ಕೆಲಸಗಳೇನಿವೆ ಅವುಗಳ ಬಗ್ಗೆ ಸರ್ಕಾರದವರೂ-ಅಂದರೆ ಮಂತ್ರಿಗಳು ಮತ್ತು ಕೆಳಗಿನ ಅಧಿಕಾರಿಗಳೂ ತೀವ್ರ ಗಮನ ಕೊಡಬೇಕೆಂಬುದಾಗಿ ನಾನೀಸಂದರ್ಭದಲ್ಲಿ ಅಧ್ಯಕ್ಷರ ಮೂಲಕ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಲಿಂಗಸೂಗೂರು ತಾಲ್ಲೂಕಿನಲ್ಲಿ ಕೆಲವು ಕೆರೆಗಳ ಸರ್ವೆ ಆಗಿದೆ ಭೂಮಿ ಸಾಗಾಗಲಿಕ್ಕೆ ಅಲ್ಲಿ ಈ ಪ್ರಾಜೆಕ್ಟ್ ಆದರೆ 600 ಎಕರೆ ಅವುಗಳಪೈಕಿ ಮೂಡಲ್ ದಿನ್ನಿ ಪ್ರಾಜೆಕ್ಟ್ ಸಹಾ ಅವಕಾಶವಿದೆಯೆಂದು ತಿಳಿ ಬಂದಿದೆ. ಇದಕ್ಕೆ ಸರ್ಕಾರದವರು ಸ್ಪೆಷಲ್ ನಿಗಾ ಕೊಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಬೀದರ್, ರಾಯಚೂರು, ಗುಲ್ಬರ್ಗ—ಈ ಮೂರು ಜಿಲ್ಲೆಗಳಿಗೆ ಸರ್ಕಾರದವರು ಹೆಚ್ಚಿನ ಲಕ್ಷಕೊಡಬೇಕಾದ್ದು ಅತಿ ಜರೂರಾಗಿದೆ.

ಇನ್ನು ಈ ಪ್ರದೇಶಗಳಲ್ಲಿ ಸರಿಯಾದ ರಸ್ತೆಗಳಿಲ್ಲ. ಈಗಾಗಲೇ ಕೆಲವು ರಸ್ತೆಗಳನ್ನು ಮಾಡಿಸಲಿಕ್ಕೆ ಹತ್ತಿದ್ದಾರೆ. ಆದರೆ ಅಷ್ಟೇಸಾಲದು. ಆ ಪ್ರದೇಶದಲ್ಲಿ ಈ ರಸ್ತೆಗಳೆಂದರೇನೆಂಬುದನ್ನೇ ಕಂಡಿಲ್ಲದ ಜನರು ಇನ್ನೂ ಇದ್ದಾರೆ. ಸರ್ಕಾರದವರು ಎಲ್ಲೋ ಅಲ್ಲೊಂದು ಕಡೆ ಇಲ್ಲೊಂದು ಕಡೆ ಮಾಡಿಸಿರುವುದರಿಂದ ಅವರ ಮನಸ್ಸಿಗೆ ರಸ್ತೆಗಳನ್ನು ಮಾಡಿಸಿದ್ದೇವಲ್ಲ ಅಂತ ಅನ್ನಿಸಬಹುದು. ನಮ್ಮ ಹಣಕಾಸಿನ ಮಂತ್ರಿಗಳು ಆ ಕಡೆ ಬಂದು ಅಲ್ಲೆಲ್ಲಾ ಅಡ್ಡಾಡಿ ಬಂದಿದ್ದಾರೆ. ಅವರಿಗೂ ಸಹ ಆ ನಮ್ಮ ಪ್ರದೇಶದ ತೊಂದರೆಗಳೆಷ್ಟಿವೆಯೆಂಬುದು ಚೆನ್ನಾಗಿ ಮನವರಿಕೆಯಾಗಿದೆ. ಅ ಕಾರಣದಿಂದ ಈ ದಿಶೆಯಲ್ಲಿ ಸರ್ಕಾರದವರು ಆ ಪ್ರದೇಶಕ್ಕೆ ಸ್ವಲ್ಪ ಹೆಚ್ಚಿನ ಸೌಲತ್ತುಗಳನ್ನು ಕೊಡಬೇಕಾದ್ದು ಅಗತ್ಯ. ಇನ್ನು ನಾಲ್ಕಾರು ವರ್ಷಗಳ ಕಾಲದಲ್ಲೇ ಆ ನಮ್ಮ ಪ್ರದೇಶವೂ ಸಹ ರಾಜ್ಯದ ಇತರ ಪ್ರದೇಶಗಳಂತೆ ಅನುಕೂಲಹೊಂದಬೇಕಾಗಿದೆ. ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ವಿಚಾರಕ್ಕೆ ಸ್ವಲ್ಪ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ನಾನು ಸಭಾಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಜಿ. ಎಸ್. ಬೊಮ್ಮೇಗೌಡ.—ಮಾನ್ಯ ಸಭಾಪತಿಗಳೇ, ಈಗ ನಮ್ಮಮುಂದಿರತಕ್ಕಂಥ ಲೋಕೋಪಯೋಗಿ ಖಾತೆಯ ಬೇಡಿಕೆಗಳ ಮೇಲೆ ನಾವು ಕೊಡತಕ್ಕ ಸಲಹೆಗಳನ್ನು ಮಾನ್ಯಸಚಿವರು ಸಾವಧಾನದಿಂದ ಕೇಳಿ ಅವುಗಳನ್ನು ತಮ್ಮಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂಬುದು ಮೊದಲನೆಯ ವಿಚಾರ.

ನಮ್ಮ ಮೈಸೂರು ಲೋಕೋಪಯೋಗಿ ಕೆಲಸ ಕಾರ್ಯಗಳ ವಿಚಾರದಲ್ಲಿ ಇಡೀ ಭಾರತದೇಶಕ್ಕೆ ಮಾತ್ರವಲ್ಲ, ವಿಶ್ವಾದ್ಯಂತವೂ ಕೀರ್ತಿಗಳಿಸಬೇಕಾಗಿದ್ದರೆ ಈ ನಮ್ಮ ಇಂಥ ಕೀರ್ತಿಗೆ ಯಾರು ಈ ದಿವಸವಿನ್ನೂ ಜೀವಂತರಾಗಿದ್ದಾರೋ ಆ ಸರ್ ಎಂ. ವಿಶ್ವೇಶ್ವರಯ್ಯನವರೇ ಮುಖ್ಯಕಾರಣರೆಂದು ಹೇಳುವುದೂ ಸಹ ನಮಗೆ ಒಂದು ಹೆಮ್ಮೆಯ ವಿಚಾರ. ಈ ಅಂಶವನ್ನೀಗ ನಾನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಹೆಚ್ಚಿನವಿಸ್ತಾರವಾಗಿರುವ ಈ ದೇಶದಲ್ಲಿ ಹೆಚ್ಚಿಗೆ ಈ ಕೆಲಸ ಕಾರ್ಯಗಳು ಹೆಚ್ಚು ಹೆಚ್ಚಾಗಿ ನಡೆಯಬೇಕೆಂದು ಹೇಳುತ್ತಿರುವ ಕಾಲದಲ್ಲಿ ಅಲ್ಲಿ ಇಲ್ಲಿ ಅಲ್ಪ ಸ್ವಲ್ಪ ಲೋಪದೋಷಗಳು ಕಂಡುಬಂದಕಡೆ ಅವುಗಳನ್ನು ಸರಿಪಡಿಸಲಿ, ಇಲ್ಲಿಯವರೆಗೂ ದೇಶಗಳಿಸಿರುವ ಕೀರ್ತಿಗೆ ಧಕ್ಕೆಬಾರದಿರಲಿ, ಆ ರೀತಿ ನಮ್ಮಕೆಲಸಗಳು ಮುಂದುವರಿಯುವಂತಾಗಲೆಂಬ ಸದುದ್ದೇಶದಿಂದ ಕೊಡತಕ್ಕ ಸಲಹೆಗಳಿಗೆ ಮಾನ್ಯ ಮಂತ್ರಿಗಳು ರಾಜಕೀಯ ಬಣ್ಣಹಚ್ಚದೆ, ಇವುಗಳನ್ನು ಆ ಒಂದು ರಾಜಕೀಯದ ದೃಷ್ಟಿಯಿಂದ ನೋಡದೆ ನಾನೀಗ ಕೊಡತಕ್ಕ ಸಲಹೆಗಳನ್ನು ಮಾನ್ಯಮಂತ್ರಿಗಳು ಗಮನಿಸಬೇಕೆಂಬುದಾಗಿ ಅವನ್ನು ನಾನು ಅಧ್ಯಕ್ಷರ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

6-00 P.M.

ಇಲಾಖೆಯಲ್ಲಿ ಕೆಲಸಗಳು ಬಹುಮಟ್ಟಿಗೆ ನಿಧಾನವಾಗುತ್ತಿವೆಯೆಂಬುದಾಗಿ ನನ್ನಸ್ನೇಹಿತರು ಹೇಳುತ್ತಿದ್ದಾರೆ. ನಾವು ಈ ವಿಷಯವನ್ನು ಹೇಳುವಾಗ ಮಾನ್ಯ ಸಚಿವರು ಯಾವುದಾದರೂ ಒಂದು ಉದಾಹರಣೆಯನ್ನು ತೋರಿಸಿ ಎಂದು ಹೇಳುವಂತೆ ನಾನು ಅಷ್ಟು ಸಂಕುಚಿತವಾಗಿ ಹೋಗಲು ಇಷ್ಟಪಡುವುದಿಲ್ಲ. ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವವರು, ಯಾವ ಯಾವ ಅಂದಾಜು, ಯಾವ ಪ್ರಾಂತದ್ದು, ಎಷ್ಟು ದಿವಸಗಳಾಯಿತು, ಏತಕ್ಕೆ ಮಂಜೂರಾತಿ ಆಗದೆ ಇರುವುದು ಎನ್ನುವುದನ್ನು ತಿಳಿದುಕೊಳ್ಳುವ ಅವಕಾಶದಿಂದ ಕೇಳಿದರೆ ಈ ರೀತಿಯಾದ "Sweeping remarks" ನಮಗೆ ಬೇಕಾಗಿಲ್ಲ ಎಂದು ಒಂದೇ ಮಾತಿನಲ್ಲಿ ಹೇಳುತ್ತಾರೆ. ತಾವುಯಾವುದೇ ಒಂದು

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಕಾನೂನನ್ನು ಮಾಡುವಾಗ ಅಂದರಂತೆ ಅಂದಾಜುಗಳು ತಯಾರಾಗುವಾಗ ಅವು ಒಂದು ವರ್ಷಕ್ಕೆ ಇಲ್ಲವೇ ಒಂದೂವರೆ ವರ್ಷಕ್ಕೇ ಇಲ್ಲವೇ ಎರಡು ವರ್ಷಗಳೊಳಗಾಗಿ ಎಂದು ಒಂದು ಕಾಲವನ್ನು ಗೊತ್ತು ಮಾಡುತ್ತಿಲ್ಲ. ತಾವು ಎಷ್ಟುವೇಗದಲ್ಲಿ ಹೋಗುತ್ತಿದ್ದೀಗೋ ಆ ರೀತಿಯಲ್ಲಿ ಆರು ತಿಂಗಳಿನೊಳಗಾಗಿ ಒಂದು ಅಂದಾಜು ಒಂದೇ ಸಾರಿ ಮಂಜೂರಾತಿಯಾಗುವುದಿಲ್ಲ. ಒಂದು ಸಾರಿ ಒಂದು ಆಫೀಸು, ಮತ್ತೊಂದು ಆಫೀಸಿನಲ್ಲಿ ಹೋಗಿ ಕ್ವೈರಿ ಹಾಕಿ ಅಡ್ಡಿಯಾಗಿ ವಾಪಸ್ಸು ಬರುತ್ತದೆ. ಈ ರೀತಿಯಾಗಿ ಒಂದೇ ಸಾರಿ ಅಂದಾಜುಗಳು ಮಂಜೂರಾಗದೆ ಹತ್ತಾರು ಸಾರಿ ಕ್ವೈರಿಗಳಾಗಿ ವಾಪಸು ಬರುತ್ತಿವೆ. ಕ್ವೈರಿಗಳನ್ನೆಲ್ಲಾ ಒಂದೇ ಸಾರಿ ಹಾಕಿಬಿಟ್ಟು ಆದಷ್ಟು ಸಮಂಜಸವಾಗಿ ಉತ್ತರವನ್ನು ಕೊಟ್ಟು ಮಂಜೂರಾತಿಗೆ ಅವಕಾಶವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದರೆ ನಾವು ಕೊಡುವ ಹಣಕಾಸಿನ ಸದ್ವಿನಿಯೋಗವಾಗಲು ಅವಕಾಶವಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಅಂದಾಜುಗಳನ್ನು ಮಂಜೂರುಮಾಡಿ ಸಾಮಾನ್ಯ ಜನರಿಗೆ ಅನುಕೂಲ ಮಾಡಿ ಕೊಡುವ ವ್ಯವಸ್ಥೆಯನ್ನು ಸರಕಾರದವರು ಮಾಡಬೇಕೆಂದು ಹೇಳುತ್ತೇನೆ.

ಉದಾಹರಣೆಗಾಗಿ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಪಾವನಿ ನದಿ ಹರಿಯುತ್ತದೆ. ಈ ನದಿಗೆ ಸಂಬಂಧಪಟ್ಟಂತೆ ಕೆಲವು ಕಾಮಗಾರಿಗಳಾಗಬೇಕೆಂದು ಹೋದ ಸಾರಿ ಆಯವ್ಯಯದ ಚರ್ಚೆಯಲ್ಲಿ ನಾನು ಭಾಗವಹಿಸಿ ಹೇಳಿದಾಗ ಸರಕಾರ ಒಂದೇ ಒಂದು ವಿಚಾರದ ಬಗ್ಗೆ ಉತ್ತರ ಕೊಟ್ಟಿದ್ದರು. ಹೊನ್ನೆಮರಡು ಯೋಜನೆ ಕೇವಲ ಒಂದು ತಿಂಗಳಿನಲ್ಲಿಯೇ ಮಂಜೂರಾತಿಯನ್ನು ಚೀಫ್ ಇಂಜನೀಯರವರು ಕೊಡುತ್ತಾರೆಂದು ಉತ್ತರ ಕೊಟ್ಟಿದ್ದರೂ ಇವೊತ್ತಿನ ವರೆಗೂ ಪೂರೈಸಲಿಲ್ಲ. ಲೋಕಪಾವನಿಗೆ ಸಂಬಂಧಪಟ್ಟ ಹಾಗೆ ಸರ್ವೆಯಾಗಬೇಕು. ಈಗಾಗಲೇ ಕಾಮಗಾರಿಗಳು ಹೆಚ್ಚಾಗಿ ನೀರು ಸಾಕಾದಷ್ಟು ಸಿಕುತ್ತಿಲ್ಲ, ಇಲಾಖೆಯವರು ಇದಕ್ಕೋಸ್ಕರ ಪರಿಶೀಲನೆ ಮಾಡುತ್ತಾರೆಂದು ಮಾನ್ಯ ಸಚಿವರು ಹೇಳಿದರು. ಈ ಬಗ್ಗೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದಕ್ಕೆ ಒಂದು ಉತ್ತರ ಬಂದಿದೆ. ಹಿಂದೆಯೇ ಇದು ಆಗಬೇಕಾಗಿತ್ತು. ಒಂದು ಚದುರ ಮೈಲಿಗೆ ಇಷ್ಟು ಯೂನಿಟ್ಟು ನೀರು ಬರುತ್ತದೆ ದುಡ್ಡನ್ನು ಕೆರೆಗಳಿಗಾಗಿ ಕೊಡುತ್ತಿದ್ದೀರಿ ಸಪ್ಲೈ ಸ್ಟೇಟುಮೆಂಟು ಅಚ್ಚುಕಟ್ಟು ಸ್ಟೇಟುಮೆಂಟು ಎಲ್ಲ ಇಲಾಖೆಯಲ್ಲಿದೆ. ಅದರಂತೆ 35 ಯೂನಿಟ್ಟು, 40 ಯೂನಿಟ್ಟು, 45 ಯೂನಿಟ್ಟು ಬರುವಂತಹ ಅಂದಾಜನ್ನು ಮಾಡಿದ್ದಾರೆ. ಚದುರಮೈಲಿಗೆ 25 ಯೂನಿಟ್ಟುಗಳಷ್ಟು ಹರಿಯುತ್ತಿರುವುದರಿಂದ ಈ ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಹಿಂದೆ ಕೊಟ್ಟಿರತಕ್ಕ ಅಂದಾಜುಗಳಲ್ಲಿ ಒಂದು ಎಕರೆಗೆ ಎಷ್ಟು ನೀರು ಬರಬಹುದು ಎನ್ನುವ ಅಂದಾಜು, ಸಪ್ಲೈ ಸ್ಟೇಟುಮೆಂಟು ಎಲ್ಲ ಆಗಿರುವಾಗ ಮತ್ತು ಈ ಅಂದಾಜಿನಮೇಲೆ ಲೆಕ್ಕಪತ್ರಗಳಿರುವಾಗ ಈ ಕಾರ್ಯಗಳನ್ನು ಮಾಡಲು ಅಡ್ಡಿಯೇನು? ಇದನ್ನು ಪರಿಶೀಲಿಸಬೇಕೆಂದು ಸರಕಾರದಲ್ಲಿ ಪ್ರಾರ್ಥನೆಮಾಡುತ್ತೇನೆ. ಮಂಡ್ಯ ಜಿಲ್ಲೆಯಲ್ಲಿರುವ ಜವನಹಳ್ಳಿ ಕೆಲಸದಬಗ್ಗೆ ಸರಕಾರಕ್ಕೆ ಬರೆದು ಹಿಂದೆಯೇ ಮಂಜೂರಾಗಿತ್ತು. ಮಂಜೂರಾತಿ ಬಂದನಂತರ ಟೆಂಡರನ್ನು ಕರೆದು ಆ ಟೆಂಡರನ್ನೂ ಒಪ್ಪುವ ಸಮಯದಲ್ಲ ನಿಂತು ಹೋಯಿತು. ಲೋಕಪಾವನಿ ಪ್ರದೇಶದಲ್ಲಿ ಹಿಂದೆ ಒಂದು ಅಂದಾಜಿನಮೇಲೆ ಸಪ್ಲೈ ಸ್ಟೇಟುಮೆಂಟು ಇವೆಲ್ಲ ಆಗಿದ್ದು, ಇಲ್ಲಿ ಎಷ್ಟು ನೀರು ಬರಬಹುದು ಎನ್ನುವುದೂ ಅಂದಾಜಾಗಿತ್ತು. ಆ ಕೆಲಸ ಇನ್ನೂ ನಡೆದಿಲ್ಲ. ಇತರಕಡೆಯೂ ಹೀಗೆ ಕೆಲಸಗಳನ್ನು ತೆಗೆದುಕೊಳ್ಳಬಹುದು. ಈ ವಿಧದಲ್ಲಿ ನಾಗಮಂಗಲ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲು ಪೂರ್ಣ ಅವಕಾಶವಿದೆ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲ ಬರತಕ್ಕ ನೀರು ಒಂದುಕಡೆ ಷಿಂಷಾ ಮತ್ತು ಒಂದುಕಡೆ ಕಾವೇರಿಗೆ ಹೋಗುವ Seapage Water ಇದೆ. ಈ ರಿತೀ ಹೋಗುವುದನ್ನು ತಡೆಗಟ್ಟಬೇಕು. ಈ ನೀರನ್ನು ತೋಡಿಕೊಂಡು ಪಿಕ್‌ಅಪ್‌ಗಳನ್ನೂ ಮಾಡಿಕೊಂಡು ಈ ನೀರಿನ ಸದ್ವಿನಿಯೋಗ ಮಾಡಿಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲಿನ ಜವಾಬ್ದಾರಿಯನ್ನು ಹೊತ್ತಿರತಕ್ಕ ಚೀಫ್ ಇಂಜನೀಯರವರು ಮುನೀರಾಬಾದಿನಲ್ಲಿರುತ್ತಾರೆ. ವಿಶ್ವೇಶ್ವರಯ್ಯ ನಾಲಾದವರ ವಿಚಾರಗಳನ್ನು ತಿಳಿಸುವುದಕ್ಕಾಗಿ ಮುನೀರಾಬಾದಿಗೆ ಹೋಗಲು ಬಹುದೂರವಾಗುತ್ತದೆ. ಇದರಿಂದ ವಿಶ್ವೇಶ್ವರಯ್ಯ ನಾಲಾದ ಚೀಫ್ ಇಂಜನೀಯರವರನ್ನು ಬೆಂಗಳೂರಿನಲ್ಲಿಯೇ ಇಡುವುದು ಅಥವಾ ಈ ಆಡಳಿತವನ್ನು ಬೆಂಗಳೂರಿನಲ್ಲಿನ ಇನ್ನೊಬ್ಬ ಇಂಜನೀಯರವರಿಗೆ ವಹಿಸಿ ಇಲ್ಲಿನ ಜನಗಳ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಣ್ಣ ಸಂಸ್ಥೆಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆಗತಕ್ಕ ಕೆಲಸಗಳಿಗಾಗಿ ಲೋಕಲ್ effort ಗಳಿಂದ ಕಾಂಟ್ರಿಬ್ಯೂಷನ್ ಎಷ್ಟು ಬರಬಹುದು ಎನ್ನುವುದನ್ನು ನೋಡಿ ಯಾವುದಾದರೂ ಹಾಸ್ಪಲಿಗೋ ಒಂದು ಸ್ಕೂಲಿಗೋ ಲೋಕಲ್ ಅಥಾರಿಟಿಯವರ ಕಾಂಟ್ರಿಬ್ಯೂಷನ್ನನ್ನು ಕೊಡುವಂತೆ ಇಲ್ಲಿಯೂ ಅಂತಹ ಕೆಲಸಗಳನ್ನು ತೆಗೆದುಕೊಳ್ಳಬಹುದು. ದುಡ್ಡು ಕೊಟ್ಟು ಕೆಲಸಗಳನ್ನು ತೆಗೆದುಕೊಳ್ಳುವಾಗ ಇದರ ಬಗ್ಗೆಯೂ ಯೋಚನೆ ಮಾಡಬಹುದು. ನಮ್ಮಲ್ಲಿರುವ ಅಪಾರ ಜನಸಂಖ್ಯೆಯನ್ನು ನಾವು ಉಪಯೋಗಿಸಿಕೊಳ್ಳಬೇಕು. ಸಣ್ಣ ಸಂಸ್ಥೆಗಳಿಗಾಗಿ, ಗ್ರಾಮಪಂಚಾಯ್ತಿಗಳವರು ಅವರು ಕೊಡುವ ಕಾಂಟ್ರಿಬ್ಯೂಷನ್ನಿನಂತೆ ನಮ್ಮಲ್ಲಿನ ಜನಸಂಖ್ಯೆಯನ್ನುಪಯೋಗಿಸಿ ಇಂತಹ ಒಂದು ಕಟ್ಟಡ ಕಟ್ಟುವಾಗ ಕೆಲಸಗಳನ್ನು ಮಾಡಬಹುದು. ಕೆಲವುಕಡೆಗಳಲ್ಲಿ ಪಂಚಾಯಿತಿಗಳಿಗೆ ತಾವೇ ಕಟ್ಟಲು ಸಾಧ್ಯವಿರುವುದಿಲ್ಲ. ದುಡ್ಡನ್ನೇ ಕೊಡಬೇಕು ಎನ್ನುವುದಕ್ಕಿಂತ ಯಾವುದಾದರೂ ಒಂದು ಕೆಲಸವನ್ನು ಗ್ರಾಮಪಂಚಾಯಿತಿಗಳಿಗಾಗಿ, ಮನೆಗಳಿಗಾಗಿ ಕೊಡುವಾಗ ಜನಗಳ ಕಾಂಟ್ರಿಬ್ಯೂಷನ್ನನ್ನು ಉಪಯೋಗಮಾಡಬೇಕು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಪಿ. ಡಬ್ಲ್ಯು. ಡಿ. ಯವರು ಈ ಕೆಲಸವನ್ನು ಮಾಡುವುದಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನಾನು ಹೇಳುವುದು ತಾವು ಒಂದು ಗ್ರಾಮದಲ್ಲಿ ಸ್ಕೂಲಿನ ಕಟ್ಟಡವನ್ನು ಬೇಕೆಂದು ಕಟ್ಟಬೇಕಾದರೆ 3000 ರೂಪಾಯಿ ವೆಚ್ಚ ಬರುತ್ತದೆ. ಅದಕ್ಕೆ ನಿಮಗಾಗಿ ಕಾಂಟ್ರಿಬ್ಯೂಷನ್ನನ್ನು ಕೊಡಬೇಕೆಂದು ಹೇಳುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಿ. ಡಬ್ಲ್ಯು. ಡಿ ನಲ್ಲಿ ಕೆಲಸ ತೆಗೆದುಕೊಳ್ಳಬೇಕಾದರೆ, ಹಣವಿದ್ದು, ಅಂದಾಜು ಮಂಜೂರಾಗಿ ನಮ್ಮ ಕೈಗೆ ಬಂದರೆ

ಮಾತ್ರ ಕೆಲಸ ತೆಗೆದುಕೊಳ್ಳುತ್ತೇವೆಯೇ ಏನಾ ಇನ್ನಾವ ರೀತಿಯ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ತಾವು ಈಗಾಗಲೇ ಮಾಡಿರತಕ್ಕದ್ದು, ಕೆಲವು ಕಡೆ ಜನರಲ್ ಹಾಸ್ಟೆಲುಗಳನ್ನು ಕಟ್ಟುವಾಗ ಈ ರೀತಿಯಾಗಿ ಜನಗಳಿಂದ ಬರುವಂತಹ ಕಾಂಟ್ರಿಬ್ಯುಷನ್ನನ್ನು ತೆಗೆದುಕೊಂಡು ಕಟ್ಟಬಹುದು.

Sri H. M. CHANNABASAPPA.—I want the Hon'ble Member to understand the position correctly. P. W. D. will not undertake any work asking for the contribution from the private parties nor do they ask them to contribute labour or anything like that.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಎಜುಕೇಷನ್ ಡಿಪಾರ್ಟುಮೆಂಟಿನಲ್ಲಿ ಈ ರೀತಿಯಾಗಿ ಕ್ವಾಂಟ್ರಿಬ್ಯುಷನ್ನನ್ನು ಕೊಡಬಹುದು ಎಂದಿದೆ. ತಮ್ಮ ಕಡೆ ಸ್ವಂತವಾಗಿ ಕೆಲಸಗಳನ್ನು ಮಾಡುವಾಗ ಇದನ್ನು ಯೋಚಿಸಬಹುದು.

Sri H. M. CHANNABASAPPA.—This is purely a business department which carries out work according to the rules of procedure. It would not be possible for the P.W.D. to distribute works to donors however good the intention may be. We cannot compel the donors to contribute labour. We cannot impose penalties and things of the kind. That is my difficulty.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಪಿ. ಡಬ್ಲ್ಯೂ. ಡಿ ಇಲಾಖೆಯಲ್ಲೂ ಎಜುಕೇಷನ್ನು ಇಲಾಖೆಯಲ್ಲಿರುವಂತೆ ಜನಗಳಿಂದ ಕಾಂಟ್ರಿಬ್ಯುಷನ್ನನ್ನೂ ಉಪಯೋಗಿಸಿಕೊಳ್ಳುವುದು ಒಳ್ಳೆಯದಲ್ಲವೇ ಎನ್ನುವುದನ್ನು ತಾವು ಪ್ರತ್ಯೇಕವಾಗಿ ಯೋಚನೆಮಾಡಿ ಎಂದು ಹೇಳುತ್ತೇನೆ.

ರಸ್ತೆಗಳ ವಿಂಗಡಣೆಯ ವಿಷಯದಲ್ಲಿ ರಸ್ತೆಗಳ ವಿಷಯದಲ್ಲಿ ಇರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕು, ನಾನಾರೀತಿಯ ರಸ್ತೆಗಳು ಬೇಕಿಲ್ಲ, ಎರಡು ತರಹ ರಸ್ತೆಗಳು ಎಂದರೆ, ಸ್ಟೇಟ್‌ಫಂಡ್ ರೋಡ್ ಮತ್ತು ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳಿರಬೇಕೆಂದು ವ್ಯವಸ್ಥೆ ಮಾಡಿ ಇದರ ಮೇಲೆ ಜಿಲ್ಲಾಬೋರ್ಡಿಗೆ ಸಂಬಂಧಪಟ್ಟ ರಸ್ತೆಗಳ ಕಾಮಗಾರಿಗಳನ್ನು ಜಿಲ್ಲಾಬೋರ್ಡ್ ಮಾಡಬೇಕು, ಸ್ಟೇಟ್ ಫಂಡ್‌ಗೆ ಸಂಬಂಧಪಟ್ಟ ಕಾಮಗಾರಿಗಳನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಮಾಡಬೇಕು, ಅದರ ಮೇಲೆ ಓಡಾಡತಕ್ಕ ಮೋಟಾರ್ ವೆಹಿಕಲ್ಸ್ ಮೇಲೆ ಹಾಕತಕ್ಕ ಟ್ಯಾಕ್ಸ್ ಆಯಾ ಡಿಸ್ಟ್ರಿಕ್ಟ್ ಬೋರ್ಡಿಗೇ ಹೋಗಬೇಕು, ಸ್ಟೇಟ್ ಫಂಡ್ ರೋಡಿನ ಮೇಲೆ ಓಡಾಡತಕ್ಕ ಮೋಟಾರುಗಳ ಮೇಲೆ ವಿಧಿಸತಕ್ಕ ವೆಹಿಕಲ್ಸ್ ಟ್ಯಾಕ್ಸ್ ಸರ್ಕಾರಕ್ಕೆ ಬರಬೇಕು ಎಂದು ತಾವೇ ರೋಡ್ ಕ್ಲಾಸಿಫಿಕೇಶನ್ ಸಮಿತಿಯಲ್ಲಿ ತೀರ್ಮಾನ ತೆಗೆದುಕೊಂಡಿರಿ. ಆದುದರಿಂದ ಷುಗರ್ ಕೇನ್‌ಸೆಸ್ ಮತ್ತು ವೆಹಿಕಲ್ಸ್‌ಸೆಸ್ ಫಂಡಿಗೆ,................ಹೇಳುತ್ತೇನೆ.

Sri H. M. CHANNABASAPPA.—The Hon'ble Member mistakes Local Bodies for Sugarcane Cess Fund. ಷುಗರ್‌ಕೇನ್ ಸೆಸ್ ಫಂಡಿನಿಂದ ಸರ್ಕಾರದವರು ರೋಡ್ಸನ್ನು ಮೇಂಟೇನ್ ಮಾಡುತ್ತಾರೆ, ಅಂದಾಕ್ಷಣ ಲೋಕಲ್ ಬಾಡೀಸ್‌ಗೆ ಯಾವ ರೀತಿ ಕಾಂಟ್ರಿ ಬ್ಯೂಷನ್ ಹೋಗುತ್ತದೋ ಆ ರೀತಿ ಷುಗರ್‌ಕೇನ್ ಸೆಸ್ ಫಂಡಿಗೆ ಕಾಂಟ್ರಿಬೂಷನ್ ಹೋಗಬೇಕು ಎನ್ನುವುದರಲ್ಲಿ ಅರ್ಥವಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನಾನು ಅದಕ್ಕೇ ಹೇಳುತ್ತಿದ್ದೇನೆ. ಸ್ಟೇಟ್ ಫಂಡ್ ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮೇಂಟೇನ್ ಮಾಡುತ್ತಿದ್ದಾರೆ. ಆ ರೀತಿ ಮೇಂಟೇನ್ ಮಾಡತಕ್ಕ ರೋಡಿನ ಮೇಲೆ ಬರತಕ್ಕ ವೆಹಿಕಲ್ಸ್ ಸೆಸ್ ಸರ್ಕಾರಕ್ಕೆ ಬರಬೇಕು ಎಂಬುದಾಗಿ ತೀರ್ಮಾನ ಮಾಡಿದ್ದಾರೆ. ಹಾಗೆಯೇ ಜಿಲ್ಲಾಬೋರ್ಡ್ ವೆಹಿಕಲ್ಸ್‌ಸೆಸ್ ಜಿಲ್ಲಾಬೋರ್ಡಿಗೆ ಬರಬೇಕಾದರೆ............

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರ ಅದನ್ನೇ ಮಾಡುತ್ತಾಇರುವುದು. Fund is also managed by Government.

ಶ್ರೀ ಜಿ. ಎಸ್. ಬೊಮ್ಮೇಗೌಡ.—ರಸ್ತೆಗಳ ಕಾಮಗಾರಿಯ ವಿಷಯದಲ್ಲಿ ಸರ್ಕಾರದವರು ಹಿಂದೆಯೇ ಉತ್ತರ ಕೊಟ್ಟಿದ್ದಾರೆ. ಮುಖ್ಯವಾಗಿ ರಸ್ತೆಗಳನ್ನು ಟಾರ್ ಮಾಡಬೇಕಾದಾಗ ಜಿಲ್ಲಾ ಮತ್ತು ತಾಲ್ಲೂಕು ಮುಖ್ಯ ಸ್ಥಳಗಳಲ್ಲಿ ಹೋಗತಕ್ಕ ರಸ್ತೆಗಳನ್ನು ಮೊದಲು ತೆಗೆದುಕೊಳ್ಳಬೇಕು. ಅದು ಬಹಳ ಮುಖ್ಯವಾದುದು, ಹಾಗೆ ನೋಡಿದರೆ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಮುಖ್ಯಸ್ಥಳಗಳಿಂದ ತಾಲ್ಲೂಕಿಗೆ ಹೋಗುವ ರಸ್ತೆ ಯಾವುದನ್ನು ಟಾರುಮಾಡುವುದಕ್ಕೆ ತೆಗೆದು ಕೊಂಡಿಲ್ಲ ಅದರ ವಿಷಯದಲ್ಲಿ ಸರ್ಕಾರದವರು ಏಕೆ ಮರೆತು ಬಿಟ್ಟರೋ ತಿಳಿಯದು. ಆ ಒಂದು ಶಂಕೆಯನ್ನು ನಮ್ಮಿಂದ ದೂರವಾಗುವ ಹಾಗೆ ಸರ್ಕಾರದವರು ಮಾಡಬೇಕು ಎಂಬುದಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಈದಿವಸ ಅಲ್ಲಲ್ಲಿ ಕೇಳಿ ಬರುವ ಕೂಗು ಬಹಳ ಆಶ್ಚರ್ಯವಾಗಿದೆ. ಅಲ್ಲಿ ಹಾಗೆ ಮಾಡಿದರು, ಇಲ್ಲಿ ಹೀಗೆ ಮಾಡಿದರು ಎಂಬ ಲೋಪದೋಷಗಳು ಕೇಳಿಬರುತ್ತಿವೆ. ನಿಷ್ಠಾವಂತರಾಗಿ ಕೆಲಸ ಮಾಡತಕ್ಕ ತಾವು ಸಬ್ ಓವರ್‌ಸಿಯರ್, ಚೀಫ್ ಇಂಜನಿಯರ್ ಅವರಿಗೆ ವರ್ಷೇವರ್ಷೇ ಯಾವ ಯಾವ ಕಾಲಕ್ಕೆ ಹುದ್ದೆಗಳು ಬರಬೇಕಾಗಿವೆಯೋ ಆ ಹುದ್ದೆಗಳು ಅವರಿಗೆ ತಪ್ಪದಹಾಗೆ ಸೇರಿ ಅವರಿಂದ ಕೆಲಸ ತೆಗೆದು ಕೊಳ್ಳುವ ವ್ಯವಸ್ಥೆಮಾಡುವುದು ಒಳ್ಳೆಯದು. ಅದು ಬಹಳ ಮುಖ್ಯ; ಅಧಿಕಾರ ಸಿಕ್ಕಿದೆಯೆಂದು ತಾವೇ ಕೆಲವು ಕಡೆ ಆ ಹುದ್ದೆಗಳು ಮೇಲಿಂದ ಕೆಳಗೆ, ಕೆಳಗಿನಿಂದ ಮೇಲೆ ಇನ್ನೊಬ್ಬನನ್ನು ತಪ್ಪಿಸಿ, ಅವರಿಂದ ಇವರಿಗೆ ಇವರಿಂದ ಅವರಿಗೆ ಕೊಡುವುದು ಸರಿಯಲ್ಲ.

Sri H. M. CHANNABASAPPA.—In the Public Works Department to my knowledge nothing of that kind as you say has taken place. If the Hon'ble Member has any such instances, he may come and tell me. I will enquire.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಅಂಥಾದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಂತಹ ಲೋಪದೋಷಗಳಾಗದಂತೆ ನೋಡಿಕೊಳ್ಳಬೇಕೆಂಬ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ.

Sri H. M. CHANNABASAPPA.—If instances are given I will examine them.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಗ್ರಾಮಗಳಿಗೆ ಹೋಗತಕ್ಕ ರಸ್ತೆಗಳಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಈಗಾಗಲೇ 11 ವರ್ಷಗಳು ಕಳೆದುವು. ಆದರೂ ಕೂಡ ಕೆಲವು ಗ್ರಾಮಗಳಿಗೆ ಹೋಗುವುದಕ್ಕೆ ರಸ್ತೆ ಇಲ್ಲ ಪ್ರಜಾಪ್ರಭುತ್ವವನ್ನು ಹೊಂದಿರತಕ್ಕ ನಾವು ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೇ ಕಷ್ಟವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಯಾವ ಗ್ರಾಮಕ್ಕೆ ರಸ್ತೆ ಇಲ್ಲವೋ ಅಂತಹ ಗ್ರಾಮಾಂತರ ಪ್ರದೇಶಗಳಲ್ಲಿ ಮೊದಲು ರಸ್ತೆಗಳಾಗಬೇಕಾಗಿದೆ. ಈ ವಿಷಯದಲ್ಲಿ ಸರ್ಕಾರದವರು ಹೆಚ್ಚು ನಿಗಾಕೊಟ್ಟು ಕೂಡಲೇ ರಸ್ತೆಗಳಾಗುವುದಕ್ಕೆ ಪ್ರಯತ್ನ ಮಾಡಬೇಕು.

ಇಷ್ಟುಹೊತ್ತು ನಾನು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕಾಗಿ ಸಭಾಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I think it is time for us to rise.

Letter from a Hon'ble Member.

Mr. SPEAKER.—I have received a letter of apology from Sri Pattan. It is as follows :—

" ನಾನು ಈ ಮೊದಲು ಇದೇ ಬಡ್ಜೆಟ್ ಅಧಿವೇಶನದಲ್ಲಿ ಪೋಲೀಸ್ ಡಿಮ್ಯಾಂಡ್ ಮೇಲೆ ಮಾತನಾಡುವಾಗ್ಗೆ " ಈ ಸಭೆಯನ್ನು ಧಿಕ್ಕರಿಸುತ್ತೇನೆ " ಅಂತ ಮಾತನಾಡಿದ್ದು ಉದ್ದೇಶಪೂರ್ವಕವಾಗಿರುವುದಿಲ್ಲ. ಮಾತನಾಡುವ ಆವೇಶದಲ್ಲಿ ಹಾಗೆ ಬಂದುದಕ್ಕೆ ನಾನು ವಿಷಾದಿಸುತ್ತೇನೆ. ನಾನು ಈ ಮಾನ್ಯ ಸಭೆಯ ಮೆಂಬರನಿದ್ದು ಈ ಸಭೆಯ ಗೌರವವನ್ನು ಕಾಪಾಡುವ ಅಭಿಮಾನ ಕೂಡಾ ನನ್ನದು ಇರುತ್ತದೆ. ಕಾರಣ ನಾನು ಮೇಲ್ಕಾಣಿಸಿದಂತೆ ಅಥವಾ ಅಂತಹ ಅರ್ಥ ಬರುವ ಯಾವುದೇ ಶಬ್ದಗಳನ್ನು ಈ ಮೂಲಕ ಪರತತಕ್ಕೊಳ್ಳುತ್ತೇನೆ."

Sri C. J. MUCKANNAPPA.—One clarification.

ಅಧ್ಯಕ್ಷರು.—ಕೊಡುವವರು ಅವರು ಕೊಟ್ಟರೆ ಏತಕ್ಕೆ ಬೇಡವೆಂದು ಹೇಳುತ್ತೀರಾ ? I have got this letter from him. I do not know why you want a clarification.

The House now rises and will meet to-morrow at 1 P.M.

The House adiourned at Fifteen Minutes past Six of the Clock to meet again at One of the Clock on Wednesday, the 13th April 1960.